ಶನಿವಾರ, ಜೂನ್ 18, 2022 | ₹ 6.00

www.prajavani.net

/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಮೋಹಕ ನಗೆ

ಮುಂಬೈನಲ್ಲಿ ನಡೆದ ಪ್ರಶಸ್ತಿ ಪ್ರದಾನ ಸಮಾರಂಭವೊಂದರಲ್ಲಿ ಬಾಲಿವುಡ್ ನಟಿ ಜಾನ್ವಿ ಕಪೂರ್ ಮೋಹಕ ನಗೆ ಬೀರಿದರು

© Inter IKEA Systems B.V. 2021

ನಾವು ನಿಮ್ಮನ್ನು ಸ್ವಾಗತಿಸಲು ತಯಾರಾಗುತ್ತಿದ್ದೇವೆ!

ಜೂನ್ 22 ರಂದು ನಾಗಸಂದ್ರದಲ್ಲಿ ಆರಂಭವಾಗಲಿದೆ.

ಬೆಂಗಳೂರಿನಲ್ಲಿ 7000+ ಹ್ಯಾಪ್ಪೀ ಹೋಮ್ ಫರ್ನಿಶಿಂಗ್ ಪ್ರೊಡಕ್ಟ್ಸ್,
1000 ಸೀಟರ್ ರೆಸ್ಟಾರಂಟ್, ಮಕ್ಕಳಿಗಾಗಿ ಸ್ಮಾಲ್ಯಾಂಡ್ ಪ್ಲೇ ಏರಿಯಾ,
ಆಕರ್ಷಕ ರೂಮ್ ಸೆಟ್-ಅಪ್ಸ್ ಮತ್ತು ಹೆಚ್ಚಿನ ಉತ್ಪನ್ನಗಳೊಂದಿಗೆ ನಾವು ನಮ್ಮ ಹೊಸ
4.6 ಲಕ್ಷ ಚ.ಅಡಿ ಶೋರೂಮನ್ನು ತಯಾರಿಸುವುದರಲ್ಲಿ ತಲ್ಲೀನರಾಗಿದ್ದೇವೆ.
ನಿಮ್ಮನ್ನು ಭೇಟಿಯಾಗಲು ನಾವು ಆತುರದಿಂದ ಕಾಯುತ್ತಿದ್ದೇವೆ.

Scan to join the
IKEA Family club for free

IKEA®

Home furnishings

ಶನಿವಾರ, ಜೂನ್ 18, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 168 | ಪುಟ 22
● www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭೂಮಿಕಾ
ಡಿಜಿಟಲ್ ಗೇಮ್ಸ್ ವ್ಯಸನ ಅತ್ಯಂತ ಅಪಾಯಕಾರಿ. ಮಕ್ಕಳಲ್ಲಿ ಹೇಗೆ ಈ ವ್ಯಸನ ಅಂಟಿಕೊಳ್ಳುತ್ತದೆ. ಇದಕ್ಕೆ ಪೋಷಕರು ಕೈಗೊಳ್ಳಬೇಕಾದ ಕ್ರಮಗಳೇನು – ಈ ಕುರಿತ ಮಾಹಿತಿ ಇಲ್ಲಿದೆ



ಚರ್ಚೆ
ಸೇನೆಯಲ್ಲಿ ನಾಲ್ಕು ವರ್ಷಗಳ ಅಲ್ಪಾವಧಿ ಕರ್ತವ್ಯದ ಅಗ್ನಿಪಥ ಯೋಜನೆ ಕಾರ್ಯಸಾಧುವೇ?

ದೆಹಲಿ: ಪ್ರತಿಭಟನೆಗೆ ವಿದ್ಯಾರ್ಥಿಗಳ ಸೇರ್ಪಡೆ 6
ಅನಧಿಕೃತ ಧ್ವನಿವರ್ಧಕ ತೆರವುಗೊಳಿಸಿ 9

ಸೆನ್ಸೆಕ್ಸ್	ನಿಫ್ಟಿ	₹/$
51,360 ▼	15,293 ▼	78.05 ▲



ಇಂದು ದ್ವಿತೀಯ ಪಿಯುಸಿ ಫಲಿತಾಂಶ

ಬೆಂಗಳೂರು: ದ್ವಿತೀಯ ಪಿಯುಸಿ ಫಲಿತಾಂಶ ಶನಿವಾರ (ಜೂ.18) ಪ್ರಕಟವಾಗಲಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ಬೆಳಿಗ್ಗೆ 11ಕ್ಕೆ ಸುದ್ದಿಗೋಷ್ಠಿಯಲ್ಲಿ ಫಲಿತಾಂಶ ಪ್ರಕಟಿಸಲಿದ್ದು, ವಿದ್ಯಾರ್ಥಿಗಳು ಮಧ್ಯಾಹ್ನ 12ಕ್ಕೆ www.karresults.nic.in ವೆಬ್‌ಸೈಟ್ ಮೂಲಕ ಫಲಿತಾಂಶ ವೀಕ್ಷಿಸಬಹುದು.

6,84,255 ವಿದ್ಯಾರ್ಥಿಗಳು ಪರೀಕ್ಷೆ ನೋಂದಣಿ ಮಾಡಿದ್ದರು. ಪರೀಕ್ಷೆ ಬರೆದ ವಿದ್ಯಾರ್ಥಿಗಳ ಮೊಬೈಲ್ ಸಂಖ್ಯೆಗೂ ಎಸ್‌ಎಂಎಸ್ ಮೂಲಕ ಫಲಿತಾಂಶ ಕಳುಹಿಸಲಾಗುತ್ತದೆ.

ಚಿನಕುರಳಿ
ಪ್ರಕಾಶ್ ಶೆಟ್ಟಿ

‘ಅಗ್ನಿಪಥ’ಕ್ಕೆ ವಿರೋಧ: ಸಿಕಂದರಾಬಾದ್‌ನಲ್ಲಿ ಗೋಲಿಬಾರ್‌ಗೆ ಒಬ್ಬ ಬಲಿ

ಪ್ರತಿರೋಧ ಹಲವೆಡೆ ವಿಸ್ತರಣೆ

ಸಿಕಂದರಾಬಾದ್ / ನವದೆಹಲಿ / ಕೋಲ್ಕತ್ತ (ಪಿಟಿಐ): ರಕ್ಷಣಾ ಪಡೆಗಳಲ್ಲಿ ನಾಲ್ಕು ವರ್ಷಗಳ ಅಲ್ಪಾವಧಿ ನೇಮಕಾತಿಯ ‘ಅಗ್ನಿಪಥ’ ಯೋಜನೆ ವಿರುದ್ಧದ ಪ್ರತಿಭಟನೆ ತೀವ್ರಗೊಂಡಿದೆ ಮತ್ತು ಹಲವು ರಾಜ್ಯಗಳಿಗೆ ವ್ಯಾಪಿಸಿದೆ. ತೆಲಂಗಾಣದ ಸಿಕಂದರಾಬಾದ್ ರೈಲು ನಿಲ್ದಾಣಕ್ಕೆ ಶುಕ್ರವಾರ ನುಗ್ಗಿದ ಪ್ರತಿಭಟನಕಾರರು ಕೆಲವು ರೈಲುಗಳ ಬೋಗಿಗಳಿಗೆ ಬೆಂಕಿ ಇಟ್ಟಿದ್ದಾರೆ. ಸರ್ಕಾರಿ ಮತ್ತು ಖಾಸಗಿ ಸೊತ್ತುಗಳನ್ನು ಹಾಳುಗೆಡವಿದ್ದಾರೆ. ಪ್ರತಿಭಟನೆಗೆ ಬೆದರಿದ ಪ್ರಯಾಣಿಕರು ದಿಕ್ಕಾಪಾಲಾಗಿ ಓಡಿದ್ದಾರೆ. ಗುಂಪು ಚದುರಿಸಲು ಪೊಲೀಸರು ನಡೆಸಿದ ಗೋಲಿಬಾರ್‌ನಲ್ಲಿ ಒಬ್ಬ ವ್ಯಕ್ತಿ ಮೃತಪಟ್ಟಿದ್ದಾರೆ.

ಮಧ್ಯ ಪ್ರದೇಶದ ಇಂದೋರ್‌ನಲ್ಲಿ ನೂರಾರು ಪ್ರತಿಭಟನಕಾರರು ರೈಲು ನಿಲ್ದಾಣದ ಸಮೀಪ ರೈಲು ತಡೆ ನಡೆಸಿದರು. ಪ್ರತಿಭಟನೆಯು ಹಿಂಸೆಗೆ ತಿರುಗಿತು. ಪ್ರತಿಭಟನಕಾರರ ಕಲ್ಲುತೂರಾಟದಿಂದ ಇಬ್ಬರು ಪೊಲೀಸರು ಗಾಯಗೊಂಡಿದ್ದಾರೆ. ಇಲ್ಲಿ 15 ಮಂದಿಯನ್ನು ಬಂಧಿಸಲಾಗಿದೆ.

ಬಿಹಾರ ಮತ್ತು ಜಾರ್ಖಂಡ್‌ನಲ್ಲಿ ಬುಧವಾರ ಆರಂಭಗೊಂಡ ಪ್ರತಿಭಟನೆಯು ಶುಕ್ರವಾರದ ಹೊತ್ತಿಗೆ ಒಡಿಶಾ, ಪಶ್ಚಿಮ ಬಂಗಾಳ, ತೆಲಂಗಾಣ ಮತ್ತು ಇತರ ರಾಜ್ಯಗಳಿಗೂ ವ್ಯಾಪಿಸಿದೆ. ಬಿಹಾರ ಉಪಮುಖ್ಯಮಂತ್ರಿ ರೇಣು ದೇವಿ, ಬಿಹಾರ ಬಿಜೆಪಿ ಘಟಕದ ಅಧ್ಯಕ್ಷ ಸಂಜಯ್ ಜೈಸ್ವಾಲ್ ಅವರ ನಿವಾಸ ಮತ್ತು ಬಿಜೆಪಿ ಶಾಸಕರೊಬ್ಬರ ಕಾರಿನ ಮೇಲೆ ಪ್ರತಿಭಟನಕಾರರು ದಾಳಿ ನಡೆಸಿದ್ದಾರೆ. ರಾಜ್ಯದ ವಿವಿಧೆಡೆ ರೈಲ್ವೆ ಸೊತ್ತುಗಳ ಜತೆಗೆ, ಸರ್ಕಾರದ ಇತರ ಸೊತ್ತುಗಳನ್ನೂ ಪ್ರತಿಭಟನಕಾರರು ಧ್ವಂಸ ಮಾಡಿದ್ದಾರೆ.

ಅಗ್ನಿಪಥ ಯೋಜನೆ ವಿರುದ್ಧ ಪ್ರತಿಭಟಿಸಿದ ಗುಂಪೊಂದು ಲಖಿಸರಾಯ್‌ನಲ್ಲಿ ವಿಕ್ರಮಶಿಲಾ ಎಕ್ಸ್‌ಪ್ರೆಸ್ ರೈಲಿಗೆ ಶುಕ್ರವಾರ ಬೆಂಕಿ ಹಚ್ಚಿತು —ಪಿಟಿಐ ಚಿತ್ರ

ತಮ್ಮ ನಿವಾಸದ ಮೇಲೆ ದಾಳಿ ನಡೆಸಿದವರು ರಕ್ಷಣಾ ಪಡೆಗಳ ಉದ್ಯೋಗಾಕಾಂಕ್ಷಿಗಳಲ್ಲ, ಅವರೆಲ್ಲರೂ ವಿರೋಧ ಪಕ್ಷಗಳು ಉತ್ತೇಜಿಸಿ ಕಳುಹಿಸಿದ ಗೂಂಡಾಗಳು ಎಂದು ರೇಣು ದೇವಿ ಹೇಳಿದ್ದಾರೆ. ಜೈಸ್ವಾಲ್ ಅವರೂ ಇದೇ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ. ತಮ್ಮ ನಿವಾಸದ ಕಟ್ಟಡವನ್ನು ಸ್ಫೋಟಿಸುವುದು ಅವರ ಉದ್ದೇಶವಾಗಿತ್ತು. ದಾಳಿ ನಡೆಸಿದ ಹಲವರನ್ನು ಗುರುತಿಸಿದ್ದೇನೆ ಎಂದು ಜೈಸ್ವಾಲ್ ಅವರು ಹೇಳಿದ್ದಾರೆ.

ಪಶ್ಚಿಮ ಬಂಗಾಳದಲ್ಲಿಯೂ ಆಕ್ರೋಶ ತೀವ್ರಗೊಂಡಿದೆ. ಕೇಂದ್ರ ಸಚಿವ ಶಂತನು ಠಾಕೂರ್ ಅವರ ಮನೆಗೆ ನುಗ್ಗಲು ಪ್ರತಿಭಟನಕಾರರು ಯತ್ನಿಸಿದ್ದಾರೆ. ಒಡಿಶಾದ ಕಂಟೋನ್ಮೆಂಟ್ ಪ್ರದೇಶದಲ್ಲಿಯೂ ಪ್ರತಿಭಟನೆ ನಡೆದಿದೆ.

ಪಟ್ನಾ ಹೊರವಲಯದಲ್ಲಿರುವ ದೀದಾರ್‌ಗಂಜ್ ಟೋಲ್ ಕೇಂದ್ರವನ್ನು ಧ್ವಂಸಗೊಳಿಸಲಾಗಿದೆ. ನವಾಡದಲ್ಲಿ ಪೊಲೀಸ್ ಜೀಪ್‌ಗೆ ಬೆಂಕಿ ಹಚ್ಚಲಾಗಿದೆ.

6ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 6

2 ದಿನದಲ್ಲಿ ನೇಮಕಾತಿ ಪ್ರಕ್ರಿಯೆ

ಅಗ್ನಿಪಥ ಯೋಜನೆ ಅಡಿ ಸೈನಿಕರ ನೇಮಕಾತಿ ಪ್ರಕ್ರಿಯೆಯನ್ನು ಭೂಸೇನೆಯು ಎರಡು ದಿನಗಳಲ್ಲಿ ಆರಂಭಿಸಲಿದೆ ಎಂದು ಅಧಿಕಾರಿಗಳು ಹೇಳಿದ್ದಾರೆ. ಅಧಿಸೂಚನೆಯ ಬಳಿಕ, ಸೇನೆಯ ವಿವಿಧ ಘಟಕಗಳು ನೇಮಕಾತಿ ಪ್ರಕ್ರಿಯೆಯ ವಿವರಗಳನ್ನು ಪ್ರಕಟಿಸಲಿವೆ. ಖಾಲಿ ಇರುವ ಹುದ್ದೆಗಳ ಸಂಖ್ಯೆ, ನೇಮಕಾತಿ ಕೇಂದ್ರಗಳು, ಪರೀಕ್ಷಾ ವೇಳಾಪಟ್ಟಿ ಮತ್ತು ಇತರ ಮಾಹಿತಿ ಪ್ರಕಟವಾಗಲಿದೆ.

ಹೊಸದಾಗಿ ನೇಮಕಗೊಂಡವರಿಗೆ ಇದೇ ಡಿಸೆಂಬರ್ ಹೊತ್ತಿಗೆ ತರಬೇತಿ ಆರಂಭವಾಗಬೇಕು ಮತ್ತು 2023ರ ಜೂನ್‌ಗೆ ಅವರು ಸೇನೆಗೆ ಸೇರ್ಪಡೆಯಾಗಬೇಕು ಎಂಬ ಗುರಿ ಇರಿಸಿಕೊಳ್ಳಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ನೌಕಾ ಪಡೆ ಮತ್ತು ವಾಯು ಪಡೆ ಕೂಡ ನೇಮಕಾತಿ ಪ್ರಕ್ರಿಯೆಯನ್ನು ಮುಂದಿನ ವಾರ ಆರಂಭಿಸಲಿವೆ.

234 ರೈಲು ರದ್ದು, 7 ರೈಲುಗಳಿಗೆ ಹಾನಿ

ನವದೆಹಲಿ: ಅಗ್ನಿಪಥ ಯೋಜನೆ ವಿರುದ್ಧದ ಪ್ರತಿಭಟನೆ ಹಿನ್ನೆಲೆಯಲ್ಲಿ ರೈಲ್ವೆ ಇಲಾಖೆಯು ದೇಶದ ವಿವಿಧೆಡೆ ಒಟ್ಟು 234 ರೈಲುಗಳ ಸಂಚಾರ ರದ್ದುಪಡಿಸಿದೆ. ಅಲ್ಲದೆ 340 ರೈಲುಗಳ ಸಂಚಾರಕ್ಕೆ ಧಕ್ಕೆಯಾಗಿದೆ.

94 ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲುಗಳು, 140 ಪ್ಯಾಸೆಂಜರ್ ರೈಲುಗಳ ಸಂಚಾರ ರದ್ದುಪಡಿಸಲಾಗಿದೆ. ಉಳಿದಂತೆ 65 ಮೇಲ್ ಮತ್ತು ಎಕ್ಸ್‌ಪ್ರೆಸ್ ಮತ್ತು 30 ಪ್ಯಾಸೆಂಜರ್ ರೈಲುಗಳ ಸಂಚಾರವನ್ನು ಭಾಗಶಃ ರದ್ದುಪಡಿಸಲಾಗಿದೆ ಎಂದು ಹೇಳಿಕೆ ತಿಳಿಸಿದೆ. ಬಿಹಾರ ಮತ್ತು ಉತ್ತರ ಪ್ರದೇಶದ ಪೂರ್ವ ಭಾಗಕ್ಕೆ ಸಂಚರಿಸುವ ಎಲ್ಲ ರೈಲುಗಳನ್ನು ಸದ್ಯಕ್ಕೆ ನಿಲ್ಲಿಸಲಾಗಿದೆ ಎಂದು ದಕ್ಷಿಣ ರೈಲ್ವೆ ತಿಳಿಸಿದೆ. ಬಿಹಾರ, ಜಾರ್ಖಂಡ್, ಒಡಿಶಾ ಮತ್ತು ಉತ್ತರ ಪ್ರದೇಶ ರಾಜ್ಯಗಳಲ್ಲಿ ಹೆಚ್ಚಿನ ಹಾನಿ ಉಂಟಾಗಿದೆ.

21 ಅಧಿಕಾರಿಗಳ ಮೇಲೆ ಎಸಿಬಿ ದಾಳಿ

₹1.92 ಕೋಟಿ ನಗದು, 13 ಕೆ.ಜಿ ಚಿನ್ನಾಭರಣ ವಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪದ ಮೇಲೆ ಇಬ್ಬರು ನಿವೃತ್ತರೂ ಸೇರಿದಂತೆ 21 ಅಧಿಕಾರಿಗಳಿಗೆ ಸಂಬಂಧಿಸಿದ 80 ಸ್ಥಳಗಳ ಮೇಲೆ ಶುಕ್ರವಾರ ಏಕಕಾಲಕ್ಕೆ ದಾಳಿಮಾಡಿ ಶೋಧ ನಡೆಸಿರುವ ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ₹1.92 ಕೋಟಿ ನಗದು ಮತ್ತು 13 ಕೆ.ಜಿ ಚಿನ್ನಾಭರಣ ವಶಪಡಿಸಿಕೊಂಡಿದೆ.

ರಾಜ್ಯದ 20ಕ್ಕೂ ಹೆಚ್ಚು ಜಿಲ್ಲೆಗಳಲ್ಲಿ ಎಸಿಬಿ ಅಧಿಕಾರಿಗಳ ಕಾರ್ಯಾಚರಣೆ ನಡೆದಿದ್ದು, ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ಸರ್ಕಾರಿ ನೌಕರರು ಭಾರಿ ಪ್ರಮಾಣದ ಆಸ್ತಿ ಹೊಂದಿರುವುದನ್ನು ಪತ್ತೆಮಾಡಿದ್ದಾರೆ. ಕೆಲವು ಅಧಿಕಾರಿಗಳು ಬೆಂಗಳೂರು ಸೇರಿದಂತೆ ವಿವಿಧ ನಗರಗಳ ವ್ಯಾಪ್ತಿಯಲ್ಲಿ ಬಹುಕೋಟಿ ರೂಪಾಯಿ ಮೌಲ್ಯದ ಸ್ಥಿರಾಸ್ತಿಗಳನ್ನು ಹೊಂದಿರುವ ದಾಖಲೆಗಳನ್ನು ತನಿಖಾ ತಂಡ ಪತ್ತೆಹಚ್ಚಿದೆ.

ಬಾಗಲಕೋಟೆಯ ಪ್ರಾದೇಶಿಕ ಸಾರಿಗೆ ಅಧಿಕಾರಿ ಯಲ್ಲಪ್ಪ ಪಡಸಾಲಿ ಮನೆಯಲ್ಲಿ ಬರೋಬ್ಬರಿ ₹ 62 ಲಕ್ಷ ನಗದು ಪತ್ತೆಯಾಗಿದೆ. 30 ಲೀಟರ್‌ನಷ್ಟು ಮದ್ಯದ ಬಾಟಲಿಗಳನ್ನೂ ಇವರ ಮನೆಯಿಂದ ವಶಕ್ಕೆ ಪಡೆಯಲಾಗಿದೆ. ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಸಹಾಯಕ ಮಹಾನಿರೀಕ್ಷಕ ಮಧುಸೂದನ್ ವಿ. ಮನೆಯಲ್ಲಿ ₹ 39 ಲಕ್ಷ ನಗದನ್ನು ಎಸಿಬಿ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಸಣ್ಣ ನೀರಾವರಿ ಇಲಾಖೆಯ ಚಿಕ್ಕಬಳ್ಳಾಪುರ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್ ಎ. ಮೋಹನ್ ಕುಮಾರ್ ಮನೆಯಲ್ಲಿ ₹ 13.50 ಲಕ್ಷ ನಗದು ಸಿಕ್ಕಿದೆ. ಇವರು ಇವರು ಬೆಂಗಳೂರು ನಗರದಲ್ಲೇ ಹತ್ತು ಸ್ಥಿರಾಸ್ತಿಗಳನ್ನು ಹೊಂದಿರುವುದನ್ನು ಎಸಿಬಿ ಅಧಿಕಾರಿಗಳು ಪತ್ತೆಮಾಡಿದ್ದಾರೆ.

ಶೌಚಾಲಯದಲ್ಲಿ ಹಣ: ಬೆಳಗಾವಿಯ ಲೋಕೋಪಯೋಗಿ ಇಲಾಖೆಯ ಸೂಪರಿಂಟೆಂಡಿಂಗ್ ಎಂಜಿನಿಯರ್ ಭೀಮರಾವ್ ಯಶವಂತ ಪವಾರ ಮನೆಯಲ್ಲಿ ₹ 8.50 ಲಕ್ಷ ನಗದು ಪತ್ತೆಯಾಗಿದೆ. ಎಸಿಬಿ ಅಧಿಕಾರಿಗಳು ಶೋಧಕ್ಕಾಗಿ ಮನೆಯ ಬಾಗಿಲು ಬಡಿಯುತ್ತಿದ್ದಂತೆ ₹ 5 ಲಕ್ಷ ನಗದನ್ನು ಪ್ಲಾಸ್ಟಿಕ್ ಕವರ್‌ನಲ್ಲಿ ತುಂಬಿ ಶೌಚಾಲಯದಲ್ಲಿ ಅವಿತಿಟ್ಟಿದ್ದರು. ಅದನ್ನೂ ತನಿಖಾ ತಂಡ ಪತ್ತೆಮಾಡಿದೆ.

ಸದ್ಯ ಅಮಾನತ್ತಿನಲ್ಲಿರುವ ಪೊಲೀಸ್ ಇನ್‌ಸ್ಪೆಕ್ಟರ್ ಉದಯ ರವಿ (ಹಿಂದೆ ಗಂಗಾವತಿ ಗ್ರಾಮೀಣ ಪೊಲೀಸ್ ಠಾಣೆ) ಮನೆಯಲ್ಲಿ ₹ 13.96 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ.

6ನೇ ಪುಟ ನೋಡಿ



ADVERTISEMENT FOR THE POST

1. Applications are invited from eligible candidates for filing up the following posts at ASHA School (Centre for Differently Abled Children), Bangalore, C/o. HQ K & K Sub Area, Cubbon Road, Bangalore-01. Candidates who fulfill the following criteria may apply:-

Ser No.	Post	No of Post	Qualification	Experience	Honorarium per month
a)	Special Educator	02	Degree in Special Education	Min. 02 Years	Rs. 15,000-Rs. 18,000.
(b)	Speech Therapist	01	Degree in Speech Therapy	Min. 02 Years	Rs. 18,000-Rs. 22,000
(c)	Ayahs	02			Rs.9,000

2. Candidates who fulfill the above criteria may forward their applications with Bio-Data on **email: ashaschoolblr@gmail.com** and a hard copy via post by 30 Jun 2022.
3. Contact Address: **Colonel Anand Misra, OIC, ASHA School, HQ Karnataka & Kerala Sub Area, Cubbon Road, Bangalore- 560 001. Mob: 94824078376**

ಹೊಸಕೋಟೆ ಯೋಜನಾ ಪ್ರಾಧಿಕಾರ

ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ. ದೂರವಾಣಿ/ಫ್ಯಾಕ್ಸ್: 080-27934470/27935412
E-mail: hosakote.pa@gmail.com URL: www.hoskote-tpa.gov.in

ಸಂಖ್ಯೆ:ಹೊಯೋಪ್ರಾ/ಭೂ.ಪ.ಅ/ಆನ್ ಲೈನ್/ಎಂ.ಪಿ/12 & 13/2022-23 ದಿನಾಂಕ: 15-06-2022

ಪ್ರಕಟಣೆ

ವಿಷಯ: ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ದೊಡ್ಡನಲ್ಲಾಳ (ಬೆ) ಗ್ರಾಮದ ಸ.ನಂ. 14/2 ರಲ್ಲಿನ 01 ಎಕರೆ 01 ಗುಂಟೆ ಮತ್ತು ಸ.ನಂ. 96/2 ರಲ್ಲಿನ 01 ಎಕರೆ 20 ಗುಂಟೆ ಒಟ್ಟು 02 ಎಕರೆ 21 ಗುಂಟೆ ವಿಸ್ತೀರ್ಣದ ಜಮೀನುಗಳನ್ನು ಕೃಷಿ [ಎಜುಕೇಷನಲ್ ಇನ್ಸಿಟ್ಯೂಷನ್ (ಶಾಲೆ / ಕಾಲೇಜು)] ಉದ್ದೇಶಕ್ಕೆ ಭೂ ಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ನೀಡಲು ಕೋರಿರುವ ಬಗ್ಗೆ.

ಉಲ್ಲೇಖ: 1) ಜಿಲ್ಲಾಧಿಕಾರಿಗಳು, ಬೆಂಗಳೂರು ಗ್ರಾಮಾಂತರ ಜಿಲ್ಲೆ ರವರ ಆನ್ ಲೈನ್ ಅಫಿಡವಿಟ್ ನಂ. 419420 & 419425 ಲ್ಯಾಂಡ್‌ಕನ್‌ವರ್ಷನ್ ಸಂ: 335830 & 335832, ದಿನಾಂಕ: 08.04.2022. (ಮಹಮದ್ ಖಾನ್ ಎಜುಕೇಷನಲ್ ಆಂಡ್ ಛಾರಿಟೆಬಲ್ ಟ್ರಸ್ಟ್‌ನ ಅಧ್ಯಕ್ಷರಾದ ಖಲಿದಾ ಕಾನುಮ್)
2) ಸರ್ಕಾರದ ಸುತ್ತೋಲೆ ಸಂಖ್ಯೆ: ನಅಇ 237 ಬೆಮಪ್ರಾ 2009, ದಿನಾಂಕ: 19.09.2009.

ಬೆಂಗಳೂರು ಗ್ರಾಮಾಂತರ ಜಿಲ್ಲೆ, ಹೊಸಕೋಟೆ ತಾಲ್ಲೂಕು, ಜಡಿಗೇನಹಳ್ಳಿ ಹೋಬಳಿ, ದೊಡ್ಡನಲ್ಲಾಳ (ಬೆ) ಗ್ರಾಮದ ಸ.ನಂ. 14/2 ರಲ್ಲಿನ 01 ಎಕರೆ 01 ಗುಂಟೆ ಮತ್ತು ಸ.ನಂ. 96/2 ರಲ್ಲಿನ 01 ಎಕರೆ 20 ಗುಂಟೆ ಒಟ್ಟು 02 ಎಕರೆ 21 ಗುಂಟೆ ವಿಸ್ತೀರ್ಣದ ಜಮೀನುಗಳನ್ನು ಕೃಷಿ [ಎಜುಕೇಷನಲ್ ಇನ್ಸಿಟ್ಯೂಷನ್ (ಶಾಲೆ / ಕಾಲೇಜು)] ಉದ್ದೇಶಕ್ಕೆ ಭೂ ಪರಿವರ್ತನೆಗೆ ತಾಂತ್ರಿಕ ಅಭಿಪ್ರಾಯ ನೀಡಲು ಉಲ್ಲೇಖ (1) ರ ಪತ್ರದಲ್ಲಿ ಕೋರಲಾಗಿದೆ. **ಪ್ರಸ್ತಾಪಿತ, ಜಮೀನನ್ನು ಹೊಸಕೋಟೆ ಸ್ಥಳೀಯ ಯೋಜನಾ ಪ್ರದೇಶಕ್ಕೆ ಸರ್ಕಾರದಿಂದ ಅನುಮೋದನೆ ಆಗಿರುವ ಮಹಾ ಯೋಜನೆಯಂತೆ ಸದರಿ ಜಮೀನುಗಳನ್ನು ಕೃಷಿ ವಲಯದಲ್ಲಿ ಕಾಯ್ದಿರಿಸಲಾಗಿದೆ.** ಅನುಮೋದಿತ ಮಹಾಯೋಜನೆಯ ವಲಯ ನಿಯಮಾವಳಿಯಂತೆ ಕೃಷಿ ವಲಯದ ವಿಶೇಷ ಸಂದರ್ಭಗಳಲ್ಲಿ ಕೃಷಿ ವಲಯದಲ್ಲಿ ಎಜುಕೇಷನಲ್ ಇನ್ಸಿಟ್ಯೂಷನ್ ಉದ್ದೇಶಕ್ಕಾಗಿ ಕಟ್ಟಡದ ಗರಿಷ್ಠ ಕ್ಷೇತ್ರಾವರಿಸುವಿಕೆ ಶೇ 15 ಕ್ಕೆ ಹಾಗೂ ನೆಲ + ಮೊದಲನೇ ಮಹಡಿಗೆ ಮಿತಿಗೊಳಿಸಿ ಅನುಮತಿಸಲು ಸ್ಪೇಸ್ ಸ್ಟಾಂಡರ್ಡ್ಸ್ (Space Standards) ಅನ್ವಯ ವಿವಿಧ ಉದ್ದೇಶದ ಶೈಕ್ಷಣಿಕ ಕಟ್ಟಡಗಳಿಗಾಗಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರವು ನಿಗದಿಪಡಿಸಿರುವ ಮಾರ್ಗಸೂಚಿಯಂತೆ ಅವಕಾಶ ಕಲ್ಪಿಸಲಾಗಿರುತ್ತದೆ.

ಹಾಗಾಗಿ, ಪ್ರಸ್ತಾಪಿತ ಜಮೀನಿನಲ್ಲಿ ಶೈಕ್ಷಣಿಕ ಕಟ್ಟಡವನ್ನು ಕಟ್ಟಿದಲ್ಲಿ ಅಕ್ಕಪಕ್ಕದ ಜಮೀನಿನ ಮಾಲೀಕರಿಗೆ / ಇತರರಿಗೆ / ಪರಿಸರಕ್ಕೆ ಉಂಟಾಗಬಹುದಾದ ತೊಂದರೆಗಳು ಹಾಗೂ ಇತರೆ ಅಂಶಗಳಿಗೆ ಸಂಬಂಧಿಸಿದಂತೆ ತಮ್ಮ ಸಲಹೆ/ ಆಕ್ಷೇಪಣೆಗಳು ಇದ್ದಲ್ಲಿ ಈ ಪ್ರಕಟಣೆ ನೀಡಿದ ದಿನಾಂಕದಿಂದ **15 ದಿನಗಳ ಒಳಗಾಗಿ** ಲಿಖಿತ ರೂಪದಲ್ಲಿ **ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ, ಮಿಷನ್ ಹಾಸ್ಪಿಟಲ್ ರಸ್ತೆ, 1ನೇ ಅಡ್ಡ ರಸ್ತೆ, ಶ್ರೀ ವೆಂಕಟಾದ್ರಿ ಬಡಾವಣೆ, ಹೊಸಕೋಟೆ-562114, ಬೆಂಗಳೂರು ಗ್ರಾಮಾಂತರ ಜಿಲ್ಲೆ** ರವರಿಗೆ ಖುದ್ದಾಗಿ ಅಥವಾ ಅಂಚೆ ಮೂಲಕ ಸಲ್ಲಿಸಲು ಕೋರಲಾಗಿದೆ. ಅವಧಿ ಮೀರಿದ ನಂತರ ಸ್ವೀಕರಿಸಲಾಗುವ ಸಲಹೆ / ಆಕ್ಷೇಪಣೆಗಳನ್ನು ಪರಿಗಣಿಸಲಾಗುವುದಿಲ್ಲ.

ಸಹಿ/-
ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು
ಹಾಗೂ ಸದಸ್ಯ ಕಾರ್ಯದರ್ಶಿ, ಹೊಸಕೋಟೆ ಯೋಜನಾ ಪ್ರಾಧಿಕಾರ,
ಹೊಸಕೋಟೆ.

ವಾಸಾಸಂಇ/ವಾ.ಪ್ರ/949/ಅಡ್ವರ್ಟೋರ್/2022-23

ಕೋವಿಡ್-19 ಲಕ್ಷಣಗಳು ಇವೆಯೇ? ಸಂಪರ್ಕಿಸಿ, ಆಪ್ತಮಿತ್ರ ಸಹಾಯವಾಣಿ 14410.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

KARNATAKA URBAN WATER SUPPLY & DRAINAGE BOARD

JALABHAVAN, BTM Layout, Bannerghatta Road, Bangalore -29
Phone : 080-41106508, Fax : 080-26539206/41106504.
e-mail : cemkwb@gmail.com | Website: https://eproc.karnataka.gov.in

No. KWB/CAO/AAO-1 AS/Accounts/2022-23/121 Dt. 14.06.2022.

TENDER NOTIFICATION

(Through e-Procurement portal only)

e-Proc. Indent No: KUWSDB/2022-23/OW/Work Indent 31 6 1

Name the of work: KUWS & DB, Bengaluru invites tender for the work of consultancy assignment-providing services of Chartered accountants for maintenance of accounts through Tally Software and for other professional accounts services for a period of two years (2022-23 and 2023-24) from reputed Chartered Accountants as registered at Karnataka Institute of Chartered Accountants.

The Interested Chartered Accountants are requested to visit the e-procurement website: **https://eproc.karnataka.gov.in** For any clarification, tenderers may contact Chief Accounts Officer: Mobile No.: 9449306438.

Last date for uploading the tender document in the e-procurement portal: **04.07.2022 upto 17:30 Hrs.** Tender will be opened on **07.07.2022 at 11:00 Hrs.**

Sd/-
Chief Accounts Officer,
KUWS & D Board, Bengaluru

DIPR/CP/Jagadale Advertising/952/2022-23

STAY PROTECTED FROM COVID-19, NO CARELESSNESS UNTIL THERE IS A CURE.
Wear Mask | 6 Feet Follow Physical Distancing | Maintain Hand Hygiene

ಆನೇಕಲ್ ಯೋಜನಾ ಪ್ರಾಧಿಕಾರ

"ಅಣ್ಣ" ನಂ. 430, ಹೆನ್ನಾಗರ ಗೇಟ್, ಹೊಸೂರು ಮುಖ್ಯರಸ್ತೆ, ಬೆಂಗಳೂರು-560099.
ದೂ.: 080-27835122 ಫ್ಯಾಕ್ಸ್: 080-27836569 www.anekal.tpa.gov.in www.e-vinyasa.kar.nic.in

ಸಂಖ್ಯೆ: ಆಯೋಪ್ರಾ/ಭೂ.ಬ/12/2022-23 ದಿನಾಂಕ: 14.06.2022

ಪ್ರಕಟಣೆ

ಕರ್ನಾಟಕ ನಗರ ಮತ್ತು ಗ್ರಾಮಾಂತರ ಯೋಜನಾ ಕಾಯ್ದೆ 1961 ರ ಸೆಕ್ಷನ್ 14(ಎ) ಪ್ರಕಾರ ಅರ್ಜಿದಾರರು ಭೂ ಉಪಯೋಗ ಬದಲಾವಣೆಗೆ ಅರ್ಜಿ ಸಲ್ಲಿಸಿರುತ್ತಾರೆ. ಅರ್ಜಿಯನ್ನು ಪರಿಶೀಲಿಸಲಾಗಿ, ಅಡಕದಲ್ಲಿನ ಮಾಹಿತಿಯನ್ನು ಆಧರಿಸಿ ಕೆಳಕಂಡಂತೆ ವಿವರಗಳನ್ನು ಕೋಷ್ಟಕದಲ್ಲಿ ಅಳವಡಿಸಿದೆ. ಕಾಯ್ದೆಯಲ್ಲಿನ ಅಂಶಗಳನ್ವಯ ಪ್ರಸ್ತುತ ಪ್ರಕರಣಕ್ಕೆ ಸಂಬಂಧಿಸಿದಂತೆ, ಭೂ ಉಪಯೋಗ ಬದಲಾವಣೆಗೆ ಯಾರಿಂದಲಾದರು ಆಕ್ಷೇಪಣೆಗಳಿದ್ದರೆ ಈ ಪ್ರಕಟಣೆ ಪ್ರಕಟವಾದ ದಿನಾಂಕದಿಂದ 15 ದಿವಸಗಳೊಳಗಾಗಿ ಆಕ್ಷೇಪಣೆಗಳನ್ನು ಲಿಖಿತವಾಗಿ ಸದಸ್ಯ ಕಾರ್ಯದರ್ಶಿಗಳು, ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್ ಕಛೇರಿಗೆ ಸಲ್ಲಿಸಲು ಕೋರಲಾಗಿದೆ. ನಿಗದಿತ ಅವಧಿಯ ನಂತರ ಬರುವ ಯಾವುದೇ ಆಕ್ಷೇಪಣೆಗಳನ್ನು ಪರಿಗಣಿಸುವುದಿಲ್ಲ.

ಕ್ರ. ಸಂ.	ಅರ್ಜಿದಾರರ ಹೆಸರು	ತಾಲ್ಲೂಕು	ಹೋಬಳಿ	ಗ್ರಾಮ	ಸ.ನಂ.	ವಿಸ್ತೀರ್ಣ ಎ/ಗು	ಅನುಮೋದಿತ ಮಹಾಯೋಜನೆ ಪ್ರಕಾರ ಭೂ ಉಪಯೋಗ	ಬದಲಾವಣೆ ಕೋರಿರುವ ಭೂ ಉಪಯೋಗ	ಷರಾ
1	ಶ್ರೀ ಆರ್. ರಾಜರಾತ್ನಂ, ಶ್ರೀಮತಿ ರುಕ್ಮಿಣಿಯಮ್ಮ, ಶ್ರೀ ಡಿ.ಸಿ. ಕೃಷ್ಣಾರೆಡ್ಡಿ ಹಾಗೂ ಇತರರ ಪರವಾಗಿ ಜಿಪಿಎ ಮತ್ತು ಜಂಟಿ ಅಭಿವೃದ್ಧಿದಾರರಾದ ಮೆ: ಟಿಬಿಸಿ ಹೋಮ್ಸ್ ಇಫ್ರಾ ಕಾರ್ಪ್ ಪರವಾಗಿ ಪಾಲುದಾರರಾದ ಶ್ರೀ ಪಿ. ರವಿ, ಶ್ರೀ ದಯಾನಂದ ಸಾಗರ್ ಬಿ.ಪಿ., ಶ್ರೀ ಆರ್. ಶ್ರೀನಿವಾಸ ರೆಡ್ಡಿ ಮತ್ತು ಶ್ರೀ ಮನು ಎನ್.	ಆನೇಕಲ್	ಸರ್ಜಾಪುರ	ಮುತ್ತಾನಲ್ಲೂರು	110/1	1-14.08	ಕೃಷಿ	ವಸತಿ	
2		ಆನೇಕಲ್	ಸರ್ಜಾಪುರ	ಮುತ್ತಾನಲ್ಲೂರು	110/3	1-14-08	ಕೃಷಿ	ವಸತಿ	
3		ಆನೇಕಲ್	ಸರ್ಜಾಪುರ	ಮುತ್ತಾನಲ್ಲೂರು	113/1	2-06	ಕೃಷಿ	ವಸತಿ	

ಷರಾ: ಪ್ರಸ್ತಾವನೆಯಲ್ಲಿನ ಪ್ರಶ್ನಿತ ಜಮೀನನ್ನು ವಸತಿ ಉದ್ದೇಶಕ್ಕೆ ಅಭಿವೃದ್ಧಿಪಡಿಸುವುದರಿಂದ ಸುತ್ತಲಿನ ಪ್ರದೇಶ ಅಭಿವೃದ್ಧಿ ಹೊಂದುತ್ತದೆ ಹಾಗೂ ಸ್ಥಳೀಯ ಕೂಲಿ ಕಾರ್ಮಿಕರಿಗೆ ಉದ್ಯೋಗವಕಾಶ ಸೃಷ್ಠಿಯಾಗುತ್ತದೆ. ಪ್ರಶ್ನಿತ ಜಮೀನನಲ್ಲಿ ಎಲ್ಲಾ ಮೂಲಭೂತ ಸೌಕರ್ಯಗಳುಳ್ಳ ಸುಸಜ್ಜಿತವಾದ ವಸತಿ ವಿನ್ಯಾಸ ಅಭಿವೃದ್ಧಿಪಡಿಸುವುದರಿಂದ ಉತ್ತಮ ರಸ್ತೆಗಳು, ನಾಗರೀಕ ಸೌಲಭ್ಯ ಜಾಗಗಳು, ಉದ್ಯಾನವನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಹಾಗೂ ಕಾನೂನು ಬದ್ಧವಾದ ನಿವೇಶನಗಳು ಸಾರ್ವಜನಿಕರಿಗೆ ಲಭ್ಯವಾಗುತ್ತದೆ ಎಂಬ ಸಾರ್ವಜನಿಕ ಹಿತಾಸಕ್ತಿ ಅಂಶ ಅಡಗಿದೆ ಎಂದು ತಿಳಿಸುತ್ತಾ, ಸದರಿ ಪ್ರದೇಶವನ್ನು ಕೃಷಿ ವಲಯದಿಂದ ವಸತಿ ವಲಯಕ್ಕೆ ಭೂ ಉಪಯೋಗ ಬದಲಾವಣೆ ಮಾಡಿಕೊಳ್ಳಲು ಇಚ್ಛಿಸಿರುವುದಾಗಿ ತಿಳಿಸಿರುತ್ತಾರೆ.

ಸಹಿ/-,
ಸದಸ್ಯ-ಕಾರ್ಯದರ್ಶಿ ಹಾಗೂ ನಗರ ಮತ್ತು ಗ್ರಾಮಾಂತರ ಯೋಜನಾ ಜಂಟಿ ನಿರ್ದೇಶಕರು,
ಆನೇಕಲ್ ಯೋಜನಾ ಪ್ರಾಧಿಕಾರ, ಆನೇಕಲ್

ವಾಸಾಸಂಇ/ವಾಪ್ರ/ಎಲ್‌ಸಿ/946/2022-23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಹೈಕೋರ್ಟ್‌ನಲ್ಲಿ ಎನ್‌ಐಎ ಪ್ರಾಸಿಕ್ಯೂಷನ್ ಆತಂಕ

ಬಡ ಆರೋಪಿಗೆ ದುಬಾರಿ ವಕೀಲರು!

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಐಎಸ್ ಉಗ್ರ ಸಂಘಟನೆಗೆ ಕೆಲಸದ ಆರೋಪ
- ಜಾಮೀನು ಕೋರಿದ ಅರ್ಜಿ
- ತೀರ್ಪು ಕಾಯ್ದಿರಿಸಿದ ನ್ಯಾಯಪೀಠ

ಬೆಂಗಳೂರು: 'ಕಾನೂನು ಬಾಹಿರ ಚಟುವಟಿಕೆಗಳ ನಿರ್ಬಂಧ ಕಾಯ್ದೆ– 1967ರ (ಯುಎಪಿಎ) ಅಡಿಯಲ್ಲಿ ಜೈಲಿನಲ್ಲಿರುವ ಕೈದಿಗಳು; ನಾವೆಲ್ಲಾ ಅತ್ಯಂತ ಬಡ ಕುಟುಂಬ ದಿಂದ ಬಂದಿದ್ದೇವೆ ಎಂದು ಕೋರ್ಟ್‌ಗಳಿಗೆ ಜಾಮೀನು ಅರ್ಜಿ, ಪ್ರಮಾಣ ಪತ್ರ, ಮೆಮೊ ಸಲ್ಲಿಸುವಾಗ ಹೇಳುತ್ತಾರೆ. ಆದರೆ, ಇವರ ಪರವಾಗಿ ವಿಚಾರಣಾ ಮತ್ತು ಹೈಕೋರ್ಟ್‌ಗಳಲ್ಲಿ ವಾದ ಮಂಡಿಸಲು ಹತ್ತಾರು ಲಕ್ಷ ರೂಪಾಯಿ ಶುಲ್ಕ ಪಡೆಯುವ ಪ್ರತಿಷ್ಠಿತ ಹಿರಿಯ ವಕೀಲರು ಹಾಜರಾಗುತ್ತಾರೆ. ಹಾಗಾದರೆ, ಈ ಬಡ ಆರೋಪಿಗಳು ಪ್ರತಿಷ್ಠಿತ ಹಿರಿಯ ವಕೀಲರನ್ನು ನಿಯೋಜಿಸಿ ಅವರಿಗೆ ಹತ್ತಾರು ಲಕ್ಷ ರೂಪಾಯಿಗಳನ್ನು ಎಲ್ಲಿಂದ ತಂದು ಕೊಡುತ್ತಾರೆ...?

ಇಂತಹದೊಂದು ಪ್ರಶ್ನೆಯನ್ನು ರಾಷ್ಟ್ರೀಯ ತನಿಖಾದಳದ (ಎನ್‌ಐಎ) ವಿಶೇಷ ಪ್ರಾಸಿಕ್ಯೂಟರ್ ಪಿ.ಪ್ರಸನ್ನಕುಮಾರ್, ನ್ಯಾಯಮೂರ್ತಿ ಕೆ.ಸೋಮಶೇಖರ್ ನೇತೃತ್ವದ ವಿಭಾಗೀಯ ನ್ಯಾಯಪೀಠಕ್ಕೆ ಮಂಡಿಸಿ, 'ಸ್ವಘೋಷಿತ ಬಡ ಆರೋಪಿಗಳ ಪರ ವಾದ ಮಂಡಿಸುವ ಹಿರಿಯ ವಕೀಲರಿಗೆ ಅಂತರರಾಷ್ಟ್ರೀಯವಾಗಿ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಯಾರು ಹಣ ಸಂದಾಯ ಮಾಡುತ್ತಾರೆ ಎಂಬ ಅಂಶವನ್ನು ದಯವಿಟ್ಟು ಸೂಕ್ಷ್ಮವಾಗಿ ಅವಲೋಕಿಸಬೇಕು' ಎಂದು ಮನವಿ ಮಾಡಿದರು.

ಐಎಸ್ (ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್ ಅಂಡ್ ಸಿರಿಯಾ) ಉಗ್ರ ಚಟುವಟಿಕೆಗಳಲ್ಲಿ ಸೇರ್ಪಡೆಯಾಗಲು ಮುಗ್ಧ ಮುಸ್ಲಿಂ ಯುವಕರನ್ನು ಪ್ರಚೋದಿಸುತ್ತಿದ್ದ ಮತ್ತು ಐಎಸ್‌ಗೆ ದೇಣಿಗೆ ಸಂಗ್ರಹ ಮಾಡಿ ಅವರನ್ನು ಸಿರಿಯಾಕ್ಕೆ ಕಳುಹಿಸಲು ನೆರವು ನೀಡುತ್ತಿದ್ದ ಆರೋಪದಡಿ ಸದ್ಯ ಜೈಲಿನಲ್ಲಿರುವ ನಗರದ ಫ್ರೇಜರ್ ಟೌನ್ ನಿವಾಸಿ 33 ವರ್ಷದ ಆರೋಪಿ ಇರ್ಫಾನ್ ನಾಸಿರ್ ಅಲಿಯಾಸ್ ಇರ್ಫಿ ಸಲ್ಲಿಸಿದ್ದ ಜಾಮೀನು ಅರ್ಜಿಯನ್ನು ನ್ಯಾಯಮೂರ್ತಿ ಕೆ.ಸೋಮಶೇಖರ್ ಹಾಗೂ ನ್ಯಾಯಮೂರ್ತಿ ಶಿವಶಂಕರ ಅಮರಣ್ಣವರ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಆರೋಪಿ ಪರ ವಾದ ಮಂಡಿಸಿದ ಹಿರಿಯ ವಕೀಲ ಸಂದೇಶ್ ಚೌಟ, 'ಆರೋಪಿಗೆ ಜಾಮೀನು ಮಂಜೂರು ಮಾಡಬೇಕು' ಎಂಬ ಮನವಿಯನ್ನು ಪ್ರಸನ್ನ ಕುಮಾರ್ ವಿರೋಧಿಸಿದರು. ನ್ಯಾಯಪೀಠ ಜಾಮೀನು ಅರ್ಜಿಯ ತೀರ್ಪು ಕಾಯ್ದಿರಿಸಿದೆ.

'ಕುರಾನ್ ಸರ್ಕಲ್' ಹೆಸರಿನಲ್ಲಿ ಕೃತ್ಯ

'ಆರೋಪಿಗಳು 2013ರಲ್ಲಿ ಬೆಂಗಳೂರಿನಲ್ಲಿ 'ಕುರಾನ್ ಸರ್ಕಲ್' ಹೆಸರಿನಲ್ಲಿ ಸಂಘಟನೆ ರಚಿಸಿಕೊಂಡು ಅಮಾಯಕ ಮುಸ್ಲಿಂ ಯುವಕರನ್ನು ಸೆಳೆದು ಅವರಿಗೆ ಹಣ ಕೊಟ್ಟು ವಿಮಾನದ ಟಿಕೆಟ್‌ಗಳನ್ನು ತೆಗೆಸಿ ಸಿರಿಯಾಕ್ಕೆ 'ಇಸ್ಲಾಮಿಕ್ ಸ್ಟೇಟ್ ಪರ ಹೋರಾಡಲು ಕಳುಹಿಸುತ್ತಿದ್ದರು' ಎಂಬುದು ಎನ್‌ಐಎ ಆರೋಪ.

ಲಕ್ಷ್ಮೀ ಹುಂಡೈ ಕಂಪನಿಯ ಕಲ್ಯಾಣ ನಗರದ ಹೊಸ ಮಳಿಗೆಯಲ್ಲಿ, ಹುಂಡೈ ಮೋಟರ್ ಇಂಡಿಯಾ ಲಿಮಿಟೆಡ್‌ನ ವಲಯ ವ್ಯವಸ್ಥಾಪಕ ರಮಣ್ ಭಾಟಿಯಾ ಮತ್ತು ಪ್ರಾದೇಶಿಕ ವ್ಯವಸ್ಥಾಪಕ ರಾಮಕುಮಾರ್ ಜಿ. ಅವರು ಲಕ್ಷ್ಮೀ ಹುಂಡೈ ಕಂಪನಿಯ ಪ್ರಧಾನ ವ್ಯವಸ್ಥಾಪಕ ರಾಘವೇಂದ್ರ ಎಂ.ಆರ್. ಅವರ ಜೊತೆಗೂಡಿ ಹೊಸ 'ವೆನ್ಯು' ಕಾರನ್ನು ಅನಾವರಣ ಮಾಡಿದರು

ಪ್ರಜ್ವಲ್ ರೇವಣ್ಣಗೆ ಹೈಕೋರ್ಟ್ ಎಚ್ಚರಿಕೆ

ಬೆಂಗಳೂರು: 'ಹಣ ಇದೆ ಅಂತಾ ವಕೀಲರನ್ನು ನೇಮಿಸಿಕೊಂಡು ಕೋರ್ಟ್‌ಗೆ ಹಾಜರಾಗುವುದನ್ನು ತಪ್ಪಿಸಿಕೊಂಡರೆ ಸುಮ್ಮನಿರಲು ಸಾಧ್ಯವಿಲ್ಲ. ಮುಂದಿನ ವಿಚಾರಣೆಗೆ ಅವರನ್ನು ಕೋರ್ಟ್‌ನಲ್ಲಿ ಹಾಜರಿರಲು ಹೇಳಿ' ಎಂದು ಸಂಸದ ಪ್ರಜ್ವಲ್ ರೇವಣ್ಣ ಪರ ವಕೀಲರಿಗೆ ಹೈಕೋರ್ಟ್ ಖಡಕ್ ಎಚ್ಚರಿಕೆ ನೀಡಿದೆ.

'ಹಾಸನ ಸಂಸದ ಪ್ರಜ್ವಲ್ ರೇವಣ್ಣ ಆಯ್ಕೆಯನ್ನು ಅಸಿಂಧುಗೊಳಿಸಬೇಕು' ಎಂದು ಕೋರಿ ಪರಾಜಿತ ಬಿಜೆಪಿ ಅಭ್ಯರ್ಥಿ ಎ.ಮಂಜು ಮತ್ತು ಜಿ.ದೇವರಾಜೇಗೌಡ ಸಲ್ಲಿಸಿರುವ ಚುನಾವಣಾ ತಕರಾರು ಅರ್ಜಿಗಳನ್ನು ನ್ಯಾಯಮೂರ್ತಿ ಕೆ.ನಟರಾಜನ್ ಅವರಿದ್ದ ಏಕಸದಸ್ಯ ಪೀಠ ಶುಕ್ರವಾರ ವಿಚಾರಣೆ ನಡೆಸಿತು.

ಅರ್ಜಿದಾರರನ್ನು ಮುಖ್ಯ ವಿಚಾರಣೆಗೆ ಒಳಪಡಿಸಿದ ನ್ಯಾಯಪೀಠ ಇದೇ 24ಕ್ಕೆ ಪ್ರಜ್ವಲ್ ರೇವಣ್ಣ ಕೋರ್ಟ್‌ಗೆ ಕಡ್ಡಾಯವಾಗಿ ಹಾಜರಾಗುವಂತೆ ಮೌಖಿಕವಾಗಿ ತಾಕೀತು ಮಾಡಿದೆ. ಅರ್ಜಿದಾರರ ಪರ ಹಿರಿಯ ವಕೀಲೆ ಪ್ರಮೀಳಾ ನೇಸರ್ಗಿ ಹಾಜರಾಗಿದ್ದರು.

ಸೋನಿಯಾ ಗಾಂಧಿಗೆ ಶ್ವಾಸನಾಳದ ಸೋಂಕು

ನವದೆಹಲಿ (ಪಿಟಿಐ): ಇಲ್ಲಿನ ಗಂಗಾ ರಾಮ್ ಆಸ್ಪತ್ರೆಗೆ ದಾಖಲಾಗಿರುವ ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರು ಶ್ವಾಸನಾಳದ ಸೋಂಕಿನಿಂದ ಬಳಲುತ್ತಿದ್ದು, ಚಿಕಿತ್ಸೆ ಮುಂದುವರಿಸಲಾಗಿದೆ ಎಂದು ಪಕ್ಷದ ಮೂಲಗಳು ಶುಕ್ರವಾರ ಹೇಳಿವೆ.

'ಕೋವಿಡ್‌ನಿಂದ ಚೇತರಿಸಿಕೊಳ್ಳುತ್ತಿದ್ದ ಅವರಿಗೆ ಇತ್ತೀಚೆಗೆ ಮೂಗಿನಲ್ಲಿ ರಕ್ತಸ್ರಾವ ಕಾಣಿಸಿಕೊಂಡಿತ್ತು. ಹೀಗಾಗಿ ಇದೇ 12ರಂದು ಆಸ್ಪತ್ರೆಗೆ ದಾಖಲಿಸಲಾಗಿತ್ತು' ಎಂದು ಕಾಂಗ್ರೆಸ್ ಪಕ್ಷದ ವಕ್ತಾರ ಜೈರಾಂ ರಮೇಶ್ ತಿಳಿಸಿದ್ದಾರೆ.

'ಶ್ವಾಸನಾಳದ ಕೆಳಭಾಗಕ್ಕೆ ಸೋಂಕು ತಗುಲಿದ್ದು, ಕೋವಿಡ್ ನಂತರದ ತೊಂದರೆಗಳ ಜೊತೆಗೆ ಈ ಸೋಂಕಿಗೂ ಚಿಕಿತ್ಸೆ ನೀಡಲಾಗುತ್ತಿದೆ. ಅವರ ಆರೋಗ್ಯದ ಮೇಲೆ ತೀವ್ರ ನಿಗಾ ಇರಿಸಲಾಗಿದೆ' ಎಂದೂ ಹೇಳಿದ್ದಾರೆ.

ಸಮನ್ಸ್: ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ಹಣ ಅಕ್ರಮ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿ ಜೂನ್ 23ರಂದು ವಿಚಾರಣೆಗೆ ಹಾಜರಾಗುವಂತೆ ಸೋನಿಯಾ ಗಾಂಧಿ ಅವರಿಗೆ ಜಾರಿ ನಿರ್ದೇಶನಾಲಯ (ಇ.ಡಿ) ಸಮನ್ಸ್ ಜಾರಿಗೊಳಿಸಿದೆ.

ರಾಹುಲ್ ಭೇಟಿ: ರಾಹುಲ್ ಗಾಂಧಿ ಅವರು ಗುರುವಾರ ರಾತ್ರಿ ಆಸ್ಪತ್ರೆಗೆ ಭೇಟಿ ನೀಡಿ ತಮ್ಮ ತಾಯಿಯ ಆರೋಗ್ಯ ವಿಚಾರಿಸಿದರು.

ಎಟಿಎಂ ಕಳವಿಗೆ ಯತ್ನ: ಆರೋಪಿ ಸೆರೆ

ಗ್ಯಾಸ್ ಸಿಲಿಂಡರ್, ಚಾಕು ಸೇರಿದಂತೆ ಇತರ ವಸ್ತುಗಳ ಜಪ್ತಿ, ಇತರೆಡೆಗಳಲ್ಲೂ ಕೃತ್ಯ ಎಸಗಿರುವ ಶಂಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯ ಚಿಕ್ಕಸಂದ್ರದ ಕೆನರಾ ಬ್ಯಾಂಕ್ ಶಾಖೆ ಎಟಿಎಂ ಘಟಕದಲ್ಲಿ ಕಳ್ಳತನ ಮಾಡಲು ಯತ್ನಿಸುತ್ತಿದ್ದ ಆರೋಪದಡಿ ಸಮರ್ಜೋತ್ ಸಿಂಗ್ ಎಂಬುವವರನ್ನು ಪೊಲೀಸರು ಬಂಧಿಸಿದ್ದಾರೆ.

'ಪಂಜಾಬ್‌ನ ಆರೋಪಿ ಸಮರ್ಜೋತ್ ಸಿಂಗ್, ಕಳ್ಳತನ ಮಾಡುವ ಉದ್ದೇಶದಿಂದ ಸಹಚರರ ಜೊತೆ ನಗರಕ್ಕೆ ಬಂದಿದ್ದ. ಸದ್ಯ ಈತನಷ್ಟೇ ಸಿಕ್ಕಿಬಿದ್ದಿದ್ದು, ಉಳಿದವರು ತಲೆಮರೆಸಿಕೊಂಡಿದ್ದಾರೆ. ಬಂಧಿತನಿಂದ ಗ್ಯಾಸ್ ಸಿಲಿಂಡರ್, ಗ್ಯಾಸ್ ಕಟರ್, ಚಾಕು ಸೇರಿದಂತೆ ಹಲವು ವಸ್ತುಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಎಟಿಎಂ ಘಟಕಕ್ಕೆ ನುಗ್ಗಿ ಕಳ್ಳತನ ಮಾಡುತ್ತಿದ್ದ ಆರೋಪಿಗಳು, ಯಾರಾದರೂ ತಡೆಯಲು ಬಂದರೆ ಕೊಲೆಗೂ ಯತ್ನಿಸುತ್ತಿದ್ದರು. ಇದಕ್ಕಾಗಿ ಚಾಕು ಹಾಗೂ ಕತ್ತಿ ಬಳಸುತ್ತಿದ್ದರು' ಎಂದೂ ತಿಳಿಸಿದರು.

ಆರೋಪಿಯಿಂದ ಜಪ್ತಿ ಮಾಡಲಾದ ಗ್ಯಾಸ್ ಸಿಲಿಂಡರ್, ಕಟರ್ ಹಾಗೂ ಇತರೆ ವಸ್ತುಗಳು

ಕಳ್ಳತನಕ್ಕೂ ಮುನ್ನ ಪರೀಕ್ಷೆ: 'ಭದ್ರತೆ ಇಲ್ಲದ ಹಾಗೂ ಹೆಚ್ಚು ಜನರು ಓಡಾಡದ ಸ್ಥಳದಲ್ಲಿರುವ ಎಟಿಎಂ ಘಟಕಗಳನ್ನು ಆರೋಪಿಗಳು ಗುರುತಿಸುತ್ತಿದ್ದರು. ಕಳ್ಳತನಕ್ಕೂ ಮುನ್ನ ಎಟಿಎಂ ಘಟಕ ಬಳಿ ಸುತ್ತಾಡಿ, ಕಳ್ಳತನ ಹೇಗೆ ಮಾಡುವುದೆಂದು ಪರೀಕ್ಷಿಸುತ್ತಿದ್ದರು' ಎಂದು ಪೊಲೀಸರು ಹೇಳಿದರು.

'ಚಿಕ್ಕಸಂದ್ರದ ಕೆನರಾ ಬ್ಯಾಂಕ್ ಶಾಖೆ ಎಟಿಎಂ ಘಟಕ ಗುರುತಿಸಿದ್ದ ಆರೋಪಿ, ರಾತ್ರಿ ಸ್ಥಳಕ್ಕೆ ಹೋಗಿ ಶೆಟರ್ ಮುಚ್ಚಿಬರುತ್ತಿದ್ದ. ನಂತರ, ಬೆಳಿಗ್ಗೆ ಹೋಗಿ ಶೆಟರ್ ತೆಗೆಯುತ್ತಿದ್ದ. ಎಟಿಎಂ ಯಂತ್ರದ ಕೇಬಲ್ ಸಹ ಕತ್ತರಿಸುತ್ತಿದ್ದ. ಇದನ್ನು ಯಾರಾದರೂ ಪ್ರಶ್ನಿಸುತ್ತಾರೆಯೇ ಎಂಬುದನ್ನು ಪರೀಕ್ಷಿಸುತ್ತಿದ್ದ. ಇದೇ ರೀತಿಯಲ್ಲೇ ಮೂರು–ನಾಲ್ಕು ದಿನ ಮಾಡಿ, ನಂತರ ಕಳ್ಳತನ ಮಾಡುವುದು ಆರೋಪಿ ಉದ್ದೇಶವಾಗಿತ್ತು' ಎಂದೂ ತಿಳಿಸಿದರು.

ಏಜೆನ್ಸಿ ಸಿಬ್ಬಂದಿಗೆ ಅನುಮಾನ: 'ಆರೋಪಿ ಕೇಬಲ್ ಕತ್ತರಿಸಿದ್ದರಿಂದ ಎಟಿಎಂ ಯಂತ್ರ ಕೆಲಸ ನಿರ್ವಹಿಸುತ್ತಿರಲಿಲ್ಲ. ಈ ಬಗ್ಗೆ ದೂರು ಬರುತ್ತಿದ್ದಂತೆ ಘಟಕದ ನಿರ್ವಹಣಾ ಏಜೆನ್ಸಿ ಸಿಬ್ಬಂದಿ ಕೇಬಲ್ ದುರಸ್ತಿಗೊಳಿಸಿದ್ದರು. ಕೇಬಲ್ ಕತ್ತರಿಸಿದವರು ಯಾರೆಂದು ತಿಳಿಯಲು ಸಿ.ಸಿ.ಟಿ.ವಿ ಕ್ಯಾಮೆರಾ ಪರಿಶೀಲಿಸಿದಾಗ ಆರೋಪಿ ಸುಳಿವು ಸಿಕ್ಕಿತ್ತು. ಠಾಣೆಗೆ ಮಾಹಿತಿ ನೀಡಿದ್ದರು' ಎಂದು ಪೊಲೀಸರು ಹೇಳಿದರು.

'ಆರೋಪಿ ಬಂಧನಕ್ಕಾಗಿ ಎಟಿಎಂ ಸುತ್ತಮುತ್ತ ಪೊಲೀಸರು ಕಾದು ಕುಳಿತಿದ್ದರು. ಜೂನ್ 9ರಂದು ರಾತ್ರಿ 11 ಗಂಟೆ ಸುಮಾರಿಗೆ ಆರೋಪಿ, ಎಟಿಎಂ ಘಟಕದ ಶೆಟರ್ ಮುಚ್ಚಲು ಬಂದಿದ್ದ. ಅದೇ ಸಂದರ್ಭದಲ್ಲೇ ಆತನನ್ನು ಹಿಡಿದುಕೊಂಡರು' ಎಂದೂ ವಿವರಿಸಿದರು.

'ಪರಪ್ಪನ ಅಗ್ರಹಾರ, ಜಾಲಹಳ್ಳಿ, ಸುಬ್ರಮಣ್ಯಪುರ, ಮೈಕೊ ಲೇಔಟ್, ಚನ್ನಮ್ಮನಕೆರೆ ಅಚ್ಚುಕಟ್ಟು, ಬ್ಯಾಟರಾಯನಪುರ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ಕೃತ್ಯ ಎಸಗಿರುವುದು ಗೊತ್ತಾಗಿದೆ' ಎಂದೂ ಹೇಳಿದರು.

'ಸಿಯಾಮೆಸೆ ಥೈ' ಸ್ಪಾ ಮೇಲೆ ದಾಳಿ: ಯುವತಿಯರ ರಕ್ಷಣೆ

ಬೆಂಗಳೂರು: ಸದಾಶಿವನಗರ ಠಾಣೆ ವ್ಯಾಪ್ತಿಯಲ್ಲಿರುವ 'ಸಿಯಾಮೆಸೆ ಥೈ ಸ್ಪಾ' ಮೇಲೆ ಸಿಸಿಬಿ ಪೊಲೀಸರು ದಾಳಿ ಮಾಡಿದ್ದು, ವೇಶ್ಯಾವಾಟಿಕೆ ಜಾಲಕ್ಕೆ ಸಿಲುಕಿದ್ದ 9 ಯುವತಿಯರನ್ನು ರಕ್ಷಿಸಿದ್ದಾರೆ.

'ಮಳಿಗೆಯಲ್ಲಿ ವೇಶ್ಯಾವಾಟಿಕೆ ನಡೆಯುತ್ತಿದ್ದ ಬಗ್ಗೆ ಮಾಹಿತಿ ಬಂದಿತ್ತು. ಗುರುವಾರ ದಾಳಿ ಮಾಡಿ ಕೆಲವರನ್ನು ಬಂಧಿಸಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಉದ್ಯೋಗದ ಆಮಿಷವೊಡ್ಡಿ ಥಾಯ್ಲೆಂಡ್‌ನಿಂದ ಯುವತಿಯರನ್ನು ಕರೆಸಿದ್ದ ಆರೋಪಿಗಳು, ಮಳಿಗೆಯಲ್ಲಿ ಕೆಲಸಕ್ಕೆ ನೇಮಿಸಿಕೊಂಡಿದ್ದರು. ಮಸಾಜ್ ಹೆಸರಿನಲ್ಲಿ ಜಾಹೀರಾತು ನೀಡಿ ಗ್ರಾಹಕರನ್ನು ಮಳಿಗೆಗೆ ಕರೆದು, ವೇಶ್ಯಾವಾಟಿಕೆ ನಡೆಸುತ್ತಿದ್ದರು. ರಕ್ಷಿಸಲಾದ ಯುವತಿಯರನ್ನು ಅವರ ದೇಶಕ್ಕೆ ಕಳುಹಿಸಲು ಕ್ರಮಕೈಗೊಳ್ಳಲಾಗಿದೆ' ಎಂದೂ ತಿಳಿಸಿವೆ.

8 ದ್ವಿಚಕ್ರ ವಾಹನ ಕದ್ದಿದ್ದ ಆರೋಪಿ ಬಂಧನ

ಬೆಂಗಳೂರು: ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸಿದ್ದ ದ್ವಿಚಕ್ರ ವಾಹನ ಕಳ್ಳತನ ಮಾಡುತ್ತಿದ್ದ ಆರೋಪಿ ಶಕ್ತಿವೇಲುನನ್ನು (24) ಬಾಣಸವಾಡಿ ಪೊಲೀಸರು ಬಂಧಿಸಿದ್ದಾರೆ.

'ಲಿಂಗರಾಜಪುರದ ನಿವಾಸಿ ಶಕ್ತಿವೇಲು ದುಶ್ಚಟಗಳಿಗೆ ಹಣ ಹೊಂದಿಸಲು ಕೃತ್ಯ ಎಸಗುತ್ತಿದ್ದ. ಈತನಿಂದ 8 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ. ಆರ್.ಟಿ.ನಗರ, ಕೆಜಿಎಫ್‌ನ ಕ್ಯಾಸಂಬಳ್ಳಿ ಠಾಣೆ ವ್ಯಾಪ್ತಿಯಲ್ಲೂ ಆರೋಪಿ ವಾಹನ ಕದ್ದಿದ್ದ' ಎಂದು ಪೊಲೀಸರು ಹೇಳಿದರು.

ಯುಪಿಎಸ್‌ಸಿ: ಉಚಿತ ತರಬೇತಿ

ಬೆಂಗಳೂರು: ಯುಪಿಎಸ್‌ಸಿ ಮತ್ತು ಕೆಪಿಎಸ್‌ಸಿ ನಡೆಸುವ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಹಾಜರಾಗಬಯಸುವ ಅಭ್ಯರ್ಥಿಗಳಿಗೆ ಬೆಂಗಳೂರಿನ ವಾಸವಿ ಅಕಾಡೆಮಿ ಉಚಿತ ತರಬೇತಿಗೆ ಅರ್ಜಿ ಆಹ್ವಾನಿಸಿದೆ.

2023ರಲ್ಲಿ ಕೇಂದ್ರ ಲೋಕಸೇವಾ ಆಯೋಗ ನಡೆಸುವ ಪರೀಕ್ಷೆಗಳಲ್ಲಿ ಹಾಜರಾಗಬಯಸುವ ಅಭ್ಯರ್ಥಿ ಗಳು ಅರ್ಜಿ ಸಲ್ಲಿಸಬಹುದು. ಆಸಕ್ತರು ವಾಸವಿ ಅಕಾಡೆಮಿ ಯ ಸಾಮಾನ್ಯ ಪರೀಕ್ಷೆಗಳಲ್ಲಿ ಭಾಗವಹಿಸಬೇಕು. ಉತ್ತೀರ್ಣರಾದ ಅಭ್ಯರ್ಥಿಗಳಿಗೆ 6 ತಿಂಗಳು ಉಚಿತ ಊಟ, ವಸತಿಯೊಂದಿಗೆ ತರಬೇತಿ ನೀಡಲಾಗುವುದು ಎಂದು ವಾಸವಿ ಅಕಾಡೆಮಿ ಅಧ್ಯಕ್ಷ ಆರ್.ಪಿ. ರವಿಶಂಕರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗೆ: 80734 99217 ಟೆಲಿಗ್ರಾಂ ಗ್ರೂಪ್ : https://t.me/vasaviacademy2020. ನಮ್ಮ ಲಿಂಕ್: https://forms.gle/rwnMsvV1NhAfL3c8

ಜೈಲಿನಲ್ಲಿದ್ದ ಮಗನಿಗೆ ಡ್ರಗ್ಸ್: ತಾಯಿ ವಶಕ್ಕೆ

ಬೆಂಗಳೂರು: ಅಪರಾಧ ಪ್ರಕರಣದಲ್ಲಿ ಜೈಲು ಸೇರಿದ್ದ ಮಗನಿಗೆ ಬಟ್ಟೆ ಬ್ಯಾಗ್‌ನಲ್ಲಿ ಡ್ರಗ್ಸ್ ಬಚ್ಚಿಟ್ಟು ಕೊಡುತ್ತಿದ್ದ ಆರೋಪದಡಿ ಫರ್ವೀನ್ ತಾಜ್ (50) ಎಂಬುವರನ್ನು ಪರಪ್ಪನ ಅಗ್ರಹಾರ ಠಾಣೆ ಪೊಲೀಸರು ಬಂಧಿಸಿದ್ದಾರೆ.

'ಎಲೆಕ್ಟ್ರಾನಿಕ್ ಸಿಟಿಯ ಶಿಕಾರಿಪಾಳ್ಯದ ನಿವಾಸಿ ಫರ್ವೀನ್ ತಾಜ್, ಮಗ ಮೊಹಮ್ಮದ್ ಬಿಲಾಲ್‌ನನ್ನು ಭೇಟಿಯಾಗಲು ಜೂನ್ 13ರಂದು ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹಕ್ಕೆ ಬಂದಿದ್ದರು. ಇದೇ ವೇಳೆ ಅವರನ್ನು ಡ್ರಗ್ಸ್ ಸಮೇತ ಹಿಡಿದಿದ್ದ ಜೈಲು ಸಿಬ್ಬಂದಿ, ಠಾಣೆಗೆ ಒಪ್ಪಿಸಿದ್ದಾರೆ' ಎಂದು ಪೊಲೀಸ್ ಅಧಿಕಾರಿಯೊಬ್ಬರು ಹೇಳಿದರು.

'ಮಗನನ್ನು ಭೇಟಿಯಾಗಲು ತಾಯಿ ಆಗಾಗ ಜೈಲಿಗೆ ಬಂದು ಹೋಗುತ್ತಿದ್ದರು. ಜೂನ್ 13ರಂದು ಜೈಲಿಗೆ ಬಂದಿದ್ದ ಫರ್ವೀನ್, ಬಟ್ಟೆ ಇರುವುದಾಗಿ ಹೇಳಿ ಮಗನಿಗೆ ಬ್ಯಾಗ್ ನೀಡಲು ಮುಂದಾಗಿದ್ದರು. ಅನುಮಾನಗೊಂಡ ಸಿಬ್ಬಂದಿ, ಬಟ್ಟೆ ಬ್ಯಾಗ್ ಅನ್ನು ಪರಿಶೀಲಿಸಿದಾಗ ಕಪ್ಪು ಬಣ್ಣದ ಪ್ಲಾಸ್ಟಿಕ್‌ನಲ್ಲಿ ಸುತ್ತಿಡಲಾಗಿದ್ದ ₹ 5 ಲಕ್ಷ ಮೌಲ್ಯದ 200 ಗ್ರಾಂ ಹಶೀಷ್ ಡ್ರಗ್ಸ್ ಪತ್ತೆಯಾಗಿದೆ. ಮಗನ ಜೊತೆ ಜೈಲಿನಲ್ಲಿರುವ ಸ್ನೇಹಿತನ ಹೆಸರು ಹೇಳಿಕೊಂಡು ವ್ಯಕ್ತಿಯೊಬ್ಬರು ಪರಿಚಯವಾಗಿದ್ದರು. ಅ ಸ್ನೇಹಿತನಿಗೆ ಬಟ್ಟೆಗಳನ್ನು ನೀಡುವಂತೆ ಹೇಳಿ ನನಗೆ ಬ್ಯಾಗ್ ಕೊಟ್ಟಿದ್ದರು. ಅದರಲ್ಲಿ ಡ್ರಗ್ಸ್ ಇರುವ ಬಗ್ಗೆ ನನಗೆ ಗೊತ್ತಿರಲಿಲ್ಲ' ಎಂದು ಪೊಲೀಸರು ತಿಳಿಸಿದ್ದಾರೆ.

ಸುದ್ದಿ 2 ನಿಮಿಷ

ಕಾರ್ಮಿಕರ ಮಕ್ಕಳಿಗೆ ಪೈಲಟ್ ತರಬೇತಿ: ಸಚಿವ ಹೆಬ್ಬಾರ್

ಬೆಂಗಳೂರು: ರಾಜ್ಯದ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಮಕ್ಕಳಿಗೆ ಕಟ್ಟಡ ಮತ್ತು ಇತರ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಿಂದ ಉಚಿತವಾಗಿ ವಿಮಾನ ಚಾಲನಾ (ಪೈಲಟ್) ತರಬೇತಿ ನೀಡಲು ನಿರ್ಧರಿಸಲಾಗಿದೆ.

ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್ ನೇತೃತ್ವದಲ್ಲಿ ಗುರುವಾರ ನಡೆದ ಮಂಡಳಿಯ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ. ತರಬೇತಿಗೆ ಆಯ್ಕೆಯಾಗುವ ಮಂಡಳಿಯ ನೋಂದಾಯಿತ ಕಾರ್ಮಿಕರ ಮಕ್ಕಳ ಸಂಪೂರ್ಣ ವೆಚ್ಚವನ್ನು ಭರಿಸುವುದಕ್ಕೆ ಸಭೆಯಲ್ಲಿ ತೀರ್ಮಾನಿಸಲಾಗಿದೆ.

ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ 600ಕ್ಕಿಂತ ಹೆಚ್ಚು ಅಂಕ ಪಡೆದಿರುವ 2,500ಕ್ಕೂ ಹೆಚ್ಚಿನ ಕಾರ್ಮಿಕರ ಮಕ್ಕಳಿಗೆ ಈಗಾಗಲೇ ನೀಡುತ್ತಿರುವ ಪ್ರೋತ್ಸಾಹಧನದ ಜತೆಗೆ ₹ 10,000 ವಿಶೇಷ ಪ್ರೋತ್ಸಾಹಧನ ಮತ್ತು ಅಭಿನಂದನಾ ಪತ್ರ ವಿತರಿಸಲು ಮಂಡಳಿ ನಿರ್ಧರಿಸಿದೆ.

ಸಭೆಯಲ್ಲಿ ಮಾತನಾಡಿದ ಶಿವರಾಂ ಹೆಬ್ಬಾರ್, 'ಕಾರ್ಮಿಕರ ಮಕ್ಕಳು ಕಾರ್ಮಿಕರಾಗಿಯೇ ಉಳಿಯಬಾರದು ಎಂಬುದು ರಾಜ್ಯ ಸರ್ಕಾರದ ನಿಲುವು. ಆದ್ದರಿಂದ ಉಚಿತವಾಗಿ ಪೈಲಟ್ ತರಬೇತಿ ಮತ್ತು ವಿಶೇಷ ಪ್ರೋತ್ಸಾಹಧನ ವಿತರಿಸುವ ನಿರ್ಧಾರವನ್ನು ಕೈಗೊಳ್ಳಲಾಗಿದೆ' ಎಂದರು.

ಕಾರ್ಮಿಕ ಕಲ್ಯಾಣ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಗುರುಪ್ರಸಾದ ಎಂ.ಪಿ, ಕಾರ್ಯದರ್ಶಿ ಮನೋಜ್ ಜೈನ್ ಸಭೆಯಲ್ಲಿದ್ದರು.

ನಿವೃತ್ತರಿಂದ ನೆರವು: ಸಿದ್ದಲಿಂಗ ಶ್ರೀ ಶ್ಲಾಘನೆ

ನೆಲಮಂಗಲ: ನಿವೃತ್ತಿಯ ನಂತರವೂ ಸಂಘಟಿತರಾಗಿ ಬಡವಿದ್ಯಾರ್ಥಿಗಳಿಗೆ ನೆರವು ನೀಡುತ್ತಿರುವುದು ಶ್ಲಾಘನೀಯ ಎಂದು ಬಸವಣ್ಣದೇವರ ಮಠದ ಸಿದ್ದಲಿಂಗ ಸ್ವಾಮೀಜಿ ತಿಳಿಸಿದರು.

ವೀರಶೈವ ಲಿಂಗಾಯತ ನಿವೃತ್ತ ನೌಕರರ ಕ್ಷೇಮಾಭಿವೃದ್ಧಿ ಸಂಘದ 3ನೇ ವರ್ಷದ ವಾರ್ಷಿಕೋತ್ಸವದಲ್ಲಿ ಅವರು ಮಾತನಾಡಿದರು.

ನಿವೃತ್ತಿ ನಂತರ ಹೆಚ್ಚು ಕ್ರಿಯಾಶೀಲರಾಗುತ್ತಾರೆ ಎನ್ನುವುದಕ್ಕೆ ಸಂಘವು ಮೂರನೇ ವರ್ಷ ಪೂರೈಸಿರುವುದೇ ಸಾಕ್ಷಿ ಎಂದರು.

ಬಿಬಿಎಂಪಿ ಮಾಜಿ ಮೇಯರ್ ಗಂಗಾಂಬಿಕೆ ಮಲ್ಲಿಕಾರ್ಜುನ್, ಮುಂದಿನ ಪೀಳಿಗೆಗೆ ಮಠಗಳ ಇತಿಹಾಸ ಹಾಗೂ ಸಂಸ್ಕೃತಿಯನ್ನು ತಿಳಿಸಿಕೊಡುವ ಕೆಲಸ ಆಗಬೇಕು ಎಂದು ಹೇಳಿದರು.

ಸಂಘದ ಅಧ್ಯಕ್ಷ ಆರ್.ನಾಗರಾಜು, ತಾಲ್ಲೂಕಿನ ಸರ್ಕಾರಿ ಶಾಲೆಯ ಸಮಾಜದ ಬಡ ವಿದ್ಯಾರ್ಥಿಗಳಿಗೆ ನೋಟ್‌ಬುಕ್ ಮತ್ತು ಕಲಿಕಾ ಸಾಮಗ್ರಿ ವಿತರಿಸಿದರು. ಮಹಿಳಾ ಘಟಕದ ಅಧ್ಯಕ್ಷರಾಗಿ ಎನ್.ಬಿ.ಸರೋಜಮ್ಮ ಹಾಗೂ ವೀರಶೈವ ಲಿಂಗಾಯತ ವಧು–ವರರ ಅನ್ವೇಷಣಾ ಕೇಂದ್ರ ಅಧ್ಯಕ್ಷರಾಗಿ ಹೇಮಾಪುರ ಚಂದ್ರಶೇಖರ್ ಅವರನ್ನು ಆಯ್ಕೆ ಮಾಡಲಾಯಿತು. ನಗರಸಭಾ ಸದಸ್ಯರಾದ ಸಿ.ಪ್ರದೀಪ್, ಪೂರ್ಣಿಮಾ ಸುಗ್ಗರಾಜು, ಲೋಲಾಕ್ಷಿ ಗಂಗಾಧರ್, ನಾಮನಿರ್ದೇಶಿತ ಸದಸ್ಯೆ ರಾಜಮ್ಮ, ಷಣ್ಮುಖಪ್ಪ, ಕೃಷ್ಣಮೂರ್ತಿ, ನಾಗರಾಜಯ್ಯ, ಸೋಮಶೇಖರಯ್ಯ ಹಾಜರಿದ್ದರು.

ಪ್ರವಾಸಕ್ಕೆ ಹೋಗಿದ್ದವರ ಫ್ಲ್ಯಾಟ್‌ನಲ್ಲಿ ಕಳ್ಳತನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಂಪಿಗೆಹಳ್ಳಿ ಠಾಣೆ ವ್ಯಾಪ್ತಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ಫ್ಲ್ಯಾಟ್‌ನಲ್ಲಿ ಕಳ್ಳತನ ಮಾಡಿದ್ದ ಆರೋಪದಡಿ ಇಬ್ಬರನ್ನು ಪೊಲೀಸರು ಬಂಧಿಸಿದ್ದಾರೆ.

'ಅಮೃತಹಳ್ಳಿ ವರದರಾಜ್ ಬಡಾವಣೆಯ ಇಸ್ಸೈರಾಜ್ ಅಲಿಯಾಸ್ ಕುಂಟ (26) ಹಾಗೂ ಕೊಡಿಗೇ ಹಳ್ಳಿ ಧನಲಕ್ಷ್ಮಿ ಬಡಾವಣೆಯ ಆನಂದ್ ಕುಮಾರ್ ಅಲಿಯಾಸ್ ಡಿಜೆ (22) ಬಂಧಿತರು. ಇವರಿಂದ ₹ 19 ಲಕ್ಷ ಮೌಲ್ಯದ ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ದೂರುದಾರ ಪ್ರವೀಣ್ ಫ್ಲ್ಯಾಟ್‌ಗೆ ಬೀಗ ಹಾಕಿಕೊಂಡು ಕುಟುಂಬ ಸಮೇತ ಮೇ 25ರಂದು ಪ್ರವಾಸಕ್ಕೆ ಹೋಗಿದ್ದರು. ಮೇ 27ರಂದು ರಾತ್ರಿ ಮನೆಗೆ ವಾಪಸು ಬಂದು ನೋಡಿದಾಗ, ಚಿನ್ನಾಭರಣ ಹಾಗೂ ಬೆಳ್ಳಿ ಸಾಮಗ್ರಿ ಕಳ್ಳತನವಾಗಿದ್ದು ಗೊತ್ತಾಗಿತ್ತು. ನಂತರ ಠಾಣೆಗೆ ದೂರು ನೀಡಿದ್ದರು' ಎಂದು ತಿಳಿಸಿದರು.

'ಕೆಲ ಪುರಾವೆಗಳನ್ನು ಸಂಗ್ರಹಿಸಿ ಆರೋಪಿಗಳನ್ನು ಬಂಧಿಸಲಾಗಿದೆ. ಫ್ಲ್ಯಾಟ್‌ನಲ್ಲಿ ಯಾರೂ ಇಲ್ಲದ್ದನ್ನು ಖಚಿತಪಡಿಸಿಕೊಂಡು ರಾತ್ರಿ ಕಳ್ಳತನ ಮಾಡಿರುವುದಾಗಿ ಆರೋಪಿಗಳು ತಪ್ಪೊಪ್ಪಿಕೊಂಡಿದ್ದಾರೆ' ಎಂದು ಹೇಳಿದರು.

'ಹಲವು ತಿಂಗಳಿನಿಂದ ಕಳ್ಳತನ ಮಾಡುತ್ತಿದ್ದ ಆರೋಪಿಗಳು ಅಮೃತಹಳ್ಳಿ, ಯಲಹಂಕ, ಸಂಜಯನಗರ, ದೇವನಹಳ್ಳಿ ಹಾಗೂ ಎಚ್‌ಎಎಲ್ ಠಾಣೆ ವ್ಯಾಪ್ತಿಯಲ್ಲೂ ಕೃತ್ಯ ಎಸಗಿರುವುದು ತನಿಖೆಯಿಂದ ತಿಳಿದುಬಂದಿದೆ' ಎಂದು ಮಾಹಿತಿ ನೀಡಿದರು.

ಕದ್ದಿದ್ದ ವಾಹನ ಪತ್ತೆ: ಆರೋಪಿ ಸೆರೆ

ಬೆಂಗಳೂರು: ಕೆಂಗೇರಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ಕಳವು ಆಗಿದ್ದ ಟಾಟಾ ಸುಮೋ ವಾಹನ ಪತ್ತೆಹಚ್ಚಿ ಆರೋಪಿ ರಘು ಎಂಬಾತನನ್ನು ಬಂಧಿಸುವಲ್ಲಿ ಕೆಂಗೇರಿ ಪೊಲೀಸರು ಯಶಸ್ವಿಯಾಗಿದ್ದಾರೆ.

ಕಚೇರಿ ಎದುರು ನಿಲ್ಲಿಸಿದ್ದ ವಾಹನವನ್ನು ನಕಲಿ ಕೀ ಬಳಸಿ ಕಳವು ಮಾಡಲಾಗಿತ್ತು. ಪೊಲೀಸ್ ಇನ್‌ಸ್ಪೆಕ್ಟರ್ ಸಿ. ವಸಂತ್ ನೇತೃತ್ವದಲ್ಲಿ ತನಿಖೆ ನಡೆಸಿ, ಅಂದಾಜು ₹ 8 ಲಕ್ಷ ಮೌಲ್ಯದ ವಾಹನ ವಶಕ್ಕೆ ಪಡೆಯಲಾಗಿದೆ.

ಡ್ರಗ್ಸ್ ವ್ಯಸನಕ್ಕಾಗಿ ವಾಹನ ಕಳ್ಳತನ

ಬೆಂಗಳೂರು: ಡ್ರಗ್ಸ್ ಹಾಗೂ ಮದ್ಯ ಖರೀದಿಗೆ ಹಣ ಹೊಂದಿಸಲು ದ್ವಿಚಕ್ರ ವಾಹನ ಕದ್ದು ಮಾರುತ್ತಿದ್ದ ಮೂವರು ಆರೋಪಿಗಳನ್ನು ರಾಮಮೂರ್ತಿನಗರ ಪೊಲೀಸರು ಬಂಧಿಸಿದ್ದಾರೆ.

'ಹೊರಮಾವು ವಿಜಯಾ ಬ್ಯಾಂಕ್ ಕಾಲೊನಿಯ ನಿತಿನ್ ಅಲಿಯಾಸ್ ಗುಂಗುರು ಕೂದಲು (23), ರಾಮಮೂರ್ತಿನಗರದ ಮಾರಪ್ಪ ಅಲಿಯಾಸ್ ಮಾದೇಶ (20) ಹಾಗೂ ಬಾಣಸವಾಡಿ ಬಿಎಸ್‌ಎನ್‌ಎಲ್ ಪಾರ್ಕ್‌ನ ಮನೋಜ್ ಅಲಿಯಾಸ್ ಎಮ್ಮೆ (20) ಬಂಧಿತರು. ಇವರಿಂದ ₹ 14.30 ಲಕ್ಷ ಮೌಲ್ಯದ 21 ದ್ವಿಚಕ್ರ ವಾಹನ ಜಪ್ತಿ ಮಾಡಲಾಗಿದೆ' ಎಂದು ಪೊಲೀಸರು ಹೇಳಿದರು.

'ಶಿಕ್ಷಣವನ್ನು ಅರ್ಧಕ್ಕೆ ಮೊಟಕುಗೊಳಿಸಿದ್ದ ಆರೋಪಿಗಳು ಗಾಂಜಾ ಹಾಗೂ ಮದ್ಯದ ವ್ಯಸನಿಯಾಗಿದ್ದರು. ಅದರ ಖರೀದಿಗಾಗಿ ಆರಂಭದಲ್ಲಿ ಜೇಬು ಕಳ್ಳತನ ಮಾಡುತ್ತಿದ್ದರು. ಆದರೆ, ಹಣವೂ ಸಾಲುತ್ತಿರಲಿಲ್ಲ. ಹೀಗಾಗಿ, ಸಾರ್ವಜನಿಕ ಸ್ಥಳ ಹಾಗೂ ಮನೆ ಮುಂದೆ ನಿಲ್ಲಿಸುತ್ತಿದ್ದ ದ್ವಿಚಕ್ರ ವಾಹನಗಳನ್ನು ಲಾಕ್ ಮುರಿದು ಕದ್ದು, ಕಡಿಮೆ ಬೆಲೆಗೆ ಮಾರುತ್ತಿದ್ದ ಆರೋಪಿಗಳು, ಕೆಲ ದಿನ ಬಿಟ್ಟು ದಾಖಲೆ ನೀಡುವುದಾಗಿ ಹೇಳಿ ನಾಪತ್ತೆಯಾಗುತ್ತಿದ್ದರು. ಕೆ.ಜಿ.ಹಳ್ಳಿ, ಕೆ.ಆರ್.ಪುರ, ಆವಲಹಳ್ಳಿ, ತಿಲಕ್‌ನಗರ, ಕಾಮಾಕ್ಷಿಪಾಳ್ಯ, ಸೋಲದೇವನಹಳ್ಳಿ ಠಾಣೆ ವ್ಯಾಪ್ತಿಯಲ್ಲೂ ಆರೋಪಿಗಳು ಕಳ್ಳತನ ಮಾಡಿರುವುದು ತನಿಖೆಯಿಂದ ಗೊತ್ತಾಗಿದೆ' ಎಂದೂ ಹೇಳಿದರು.

ಮಾದಕ ವಸ್ತು ವಶ

ಬೆಂಗಳೂರು: ಡ್ರಗ್ಸ್ ಪೆಡ್ಲಿಂಗ್‌ನಲ್ಲಿ ತೊಡಗಿದ್ದ ಗಿನಿಯಾ ದೇಶದ ಡ್ರಗ್ ಪೆಡ್ಲರ್‌ನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದಾರೆ.

ರಾಮಮೂರ್ತಿನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿ ಕಾರ್ಯಾಚರಣೆ ನಡೆಸಿದ ಪೊಲೀಸರು, ಅಂದಾಜು ₹ 1.5 ಲಕ್ಷ ಮೌಲ್ಯದ 20 ಗ್ರಾಂ ಎಂಡಿಎಂಎ ಕ್ರಿಸ್ಟಲ್, 2 ಮೊಬೈಲ್, ದ್ವಿಚಕ್ರ ವಾಹನ ವಶಕ್ಕೆ ಪಡೆದಿದ್ದಾರೆ.

'ಭಾರತಕ್ಕೆ ಬಂದಿದ್ದ ಆರೋಪಿ ನಗರದಲ್ಲಿನ ಆಫ್ರಿಕಾ ಮೂಲದ ಪರಿಚಯಸ್ಥರಿಂದ ಕಡಿಮೆ ಬೆಲೆಗೆ ಮಾದಕ ವಸ್ತು ಖರೀದಿಸಿ ಹೆಚ್ಚಿನ ಬೆಲೆಗೆ ಕಾಲೇಜು ವಿದ್ಯಾರ್ಥಿಗಳು, ಐಟಿ–ಬಿಟಿ ಉದ್ಯೋಗಿಗಳಿಗೆ ಮಾರುತ್ತಿದ್ದ' ಎಂದು ಸಿಸಿಬಿ ಅಧಿಕಾರಿಗಳು ತಿಳಿಸಿದ್ದಾರೆ.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES

Teachers/ Professors

ಡಾನ್ ಬೋಸ್ಕೋ ಕಾಲೇಜು ಬೆಂಗಳೂರು
ಬೋಸ್ಕೋ ನಗರ, ಟಿ.ಸಿ. ಪಾಳ್ಯ, ಕೆ.ಆರ್.ಪುರಂ ಬೆಂಗಳೂರು–560036
ಮೊ: 8088 420238 | 8310 553655
ಬೇಕಾಗಿದ್ದಾರೆ
ಪದವಿ ತರಗತಿಗಳಿಗಾಗಿ ಈ ಕೆಳಗಿನ ವಿಷಯಗಳಿಗೆ ಅನುಭವಿ ಉಪನ್ಯಾಸಕರು ಬೇಕಾಗಿದ್ದಾರೆ. ಗಣಿತ ಶಾಸ್ತ್ರ, ಪತ್ರಿಕೋದ್ಯಮ, ವಾಣಿಜ್ಯ ಶಾಸ್ತ್ರ, ಕನ್ನಡ, ಇಂಗ್ಲೀಷ್, ಸಂಖ್ಯಾಶಾಸ್ತ್ರ (ಸ್ಟ್ಯಾಟಿಸ್ಟಿಕ್ಸ್), ಕಂಪ್ಯೂಟರ್ ಸೈನ್ಸ್, ಮನಶಾಸ್ತ್ರ (ಎನ್.ಇ.ಟಿ.ಕೆ.ಸೆಟ್, ಪಿಎಚ್.ಡಿ. ಮತ್ತು ಬೋಧನಾ ಅನುಭವ ಇರುವವರು ಅರ್ಜಿ ಸಲ್ಲಿಸಬಹುದು)
ದೈಹಿಕ ಶಿಕ್ಷಣ ನಿರ್ದೇಶಕರು, ಗ್ರಂಥಪಾಲಕರು, ಬೋಧಕೇತರ ಸಿಬ್ಬಂದಿ ಅರ್ಜಿ ಸಲ್ಲಿಸಬಹುದು.
ಅರ್ಜಿಗಳನ್ನು ಕಾಲೇಜಿನ ವಿಳಾಸಕ್ಕೆ ಅಂಚೆ, ಇಮೇಲ್ ಮೂಲಕ ಅಥವಾ ಕಾಲೇಜಿನ ಕಛೇರಿಗೆ ನೇರವಾಗಿಯೂ ಸಲ್ಲಿಸಬಹುದು.
ಕೊನೆಯ ದಿನಾಂಕ 22 ಜೂನ್ 2022 ಕಾರ್ಯದರ್ಶಿಗಳು
ಇಮೇಲ್: career@dbcblr.in ಸ್ಥಳ: ಬೆಂಗಳೂರು

WANTED TEACHERS
St.Mark's English Medium School (Recognised by the Govt of A.P) Nursery to 10th Standard. Pamur- 523108, Prakasam Dist., Andhra Pradesh, Required Qualified and Experienced staff for English, Science, Social Maths and Computers for Primary Section. Salary: Negotiable & free food and accommodation. Contact: Within two days. Ph: 9663357420.

General

URGENT REQUIREMENT of Parking Cashiers For Supervisor Phoenix Market city Mahadevpura below 35 age limit. Contact: 9600800923.

Marketing & Sales

REQ, TEAMLEADER, Telecaller, & Field executive for Banking Loan collection (salary 20000). Direct recruitment to company Contact:- 9620206756, 9620200756.

REQUIRED SALES EXECUTIVE with knowledge of Musical Instruments for Reynold's Inc Music Store, Bangalore. Email Resume to: info@reynoldonline.com

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

Wanted

WANTED VEG and Non Veg Cooking Manager Delivery Boy Cashier 50 Nos Contact: 8892501007/ 9606701007

Overseas

New Zealand
Wants Chefs - SOUTH INDIAN CUISINE
Minimum - 2 years experience in 3 Star + Hotels.
Attractive package.
Send bio-data immediately to: satishtallam@gmail.com

EDUCATIONAL

Correspondence Courses

DIRECT FINAL PUC B.Com BA BBA BCA MBA B.Ed Diploma BE D.Pharm PhD: 9739077186/ 8618506480

Special Courses

JOB ORIENTED Course Diploma in Student Counselling 6months ONLINE CLASSES, Starts 12.07.2022 WhatsApp 9886044221 www.darwinpsychologycentre.com

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

ಕಾರ್ಯಪಾಲಕ ಅಭಿಯಂತರರ ಕಛೇರಿ, ಮಹದೇವಪುರ ವಿಭಾಗ,ವೈಟ್‌ಫೀಲ್ಡ್ ರಸ್ತೆ, ಫೀನಿಕ್ಸ್ ಮಾಲ್ ಎದುರು, ಬೆಂಗಳೂರು–560 048.

ಸಂ: ಕಾಪಾಅ/ಮ.ಪುರ/ಟೆಂಡ್/06/2022–23 ದಿನಾಂಕ: 16.06.2022

ಅಲ್ಪಾವಧಿ ಟೆಂಡರ್‌ಗಾಗಿ ಆಹ್ವಾನ (ಐಎಫ್‌ಟಿ)

(ಜಿಒಕೆ ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಮಾತ್ರ) (ದ್ವಿಲಕೋಟೆ ಪದ್ಧತಿ)

ಕಾರ್ಯಪಾಲಕ ಅಭಿಯಂತರರು ಮಹದೇವಪುರ ವಿಭಾಗ, ಇವರು ಅರ್ಹ ಸೇವಾದಾರರಿಂದ ಕೆಳಕಂಡ ಸೇವೆಗಳನ್ನು ಒದಗಿಸಲು ಟೆಂಡರನ್ನು ಆಹ್ವಾನಿಸಿದ್ದಾರೆ.

ಮಹದೇವಪುರ ವಿಧಾನಸಭಾ ಕ್ಷೇತ್ರದ ವಿವಿಧ ವಾರ್ಡ್‌ಗಳಲ್ಲಿ ರಸ್ತೆ, ಒಳಚರಂಡಿ, ಫುಟ್‌ಪಾತ್‌ಗಳ ಸಮಗ್ರ ಅಭಿವೃದ್ಧಿ, ಬೀದಿದೀಪಗಳು, ಕೇಬಲ್ಸ್ ಮತ್ತು ಟೈಮರ್ಸ್ ಮತ್ತು ಇತರೆ ಉಪಕರಣಗಳನ್ನು ಒದಗಿಸುವುದು ಸೇರಿದಂತೆ ಇತರೆ ಅಭಿವೃದ್ಧಿ ಕಾಗಾರಿಗಳ ನಿರ್ಮಾಣ, ಮೇಲ್ವಿಚಾರಣೆ, ಗುಣಮಟ್ಟ ನಿಯಂತ್ರಣ, ಬಿಲ್ಲುಗಳ ತಯಾರಿ ಕಾಮಗಾರಿಗಳಿಗಾಗಿ ಯೋಜನಾ ವ್ಯವಸ್ಥಾಪನಾ ಸಲಹಾ ಸೇವೆಗಳನ್ನು ಒದಗಿಸುವುದು.

ಕ್ರ. ಸಂ	ಪ್ಯಾಕೇಜ್ ಕಾಮಗಾರಿಗಳ ವಿವರ	ಪಿಎಂಸಿಗಾಗಿ ಗರಿಷ್ಠ ಸಲಹಾ ಶುಲ್ಕ (ರೂ.ಗಳಲ್ಲಿ)	ಇಎಂಡಿ (ರೂ.ಗಳಲ್ಲಿ)
1	ವಾರ್ಡ್ ಸಂಖ್ಯೆ 150, ಬೆಳ್ಳಂದೂರು, ಮಾನ್ಯ ಮುಖ್ಯಮಂತ್ರಿಗಳ ನವ–ನಗರೋತ್ಥಾನ ಯೋಜನೆ, ಅನುಬಂಧ–09, ಕಾಮಗಾರಿ ಕ್ರ. ಸಂ. 1ರಿಂದ 13 (13 ಕಾಮಗಾರಿಗಳು – ಪ್ಯಾಕೇಜ್–22).	9,10,000/-	22,750/-
2	ವಾರ್ಡ್ ಸಂಖ್ಯೆ 150, ಬೆಳ್ಳಂದೂರು, ವಾರ್ಡ್ ಸಂಖ್ಯೆ 86, ಮಾರತ್ತಹಳ್ಳಿ ವಾರ್ಡ್ ಸಂಖ್ಯೆ 83, ಕಾಡುಗುಡಿ ಮತ್ತು ವಾರ್ಡ್ ಸಂಖ್ಯೆ 84, ಹಗದೂರು, ಮಾನ್ಯ ಮುಖ್ಯಮಂತ್ರಿಗಳ ನವ–ನಗರೋತ್ಥಾನ ಯೋಜನೆ, ಅನುಬಂಧ–09, ಕಾಮಗಾರಿ ಕ್ರ. ಸಂ. 14ರಿಂದ 36 (23 ಕಾಮಗಾರಿಗಳು – ಪ್ಯಾಕೇಜ್–23).	9,10,000/-	22,750/-
3	ವಾರ್ಡ್ ಸಂಖ್ಯೆ 84, ಹಗದೂರು ಮತ್ತು ವಾರ್ಡ್ ಸಂಖ್ಯೆ 149, ವರ್ತೂರು, ಮಾನ್ಯ ಮುಖ್ಯಮಂತ್ರಿಗಳ ನವ–ನಗರೋತ್ಥಾನ ಯೋಜನೆ, ಅನುಬಂಧ–09, ಕಾಮಗಾರಿ ಕ್ರ. ಸಂ. 37ರಿಂದ 63 (27 ಕಾಮಗಾರಿಗಳು – ಪ್ಯಾಕೇಜ್–24).	9,10,000/-	22,750/-
4	ವಾರ್ಡ್ ಸಂಖ್ಯೆ 149, ವರ್ತೂರು, ವಾರ್ಡ್ ಸಂಖ್ಯೆ 54, ಹೂಡಿ ಮತ್ತು ವಾರ್ಡ್ ಸಂಖ್ಯೆ 82, ಗರುಡಾಚಾರ್‌ಪಾಳ್ಯ, ಮಾನ್ಯ ಮುಖ್ಯಮಂತ್ರಿಗಳ ನವ–ನಗರೋತ್ಥಾನ ಯೋಜನೆ, ಅನುಬಂಧ–09, ಕಾಮಗಾರಿ ಕ್ರ. ಸಂ. 64ರಿಂದ 82 (19 ಕಾಮಗಾರಿಗಳು – ಪ್ಯಾಕೇಜ್–25).	9,17,000/-	22,925/-
5	ವಾರ್ಡ್ ಸಂಖ್ಯೆ 82, ಗರುಡಾಚಾರ್‌ಪಾಳ್ಯ ಮತ್ತು ವಾರ್ಡ್ ಸಂಖ್ಯೆ 85, ದೊಡ್ಡನೆಕ್ಕುಂದಿ, ಮಾನ್ಯ ಮುಖ್ಯಮಂತ್ರಿಗಳ ನವ–ನಗರೋತ್ಥಾನ ಯೋಜನೆ, ಅನುಬಂಧ–09, ಕಾಮಗಾರಿ ಕ್ರ. ಸಂ. 83ರಿಂದ 102 (20 ಕಾಮಗಾರಿಗಳು – ಪ್ಯಾಕೇಜ್–26).	9,03,000/-	22,575/-
6	ಹೂಡಿ ಉಪ ವಿಭಾಗದ ವಾರ್ಡ್ ಸಂಖ್ಯೆ 54, ಹೂಡಿ, ವಾರ್ಡ್ ಸಂಖ್ಯೆ 82, ಗರುಡಾಚಾರ್‌ಪಾಳ್ಯ, ವಾರ್ಡ್ ಸಂಖ್ಯೆ 85, ದೊಡ್ಡನೆಕ್ಕುಂದಿ, ಬಿಬಿಎಂಪಿ ಅನುದಾನ– 2021–22 ರ ಅಡಿಯಲ್ಲಿ (33 ಕಾಮಗಾರಿಗಳು – ಪ್ಯಾಕೇಜ್–01).	10,00,000/-	25,000/-
7	ವೈಟ್‌ಫೀಲ್ಡ್ ಉಪ ವಿಭಾಗದ ವಾರ್ಡ್ ಸಂಖ್ಯೆ 83, ಕಾಡುಗುಡಿ, ವಾರ್ಡ್ ಸಂಖ್ಯೆ 84, ಹಗದೂರು, ವಾರ್ಡ್ ಸಂಖ್ಯೆ 149 ವರ್ತೂರು, ಬಿಬಿಎಂಪಿ ಅನುದಾನ– 2021–22 ರ ಅಡಿಯಲ್ಲಿ (26 ಕಾಮಗಾರಿಗಳು – ಪ್ಯಾಕೇಜ್–02).	7,50,000/-	18,750/-
8	ಮಾರತ್ತಹಳ್ಳಿ ಉಪ ವಿಭಾಗದ ವಾರ್ಡ್ ಸಂಖ್ಯೆ 86, ಮಾರತ್ತಹಳ್ಳಿ ಮತ್ತು ವಾರ್ಡ್ ಸಂಖ್ಯೆ 150, ಬೆಳ್ಳಂದೂರು ಬಿಬಿಎಂಪಿ ಅನುದಾನ– 2021–22 ರ ಅಡಿಯಲ್ಲಿ (12 ಕಾಮಗಾರಿಗಳು – ಪ್ಯಾಕೇಜ್–03).	4,00,000/-	10,000/-
9	ವಾರ್ಡ್ ಸಂಖ್ಯೆ 84, 149 ಮತ್ತು 150 ಬಿಬಿಎಂಪಿ ಅನುದಾನ– 2020–21 ರ ಅಡಿಯಲ್ಲಿ (10 ಕಾಮಗಾರಿಗಳು – ಪ್ಯಾಕೇಜ್–04).	4,49,960/-	11,249/-
10	ವಾರ್ಡ್ ಸಂಖ್ಯೆ 83 ಮತ್ತು 54 ಬಿಬಿಎಂಪಿ ಅನುದಾನ– 2020–21 ರ ಅಡಿಯಲ್ಲಿ (05 ಕಾಮಗಾರಿಗಳು – ಪ್ಯಾಕೇಜ್–05).	2,49,975/-	6,249/-
11	ವಾರ್ಡ್ ಸಂಖ್ಯೆ 150ರ 1) ಕೆಸವನಹಳ್ಳಿ ತುಳಸಿ ಬಡಾವಣೆ, 2) ಬೆಳ್ಳಂದೂರು ಗ್ರಾಮ ಮತ್ತು 3) ಜುನ್ನಸಂದ್ರ ಗ್ರೀನ್ ವಿಲ್ಲೆ ಬಡಾವಣೆ, ಬಿಬಿಎಂಪಿ ಅನುದಾನ– 2021–22 ರ ಅಡಿಯಲ್ಲಿ (03 ಕಾಮಗಾರಿಗಳು – ಪ್ಯಾಕೇಜ್–06).	1,49,985/-	3,750/-
12	ವಾರ್ಡ್ ಸಂಖ್ಯೆ 85ರ 1) ಜುನ್ನಸಂದ್ರ ಮಾರುತಿ ಗಾರ್ಡನ್ 2) ದೊಡ್ಡಕ್ಕನಹಳ್ಳಿ ಆಂಧ್ರ ಬ್ಯಾಂಕ್ ಸುತ್ತಮುತ್ತ, 3) ಆಶ್ರಯ ಬಡಾವಣೆ 1ನೇ ಮತ್ತು 2ನೇ ಹಂತ, ಬಿಬಿಎಂಪಿ ಅನುದಾನ– 2021–22 ರ ಅಡಿಯಲ್ಲಿ (03 ಕಾಮಗಾರಿಗಳು – ಪ್ಯಾಕೇಜ್–07).	1,24,990/-	3,125/-
13	1) ವಾರ್ಡ್ ಸಂಖ್ಯೆ 85ರ ಬಿಇಎಂಎಲ್ ಬಡಾವಣೆ (ತುಬರಹಳ್ಳಿ) 2) ವಾರ್ಡ್ ಸಂಖ್ಯೆ 54, ಹೂಡಿಯ ಆಲ್ಫಾ ಗಾರ್ಡನ್ಸ್, 3) ವಾರ್ಡ್ ಸಂಖ್ಯೆ 54, ಹೂಡಿಯ ಕುವೆಂಪು ಬಡಾವಣೆ, ಬೈರತಿ. ಬಿಬಿಎಂಪಿ ಅನುದಾನ– 2021–22 ರ ಅಡಿಯಲ್ಲಿ (03 ಕಾಮಗಾರಿಗಳು – ಪ್ಯಾಕೇಜ್–08).	1,49,985/-	3,750/-
14	1) ವಾರ್ಡ್ ಸಂಖ್ಯೆ 83ರ ಕಾಡುಗುಡಿಯ 1) ಪೃಥ್ವಿ ಬಡಾವಣೆ, 2) ಉಪಕಾರ್ ಬಡಾವಣೆ. ಬಿಬಿಎಂಪಿ ಅನುದಾನ– 2021–22 ರ ಅಡಿಯಲ್ಲಿ (02 ಕಾಮಗಾರಿಗಳು – ಪ್ಯಾಕೇಜ್–09).	99,990/-	2,500/-
15	1) ವಾರ್ಡ್ ಸಂಖ್ಯೆ 83ರ ಕಾಡುಗುಡಿಯ 1) ಪಟಾಲಮ್ಮ ಬಡಾವಣೆ, 2) ಮೈತ್ರಿ ಬಡಾವಣೆಯ ಉಳಿದ ಅಡ್ಡರಸ್ತೆಗಳು. ಬಿಬಿಎಂಪಿ ಅನುದಾನ– 2021–22 ರ ಅಡಿಯಲ್ಲಿ (02 ಕಾಮಗಾರಿಗಳು – ಪ್ಯಾಕೇಜ್–10).	99,990/-	2,500/-
16	ವಾರ್ಡ್ ಸಂಖ್ಯೆ 54– ಹೂಡಿ, ವಾರ್ಡ್ ಸಂಖ್ಯೆ 82–ಗರುಡಾಚಾರ್‌ಪಾಳ್ಯ, ವಾರ್ಡ್ ಸಂಖ್ಯೆ 85–ದೊಡ್ಡನೆಕ್ಕುಂದಿ, ವಾರ್ಡ್ ಸಂಖ್ಯೆ 86–ಮಾರತ್ತಹಳ್ಳಿ (04 ಕಾಮಗಾರಿಗಳು) (ಪ್ಯಾಕೇಜ್–1) ಅಂದಾಜು ಮೊತ್ತ:ರೂ. 332.00 ಲಕ್ಷಗಳು	1,66,000/-	4,150/-
17	ವಾರ್ಡ್ ಸಂಖ್ಯೆ 83–ಕಾಡುಗುಡಿ, ವಾರ್ಡ್ ಸಂಖ್ಯೆ 84–ಹಗದೂರು, ವಾರ್ಡ್ ಸಂಖ್ಯೆ 149–ವರ್ತೂರು, (06 ಕಾಮಗಾರಿಗಳು) (ಪ್ಯಾಕೇಜ್–2) ಅಂದಾಜು ಮೊತ್ತ:ರೂ. 474.00 ಲಕ್ಷಗಳು	2,37,000/-	5,925/-
18	ವಾರ್ಡ್ ಸಂಖ್ಯೆ 150–ಬೆಳ್ಳಂದೂರು (02 ಕಾಮಗಾರಿಗಳು) (ಪ್ಯಾಕೇಜ್–3) ಅಂದಾಜು ಮೊತ್ತ:ರೂ. 194.00 ಲಕ್ಷಗಳು	97,000/-	2,425/-

1)ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ ಟೆಂಡರ್ ಡಾಕ್ಯುಮೆಂಟ್‌ಗಳು ದೊರೆಯುವ ದಿನಾಂಕ: **20.06.2022ರಿಂದ.** 2) ಪೂರ್ವಭಾವಿ ಸಭೆ: **21.06.2022ರ ಮಧ್ಯಾಹ್ನ 3.00 ಗಂಟೆಗೆ.** 3) ಬಿಡ್ ಡಾಕ್ಯುಮೆಂಟ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: **30.06.2022 ರ ಸಂಜೆ 4.00 ಗಂಟೆಯವರೆಗೆ** 4) ತಾಂತ್ರಿಕ ಬಿಡ್‌ಗಳನ್ನು ತೆರೆಯುವ ದಿನಾಂಕ: **01.07.2022 ರ ಸಂಜೆ 4.30ಗಂಟೆಗೆ.** ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: **https://eproc.karnataka.gov.in** ನಲ್ಲಿ ಲಾಗಿನ್ ಮಾಡಿ ಪಡೆಯಬಹುದು ಅಥವಾ ಕೆಳಸಹಿದಾರರ ಕಛೇರಿಯನ್ನು ಸಂಪರ್ಕಿಸಬಹುದು.

ಸಹಿ/– ಕಾರ್ಯಪಾಲಕ ಅಭಿಯಂತರರು, ಮಹದೇವಪುರ ವಿಭಾಗ.

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.

ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೋವಿಡ್ ಜೊತೆ ಇತರ ವೈರಾಣು ಸೋಂಕು ಪ್ರಕರಣಗಳ ಹೆಚ್ಚಳ

ನಗರದಲ್ಲಿ 4,346 ಸೋಂಕಿತರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಶುಕ್ರವಾರ 610 ಮಂದಿ ಕೋವಿಡ್ ಪೀಡಿತರಾಗಿರುವುದು ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 4,346ಕ್ಕೆ ತಲುಪಿದೆ.

ಗುರುವಾರ 791 ಪ್ರಕರಣಗಳು ನಗರದಲ್ಲಿ ದೃಢಪಟ್ಟಿದ್ದವು. ಆ ಸಂಖ್ಯೆ ಇಳಿಕೆಯಾಗಿದೆ. ಸೋಂಕಿತರಲ್ಲಿ 462 ಮಂದಿ ಚೇತರಿಸಿಕೊಂಡಿದ್ದಾರೆ. 83 ವರ್ಷದ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ.

ನಗರದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 17.94 ಲಕ್ಷ ದಾಟಿದೆ. ಅವರಲ್ಲಿ 17.73 ಲಕ್ಷಕ್ಕೂ ಅಧಿಕ ಮಂದಿ ಚೇತರಿಸಿಕೊಂಡಿದ್ದಾರೆ. ಈವರೆಗೆ ಕೋವಿಡ್‌ಗೆ ಸಾವಿಗೀಡಾದವರ ಒಟ್ಟು ಸಂಖ್ಯೆ 16,966ಕ್ಕೆ ಏರಿಕೆಯಾಗಿದೆ.

ರಾಜ್ಯದಲ್ಲಿ ಒಂದು ದಿನದ ಅವಧಿಯಲ್ಲಿ 22,586 ಮಂದಿಗೆ ಕೋವಿಡ್ ಪರೀಕ್ಷೆಗಳನ್ನು ನಡೆಸಲಾಗಿದೆ. 12 ಜಿಲ್ಲೆಗಳಲ್ಲಿ ಹೊಸದಾಗಿ ಪ್ರಕರಣಗಳು ವರದಿಯಾಗಿದ್ದು, 634 ಮಂದಿ ಕೋವಿಡ್ ಪೀಡಿತರಾಗಿದ್ದಾರೆ. ಸೋಂಕು ದೃಢ ಪ್ರಮಾಣ ಶೇ 2.80ರಷ್ಟು ವರದಿಯಾಗಿದೆ. ಇಬ್ಬರು ಮೃತಪಟ್ಟಿರುವುದು ದೃಢಪಟ್ಟಿದೆ. ಸಕ್ರಿಯ ಪ್ರಕರಣಗಳ ಸಂಖ್ಯೆ 4,500ಕ್ಕೆ ಏರಿಕೆಯಾಗಿದೆ.

ರಾಜ್ಯದಲ್ಲಿ ಈವರೆಗೆ ಕೋವಿಡ್ ಪೀಡಿತರಾದವರ ಒಟ್ಟು ಸಂಖ್ಯೆ 39.59 ಲಕ್ಷ ದಾಟಿದೆ. 39.14 ಲಕ್ಷಕ್ಕೂ ಹೆಚ್ಚು ಮಂದಿ ಚೇತರಿಸಿಕೊಂಡಿದ್ದಾರೆ. ಕೋವಿಡ್‌ಗೆ ಈವರೆಗೆ ಮೃತಪಟ್ಟವರ ಒಟ್ಟು ಸಂಖ್ಯೆ 40,070ಕ್ಕೆ ಏರಿಕೆಯಾಗಿದೆ.

ಶೇ 95.42ರಷ್ಟು ಮಂದಿ ಸಂಪರ್ಕಿತರ ಗುರುತಿಸಿಲ್ಲ

ಬೆಂಗಳೂರು: ನಗರದಲ್ಲಿ ವರದಿಯಾಗುತ್ತಿರುವ ಬಹುತೇಕ ಪ್ರಕರಣಗಳಲ್ಲಿ ಸೋಂಕಿತರಿಗೆ ಲಕ್ಷಣಗಳು ಗೋಚರಿಸುತ್ತಿಲ್ಲ. ಒಂದು ವಾರದಲ್ಲಿ ಶೇ 95.42ರಷ್ಟು ಪ್ರಕರಣಗಳಲ್ಲಿ ಸಂಪರ್ಕಿತರನ್ನೇ ಗುರುತಿಸಲಾಗಿಲ್ಲ.

ರಾಜ್ಯದಲ್ಲಿ 7 ದಿನಗಳ ಪ್ರಕರಣಗಳನ್ನು ಆಧರಿಸಿ ಕೋವಿಡ್ ವಾರ್ ರೂಮ್ ವಿಶ್ಲೇಷಣೆ ಮಾಡಿದೆ. ಜೂನ್ 9ರಿಂದ 15ರ ವೇಳೆಗೆ ನಗರದಲ್ಲಿ 3,799 ಪ್ರಕರಣಗಳು ದೃಢಪಟ್ಟಿವೆ. ಇಷ್ಟು ಮಂದಿಯಿಂದ 308 ನೇರ ಸಂಪರ್ಕಿತರು ಹಾಗೂ 241 ಪರೋಕ್ಷ ಸಂಪರ್ಕಿತರನ್ನು ಗುರುತಿಸಲಾಗಿದೆ. ಪತ್ತೆ ಪ್ರಮಾಣ ಕ್ರಮವಾಗಿ ಶೇ 0.08 ಹಾಗೂ 0.06 ರಷ್ಟು ಇದೆ. ರಾಜ್ಯದ ಸರಾಸರಿ 0.09 ಹಾಗೂ 0.07 ರಷ್ಟು ಇದೆ.

ಎರಡು ವಾರಗಳಿಂದ ಪ್ರಕರಣಗಳ ಸಂಖ್ಯೆ ಏರಿಕೆಯಾಗಿದೆ. ವಾರದ ದೃಢ ಪ್ರಮಾಣ ಶೇ 3.28ರಷ್ಟಿದ್ದು, ರಾಜ್ಯದ ಸರಾಸರಿ 2.28ರಷ್ಟಿದೆ. ಮರಣಪ್ರಮಾಣ ದರ ರಾಜ್ಯದಲ್ಲಿ ಶೇ 0.06ರಷ್ಟು, ನಗರದಲ್ಲಿ ಶೇ 0.03ರಷ್ಟಿದೆ.

31 ಮಂದಿಗೆ ಚಿಕಿತ್ಸೆ: ಕೋವಿಡ್ ಪೀಡಿತರಲ್ಲಿ 31 ಮಂದಿಗೆ ವಿವಿಧ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಒದಗಿಸಲಾಗುತ್ತಿದೆ. ದಾಖಲಾಗುತ್ತಿರುವ ಹೆಚ್ಚಿನವರಿಗೆ ಸಾಮಾನ್ಯ ಹಾಸಿಗೆಗಳಲ್ಲಿಯೇ ಚಿಕಿತ್ಸೆ ನೀಡಲಾಗುತ್ತಿದೆ.

ಸೋಂಕಿತರ ಚಿಕಿತ್ಸೆಗೆ ಮೀಸಲಿಟ್ಟಿರುವ 2,395 ಹಾಸಿಗೆಗಳಲ್ಲಿ 2,364 ಹಾಸಿಗೆಗಳು ಖಾಲಿ ಉಳಿದಿವೆ. ಪ್ರಕರಣಗಳ ಸಂಖ್ಯೆ ಹೆಚ್ಚಳವಾಗುತ್ತಿರುವುದರಿಂದ ಚಿಕಿತ್ಸಾ ನಿರ್ಧಾರ ಕೇಂದ್ರಗಳಲ್ಲಿ (ಟ್ರಯಾಜ್ ಸೆಂಟರ್) ಸೋಂಕಿತರನ್ನು ವಿಶ್ಲೇಷಣೆಗೆ ಒಳಪಡಿಸಲಾಗುತ್ತಿದೆ.

‘ಕೋವಿಡ್ ಮೊದಲ ಅಲೆಯಲ್ಲಿ ಸಂಪರ್ಕ ಪತ್ತೆಗೆ ಹೆಚ್ಚಿನ ಆದ್ಯತೆ ನೀಡಲಾಗಿತ್ತು. ಎರಡನೇ ಹಾಗೂ ಮೂರನೇ ಅಲೆಯಲ್ಲಿ ಅಧಿಕ ಸಂಖ್ಯೆಯಲ್ಲಿ ಪ್ರಕರಣಗಳು ವರದಿಯಾಗಿದ್ದರಿಂದ ಸಂಪರ್ಕ ಪತ್ತೆಗೆ ಹಿನ್ನಡೆಯಾಯಿತು. ಬಹುತೇಕ ಪ್ರಕರಣಗಳಲ್ಲಿ ಸೋಂಕಿನ ಲಕ್ಷಣಗಳೇ ಬಹಿರಂಗವಾಗಿ ಗೋಚರಿಸುತ್ತಿಲ್ಲ. ಸೋಂಕಿತರು ಸ್ವಯಂಪ್ರೇರಿತರಾಗಿ ಸಂಪರ್ಕಿತರ ವಿವರ ಒದಗಿಸಿ, ಪ್ರತ್ಯೇಕವಾಸಕ್ಕೆ ಒಳಗಾಗಬೇಕು. ಆಗ ಸೋಂಕು ಹರಡುವಿಕೆಯನ್ನು ತಕ್ಕಮಟ್ಟಿಗೆ ನಿಯಂತ್ರಿಸಬಹುದು’ ಎಂದು ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

‘ಹವಾಮಾನ ಬದಲಾವಣೆ: ವೈರಾಣು ಸೋಂಕು ಹೆಚ್ಚಳ’

ಬೆಂಗಳೂರು: ‘ಹವಾಮಾನ ಬದಲಾವಣೆಯಿಂದ ನಗರದಲ್ಲಿ ಡೆಂಗಿ, ಚಿಕೂನ್‌ಗುನ್ಯ, ಕೋವಿಡ್, ಫ್ಲೂ ಜ್ವರದ (ಇನ್‌ಫ್ಲುಯೆಂಝಾ) ಜತೆಗೆ ವೈರಾಣು ಸೋಂಕು ಕಾಣಿಸಿಕೊಳ್ಳುತ್ತಿದೆ. ಆಸ್ಪತ್ರೆ ದಾಖಲಾತಿ ಪ್ರಕಾರ ಕಳೆದ ವರ್ಷಕ್ಕೆ ಹೋಲಿಸಿದರೆ ಜೂನ್ ತಿಂಗಳಲ್ಲಿ ಸೋಂಕಿತರ ಸಂಖ್ಯೆ ಶೇ 15 ರಷ್ಟು ಹೆಚ್ಚಳವಾಗಿದೆ’ ಎಂದು ನಾರಾಯಣ ಹೆಲ್ತ್ ಸಿಟಿಯ ಆಂತರಿಕ ಔಷಧ ವಿಭಾಗದ ಸಲಹೆಗಾರ ಡಾ. ಮಹೇಶ್ ಕುಮಾರ್ ತಿಳಿಸಿದ್ದಾರೆ.

‘ವಾತಾವರಣದಲ್ಲಿನ ಬದಲಾವಣೆಗಳು ದೇಹದ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತವೆ. ಮಧ್ಯಂತರ ಮಳೆಯು ಡೆಂಗಿ ಪ್ರಕರಣಗಳ ಹೆಚ್ಚಳಕ್ಕೆ ಕಾರಣವಾಗುತ್ತಿದೆ. ಪ್ರತಿನಿತ್ಯ ಸರಾಸರಿ 3ರಿಂದ 4 ಅತಿಸಾರ, 5ರಿಂದ 6 ಟೈಫಾಯಿಡ್, 4ರಿಂದ 5 ಕೋವಿಡ್ ಹಾಗೂ 4ರಿಂದ 6 ಕಾಲರಾ ಪ್ರಕರಣಗಳು ಆಸ್ಪತ್ರೆಯಲ್ಲಿ ದೃಢಪಡುತ್ತಿವೆ. ಹೊರರೋಗಿ ವಿಭಾಗದಲ್ಲಿ ಪ್ರತಿದಿನ 25ರಿಂದ 30 ಡೆಂಗಿ ರೋಗಿಗಳನ್ನು ನೋಡುತ್ತಿದ್ದೇವೆ. ಅವರಲ್ಲಿ 5ರಿಂದ 6 ಮಂದಿ ತೀವ್ರತರ ಅಸ್ವಸ್ಥರಾಗಿರುತ್ತಾರೆ. ಆದ್ದರಿಂದ ಅಗತ್ಯ ಮುನ್ನೆಚ್ಚರಿಕೆ ಕ್ರಮಗಳನ್ನು ಪಾಲಿಸಬೇಕು’ ಎಂದಿದ್ದಾರೆ.

‘ಕೆಲ ದಿನಗಳಿಂದ ಮಳೆಯಾಗುತ್ತಿರುವುದರಿಂದ ಸೊಳ್ಳೆಗಳ ಉತ್ಪತ್ತಿಯೂ ಹೆಚ್ಚಾಗಬಹುದು. ಜ್ವರ, ಮೈ–ಕೈ ನೋವು ಮತ್ತು ಕೀಲು ನೋವು, ತೀವ್ರತರ ತಲೆನೋವು ಸೇರಿದಂತೆ ವಿವಿಧ ಲಕ್ಷಣಗಳು ಕಾಣಿಸಿಕೊಂಡರೆ ಕೂಡಲೇ ಹತ್ತಿರ ಸರ್ಕಾರಿ ಆರೋಗ್ಯ ಕೇಂದ್ರಗಳಿಗೆ ತೆರಳಿ, ತಪಾಸಣೆ ಮಾಡಿಸಿಕೊಳ್ಳಬೇಕು’ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಪ್ರತಿಭಟನೆಗೆ ಬೆಂಬಲ

ಬೆಂಗಳೂರು: ‘ವಿಶ್ವಮಾನವ ಕ್ರಾಂತಿಕಾರಿ ಮಹಾಕವಿ ಕುವೆಂಪು ಹೋರಾಟ ಸಮಿತಿ’ಯು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಜೂನ್ 18ರಂದು ಆಯೋಜಿಸಿರುವ ಬೃಹತ್ ಪ್ರತಿಭಟನೆಗೆ ‘ಕ್ಯಾಂಪಸ್ ಫ್ರಂಟ್ ಆಫ್ ಇಂಡಿಯಾ’ದ ರಾಜ್ಯ ಸಮಿತಿ ಬೆಂಬಲ ವ್ಯಕ್ತಪಡಿಸಿದೆ.

‘ಕನ್ನಡಿಗರನ್ನು ಅವಮಾನಿಸಲಾಗಿದೆ. ಅನೇಕ ಸಾಹಿತಿಗಳ ಪಠ್ಯ ಕೈಬಿಡಲಾಗಿದೆ. ಸ್ವಾತಂತ್ರ್ಯ ಹೋರಾಟಗಾರರ ಇತಿಹಾಸ ತಿರುಚಿ ಹೆಡಗೇವಾರ್ ಭಾಷಣ ಸೇರಿಸಲಾಗಿದೆ. ಶಿಕ್ಷಣದ ಕೇಸರೀಕರಣಕ್ಕೆ ರಾಜ್ಯ ಸರ್ಕಾರವು ಮುಂದಾಗಿದ್ದು, ಈ ತೀರ್ಮಾನವನ್ನು ರಾಜ್ಯದ ವಿದ್ಯಾರ್ಥಿಗಳು ಖಂಡಿಸಬೇಕು. ಹೋರಾಟಕ್ಕೆ ಎಲ್ಲಾ ವಿದ್ಯಾರ್ಥಿಗಳು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ, ಯಶಸ್ವಿಗೊಳಿಸಬೇಕು’ ಎಂದು ರಾಜ್ಯ ಅಧ್ಯಕ್ಷ ಅತಾವುಲ್ಲ ಪುಂಜಾಲಕಟ್ಟೆ ಪ್ರಕಟಣೆಯಲ್ಲಿ ಮನವಿ ಮಾಡಿದ್ದಾರೆ.

ವಾಣಿಜ್ಯ ಶಿಕ್ಷಣ ಪ್ರವೇಶಕ್ಕೆ ಅವಕಾಶ

ಬೆಂಗಳೂರು: ನಗರದ ಕೆ.ಆರ್. ವೃತ್ತದ ಬಳಿಯ ಸರ್ಕಾರಿ ಜಿ.ಆರ್. ಇನ್‌ಸ್ಟಿಟ್ಯೂಟ್ ಆಫ್ ಕಮರ್ಷಿಯಲ್ ಪ್ರಾಕ್ಟಿಸ್ ಪಾಲಿಟೆಕ್ನಿಕ್‌ನಲ್ಲಿ ಕೆಲವು ಸೀಟುಗಳು ಲಭ್ಯವಿದ್ದು, ಆಸಕ್ತರಿಂದ ಅರ್ಜಿ ಆಹ್ವಾನಿಸಲಾಗಿದೆ.

ವಾಣಿಜ್ಯ ಶಿಕ್ಷಣ ಪಡೆಯಲು ಆಸಕ್ತರಾದ ಎಸ್ಸೆಸ್ಸೆಲ್ಸಿ ಉತ್ತೀರ್ಣರಾದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಜೂನ್ 20 ಅರ್ಜಿ ಸಲ್ಲಿಸಲು ಕೊನೆಯ ದಿನ. ಹೆಚ್ಚಿನ ಮಾಹಿತಿಗೆ ಮೊಬೈಲ್ ಸಂಖ್ಯೆ 98800 39144 ಸಂಪರ್ಕಿಸಿ.

ಚಿರಾಪುಂಜಿ: ದಾಖಲೆಯ 972 ಮಿ.ಮೀ. ಮಳೆ

ನವದೆಹಲಿ (ಪಿಟಿಐ): ಈಶಾನ್ಯ ಭಾರತದ ವಿವಿಧ ರಾಜ್ಯಗಳಲ್ಲಿ ಶುಕ್ರವಾರ ಮುಂಗಾರು ಮಳೆ ಆರ್ಭಟಿಸಿದೆ. ಮೇಘಾಲಯದ ಪೂರ್ವ ಖಾಸಿ ಬೆಟ್ಟ ಪ್ರದೇಶದ ಸೊಹ್ರಾದಲ್ಲಿ (ಹಿಂದಿನ ಚಿರಾಪುಂಜಿ) 24 ಗಂಟೆಗಳಲ್ಲಿ 972 ಮಿ.ಮೀ ಮಳೆ ಸುರಿದಿದ್ದು, ಇದು ಹೊಸ ದಾಖಲೆಯಾಗಿದೆ.

1995ರ ಜೂನ್ ಬಳಿಕ, 24 ಗಂಟೆಗಳಲ್ಲಿ ಸುರಿದ ದಾಖಲೆಯ ಮಳೆ ಇದು ಎಂದು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ತಿಳಿಸಿದೆ. ಎರಡು ದಿನದ ಹಿಂದೆ ಒಂದೇ ದಿನ 811.6 ಮಿ.ಮೀ ಭಾರಿ ಮಳೆ ಸುರಿದಿದ್ದು, 27 ವರ್ಷಗಳ ದಾಖಲೆ ಸರಿಗಟ್ಟಿತ್ತು.

ಐಎಂಡಿ ಮಳೆಮಾಪನ ದಾಖಲೆ ನಿರ್ವಹಿಸಲು ಆರಂಭಿಸಿದ ನಂತರದ ಅಂಕಿಅಂಶಗಳ ಪ್ರಕಾರ, ವಿಶ್ವದಲ್ಲಿ ಅಧಿಕ ಮಳೆಯಾಗುವ ಸ್ಥಳಗಳಲ್ಲಿ ಒಂದಾದ ಚಿರಾಪುಂಜಿಯಲ್ಲಿ ಒಂಬತ್ತು ಬಾರಿ ಜೂನ್ ತಿಂಗಳಲ್ಲಿ ಒಂದೇ ದಿನ 800 ಮಿ.ಮೀ.ಗಿಂತ ಹೆಚ್ಚು ಮಳೆ ದಾಖಲಾಗಿದೆ ಎಂದು ಐಎಂಡಿ ಪ್ರಾದೇಶಿಕ ಕೇಂದ್ರದ ವಿಜ್ಞಾನಿ ಸುನೀತ್ ದಾಸ್ ತಿಳಿಸಿದ್ದಾರೆ.

ಕೇಂದ್ರ, ರಾಜ್ಯ ಸರ್ಕಾರಗಳ ವಿರುದ್ಧ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕೆ

‘ಸ್ಕಾಲರ್‌ಶಿಪ್‌ಗೆ ಕನ್ನ: ವಿದ್ಯಾರ್ಥಿಗಳ ಸುಲಿಗೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಜೆಪಿ ನೇತೃತ್ವದ ಶೇ 40ರಷ್ಟು ಕಮಿಷನ್ ಸರ್ಕಾರದಿಂದ ಸ್ಫೂರ್ತಿ ಪಡೆದಿರುವ ಸರ್ಕಾರಿ ನೌಕರರು ನೇರವಾಗಿ ವಿದ್ಯಾರ್ಥಿಗಳು, ಮಹಿಳೆಯರು, ರೈತರ ಸುಲಿಗೆ ಇಳಿದಿದ್ದಾರೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಟೀಕಿಸಿದ್ದಾರೆ.

‘ವಿದ್ಯಾಸಿರಿ: ಸ್ಕಾಲರ್‌ಶಿಪ್‌ಗೆ ಕನ್ನ’ ಶೀರ್ಷಿಕೆಯಡಿ ‘ಪ್ರಜಾವಾಣಿ’ಯಲ್ಲಿ ಶುಕ್ರವಾರ ಪ್ರಕಟವಾದ ವರದಿಯನ್ನು ಟ್ಯಾಗ್ ಮಾಡಿ ಸರಣಿ ಟ್ವೀಟ್ ಮಾಡಿರುವ ಅವರು, ಇಂತಹ ಸರ್ಕಾರ ಇರುವಾಗ ಹಾವೇರಿ ಸರ್ಕಾರಿ ಎಂಜನಿಯರಿಂಗ್ ಕಾಲೇಜಿನಲ್ಲಿ ವಿದ್ಯಾಸಿರಿ ಸ್ಕಾಲರ್ ಷಿಪ್ ಗೆ ಕನ್ನ ಹಾಕಿದ ಪ್ರಕರಣದಲ್ಲಿ ಅಚ್ಚರಿ ಪಡುವಂತಹದೇನಿಲ್ಲ’ ಎಂದಿದ್ದಾರೆ.

‘ಒಂದೆಡೆ ಅನ್ನಭಾಗ್ಯ, ಕ್ಷೀರಭಾಗ್ಯ, ವಿದ್ಯಾಸಿರಿ ಸೇರಿದಂತೆ ನಮ್ಮ ಸರ್ಕಾರ ಜಾರಿಗೆ ತಂದಿರುವ ಜನಪರ ಯೋಜನೆಗಳಿಗೆ ಹಣ ನೀಡದೆ ನಿರ್ಲಕ್ಷಿಸುತ್ತಿರುವ ಬಿಜೆಪಿ ಸರ್ಕಾರ, ಇನ್ನೊಂದೆಡೆ ಒಂದಿಷ್ಟು ಮಂಜೂರಾಗಿರುವ ಹಣವನ್ನು ಕೂಡಾ ಬಿಡದೆ ಸರ್ಕಾರವೇ ಲೂಟಿ ಮಾಡುತ್ತಿದೆ. ಹಾಸ್ಟೆಲ್ ನಲ್ಲಿ ಪ್ರವೇಶ ಸಿಗದೆ ಇದ್ದ ವಿದ್ಯಾರ್ಥಿಗಳು ಕೊಠಡಿ ಬಾಡಿಗೆಗೆ ಪಡೆದು ಅಡುಗೆ ಮಾಡಿಕೊಂಡು ವ್ಯಾಸಂಗ ಮಾಡಲು ನೆರವಾಗುವಂತೆ ತಿಂಗಳಿಗೆ ₹1500 ನೀಡುವ ಯೋಜನೆಯೇ ವಿದ್ಯಾಸಿರಿ. ನನ್ನ ಸ್ವಂತ ಅನುಭವದ ಆಧಾರದಲ್ಲಿ ರೂಪಿಸಿದ್ದ ಈ ಯೋಜನೆಗೆ ರಾಜ್ಯ ಸರ್ಕಾರ ಕಲ್ಲು ಹಾಕುತ್ತಿದೆ’ ಎಂದು ಹರಿಹಾಯ್ದಿದ್ದಾರೆ.

2017-18ರ ಸಾಲಿನಲ್ಲಿ ವಿದ್ಯಾಸಿರಿ ಯೋಜನೆಗೆ 88,549 ವಿದ್ಯಾರ್ಥಿಗಳು ಫಲಾನುಭವಿಗಳಾಗಿದ್ದರು. ಈ ಸರ್ಕಾರ ಅಧಿಕಾರಕ್ಕೆ ಬಂದ ಕಳೆದ ಎರಡು ವರ್ಷಗಳ ಅವಧಿಯಲ್ಲಿ ಸರ್ಕಾರ ಈ ಯೋಜನೆಗೆ ಹಣ ನೀಡದೆ ಹಾಸ್ಟೆಲ್ ಸೌಲಭ್ಯ ಇಲ್ಲದ ಹಿಂದುಳಿದ ಜಾತಿಯ ವಿದ್ಯಾರ್ಥಿಗಳನ್ನು ಬೀದಿಗೆ ತಳ್ಳುತ್ತಿದೆ. ವಿದ್ಯಾಸಿರಿ ಯೋಜನೆಗೆ ಅವಶ್ಯಕ ಹಣವನ್ನು ರಾಜ್ಯ ಸರ್ಕಾರ ತಕ್ಷಣ ಮಂಜೂರು ಮಾಡಬೇಕು. ಈಗಾಗಲೇ ಮಂಜೂರಾಗಿರುವ ಹಣವನ್ನು ಸುಲಿಗೆ ಮಾಡುತ್ತಿರುವ ಅಧಿಕಾರಿಗಳ ವಿರುದ್ಧ ಕಾನೂನು ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

‘ಸೈನಿಕರ ಅನ್ನ ಕಸಿಯಲು ಹೊರಟ ಕೇಂದ್ರ’

ಬೆಂಗಳೂರು: ಅಗ್ನಿಪಥ ಕೇವಲ ಸೇನಾ ನೇಮಕಾತಿಗಷ್ಟೇ ಸೀಮಿತವಲ್ಲ. ಸೈನಿಕರ ಅನ್ನ ಕಸಿಯಲು ಹೊರಟಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರ, ಮುಂದಿನ ದಿನಗಳಲ್ಲಿ ಇತರೆ ಸರ್ಕಾರಿ ಉದ್ಯೋಗಗಳ ಮೇಲೂ ಸವಾರಿ ಮಾಡಲಿದೆ ಎಂದು ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ದೂರಿದ್ದಾರೆ.

ಈ ಕುರಿತು ಟ್ವೀಟ್ ಮಾಡಿರುವ ಅವರು, ‘ದೇಶದ ಯುವಜನರನ್ನು ನಿರುದ್ಯೋಗದ ಕೂಪಕ್ಕೆ ತಳ್ಳುವ ಮತ್ತು ದೇಶದ ಭದ್ರತೆಗೆ ಅಪಾಯಕಾರಿಯಾಗಬಲ್ಲ ಅಗ್ನಿಪಥ ಯೋಜನೆಯನ್ನು ತಕ್ಷಣ ರದ್ದುಪಡಿಸಬೇಕು. ಈಗಿನ ಸೇನಾ ನೇಮಕಾತಿ ಯೋಜನೆಯಡಿಯಲ್ಲಿಯೇ ಸೈನಿಕರ ನೇಮಕಾತಿ ನಡೆಯಬೇಕು’ ಎಂದಿರುವ ಅವರು, ರೈತರನ್ನು ಬಲಿಗೊಟ್ಟಾಯಿತು, ಈಗ ಸೈನಿಕರ ಸರದಿಯೇ ಎಂದು ಪ್ರಶ್ನಿಸಿದ್ದಾರೆ.

ವರ್ಷಕ್ಕೆ ಎರಡು ಕೋಟಿ ಉದ್ಯೋಗದ ಭರವಸೆ ನೀಡಿ ಅಧಿಕಾರಕ್ಕೆ ಬಂದಿರುವ ಪ್ರಧಾನಿ ಮೋದಿ ಅವರೇ, ಉದ್ಯೋಗಾವಕಾಶದ ಬಾಗಿಲುಗಳನ್ನು ಒಂದೊಂದಾಗಿ ಮುಚ್ಚುತ್ತಾ ಇರುವ ನಿಮಗೆ ಪ್ರತಿವರ್ಷ ಎರಡು ಕೋಟಿ ನಿರುದ್ಯೋಗಿಗಳನ್ನು ಸೃಷ್ಟಿಸುವ ಗುಪ್ತಾ ಅಜೆಂಡಾ ಏನಾದರೂ ಇದೆಯೇ ಎಂದು ಕೇಳಿದ್ದಾರೆ.

ಉದ್ಯೋಗದ ಅಭದ್ರತೆ, ಭವಿಷ್ಯದ ಬಗೆಗಿನ ಭಯ ಮತ್ತು ವೃತ್ತಿ ಬಗೆಗಿನ ಅತೃಪ್ತಿಯನ್ನು ಹುಟ್ಟುಹಾಕಲಿರುವ ಅಗ್ನಿಪಥ ಯೋಜನೆಯಡಿ ನೇಮಕಗೊಂಡ ಸೈನಿಕರು ತಮ್ಮ ವೃತ್ತಿಯಲ್ಲಿ ಪೂರ್ಣಪ್ರಮಾಣದಲ್ಲಿ ತೊಡಗಲು ಸಾಧ್ಯವೇ? ಶತ್ರುಗಳ ಜೊತೆ ಕಾದಾಡಲಿರುವ ಸೈನಿಕರ ಈ ಮನಸ್ಥಿತಿ ಅಪಾಯಕಾರಿಯಲ್ಲವೇ? ದೇಶಕ್ಕಾಗಿ ಪ್ರಾಣತ್ಯಾಗ ಮಾಡಲು ಸಿದ್ಧರಾಗುವ ಸೈನಿಕರಿಗೆ ಉದ್ಯೋಗದ ಭದ್ರತೆ, ನ್ಯಾಯಬದ್ಧ ಸಂಬಳ, ಪಿಂಚಣಿ ಮತ್ತಿತರ ಸೌಲಭ್ಯಗಳನ್ನು ಒದಗಿಸಲಾಗದಷ್ಟು ನಿಮ್ಮ ಸರ್ಕಾರ ದಿವಾಳಿಯಾಗಿದೆಯೇ? ನಿಮ್ಮ ದಿವಾಳಿತನ ಮುಚ್ಚಿಡಲು ದೇಶದ ಭದ್ರತೆಯ ಜೊತೆ ಚೆಲ್ಲಾಟವಾಡಲು ಹೋಗಬೇಡಿ ಎಂದು ಕುಟುಕಿದ್ದಾರೆ.

ಸುದ್ದಿ 2 ನಿಮಿಷ

ಪಠ್ಯ ಹಿಂಪಡೆಯದಿದ್ದರೆ ಪರಿಸ್ಥಿತಿ ಕೈಮೀರಲಿದೆ: ಎಚ್ಚರಿಕೆ

ಬೆಂಗಳೂರು: ‘ಸರ್ಕಾರವು ಪರಿಷ್ಕೃತ ಶಾಲಾ ಪಠ್ಯಗಳನ್ನು ಹಿಂದಕ್ಕೆ ಪಡೆಯದಿದ್ದರೆ ಪರಿಸ್ಥಿತಿ ಕೈಮೀರುವುದು ಖಚಿತ’ ಎಂದು ಕರ್ನಾಟಕ ರಕ್ಷಣಾ ವೇದಿಕೆ ರಾಜ್ಯಾಧ್ಯಕ್ಷ ಟಿ.ಎ. ನಾರಾಯಣಗೌಡ ಎಚ್ಚರಿಕೆ ನೀಡಿದ್ದಾರೆ.

‘ಪಠ್ಯಪುಸ್ತಕ ಪರಿಷ್ಕರಣೆಯಲ್ಲಿ ಹಲವಾರು ಮಹಾಮಹಿಮರಿಗೆ, ದಾರ್ಶನಿಕರಿಗೆ ಅಪಮಾನಗಳಾಗಿವೆ. ರಾಜ್ಯದ ಅಸ್ಮಿತೆಗೆ ಧಕ್ಕೆ ತಂದಿರುವ ಪರಿಷ್ಕೃತ ಪಠ್ಯವನ್ನು ಹಿಂದಕ್ಕೆ ಪಡೆಯುವಂತೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಮನವಿ ಮಾಡಿದ್ದೇವೆ. ಕೂಡಲೇ ಪರಿಷ್ಕೃತ ಪಠ್ಯವನ್ನು ಸರ್ಕಾರ ಹಿಂದಕ್ಕೆ ಪಡೆಯಬೇಕು. ಇಲ್ಲವಾದಲ್ಲಿ ಇಡೀ ರಾಜ್ಯದ ಶಾಂತಿ ಕದಡಿ ಹೋಗುತ್ತದೆ. ಅದರ ಹೊಣೆಯನ್ನು ಸರ್ಕಾರವೇ ಹೊರಬೇಕಾಗುತ್ತದೆ. ಜನರನ್ನು ಎದುರುಹಾಕಿಕೊಂಡ ಸರ್ಕಾರಗಳು ಉಳಿಯುವುದಿಲ್ಲ’ ಎಂದು ತಿಳಿಸಿದ್ದಾರೆ.

‘ಮುಖ್ಯಮಂತ್ರಿ ಜನರ ಅಹವಾಲಿಗೆ ಕಿವಿಗೊಡಬೇಕು. ಪ್ರಜಾಪ್ರಭುತ್ವದಲ್ಲಿ ಜನರೇ ದೊರೆಗಳು. ಸಂವಿಧಾನೇತರ ಶಕ್ತಿಗಳು ಸರ್ಕಾರವನ್ನು ನಿಯಂತ್ರಿಸಬಾರದು. ನಾಡಿನಾದ್ಯಂತ ಪ್ರಜ್ಞಾವಂತ ಜನರು ಬೀದಿಗಿಳಿದು ಹೋರಾಡುತ್ತಿದ್ದಾರೆ. ಅವರ ಧ್ವನಿಯನ್ನು ಸರ್ಕಾರ ಗುರುತಿಸಬೇಕು. ಬಸವಣ್ಣ, ಅಲ್ಲಮಪ್ರಭು, ವಾಲ್ಮೀಕಿ, ಕನಕದಾಸ, ಪುರಂದರದಾಸ, ಶಂಕರಾಚಾರ್ಯ, ಶಿಶುನಾಳ ಶರೀಫ, ಕುವೆಂಪು ಮೊದಲಾದ ದಾರ್ಶನಿಕರು, ಸಂತರನ್ನು ಪರಿಷ್ಕೃತ ಪಠ್ಯದಲ್ಲಿ ಅಪಮಾನಿಸಲಾಗಿದೆ. ಕನ್ನಡತನ, ಕನ್ನಡಾಭಿಮಾನಕ್ಕೆ ಕುತ್ತು ತರಲಾಗಿದೆ. ಇದನ್ನು ಒಪ್ಪಿಕೊಳ್ಳಲು ಸಾಧ್ಯವಿಲ್ಲ’ ಎಂದು ಹೇಳಿದ್ದಾರೆ.

ಸಿಇಟಿ: ಶೇ 97ರಷ್ಟು ವಿದ್ಯಾರ್ಥಿಗಳು ಹಾಜರು

ಬೆಂಗಳೂರು: ರಾಜ್ಯದಲ್ಲಿ ಶುಕ್ರವಾರ ಸಾಮಾನ್ಯ ಪ್ರವೇಶ ಪರೀಕ್ಷೆಯು (ಸಿ.ಇ.ಟಿ) ಸುಗಮವಾಗಿ ನಡೆದಿದ್ದು, ಶೇ 97ರಷ್ಟು ವಿದ್ಯಾರ್ಥಿಗಳು ಪರೀಕ್ಷೆಗೆ ಹಾಜರಾಗಿದ್ದರು.

ಒಟ್ಟು 2,16,559 ಅಭ್ಯರ್ಥಿಗಳು ಪರೀಕ್ಷೆಗೆ ಹೆಸರು ನೋಂದಾಯಿಸಿಕೊಂಡಿದ್ದರು. ಭೌತವಿಜ್ಞಾನಕ್ಕೆ 2,10,962 ವಿದ್ಯಾರ್ಥಿಗಳು, ರಸಾಯನ ವಿಜ್ಞಾನಕ್ಕೆ 2,10,924 ವಿದ್ಯಾರ್ಥಿಗಳು ಹಾಜರಾಗಿದ್ದರು. ಹೊರನಾಡು, ಗಡಿನಾಡು ಕನ್ನಡ ವಿದ್ಯಾರ್ಥಿಗಳಿಗೆ ಶನಿವಾರ ಆಯ್ದ ಆರು ಕೇಂದ್ರಗಳಲ್ಲಿ ಕನ್ನಡ ಭಾಷಾ ಪರೀಕ್ಷೆ ನಡೆಯಲಿದೆ.

‘ಎಲ್ಲ ಪ್ರಶ್ನೆಗಳೂ ಎನ್‌ಸಿಇಆರ್‌ಟಿ ಚೌಕಿಟ್ಟಿನ ಒಳಗೆ ಇದ್ದವು. ರಸಾಯನ ವಿಜ್ಞಾನ ವಿಷಯದ ಪತ್ರಿಕೆಯಲ್ಲಿ ಪ್ರಶ್ನೆಗಳು ಸಮತೋಲನದಿಂದ ಕೂಡಿದ್ದವು. ಸಾಮಾನ್ಯ ವಿದ್ಯಾರ್ಥಿಯೂ ಉತ್ತರಿಸಬಹುದಾದ ಪ್ರಶ್ನೆಗಳಿದ್ದವು’ ಎಂದು ದೀಕ್ಷಾ ಸಂಸ್ಥಾಪಕ ಜಿ. ಶ್ರೀಧರ್ ಹೇಳಿದರು.

₹1.47 ಕೋಟಿ ಆಸ್ತಿ ತೆರಿಗೆ ವಂಚನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆಸ್ತಿ ತೆರಿಗೆ ವಂಚನೆ ತಡೆಯಲು ಬೆಸ್ಕಾಂ ಸಹಕಾರ ಪಡೆಯಲಾಗುತ್ತಿದ್ದು, ಇದರಿಂದ ₹1.47 ಕೋಟಿ ತೆರಿಗೆ ವಂಚನೆಯನ್ನು ಪತ್ತೆ ಮಾಡಲಾಗಿದೆ ಎಂದು ಬಿಬಿಎಂಪಿ ವಿಶೇಷ ಆಯುಕ್ತ(ಕಂದಾಯ) ಆರ್. ಎಲ್. ದೀಪಕ್ ತಿಳಿಸಿದರು.

‘ಕಟ್ಟಡ ನಿರ್ಮಾಣವಾಗಿಲ್ಲ ಎಂದು ಬಿಬಿಎಂಪಿಗೆ ಸುಳ್ಳು ಮಾಹಿತಿ ನೀಡುತ್ತಿದ್ದು, ಬೆಸ್ಕಾಂನಿಂದ ವಿದ್ಯುತ್ ಸಂಪರ್ಕ ಪಡೆಯಲಾಗಿದೆಯೇ ಎಂದು ಪರಿಶೀಲಿಸಿದಾಗ 46 ಆಸ್ತಿಗಳ ಮಾಲೀಕರು ತಪ್ಪು ಮಾಹಿತಿ ನೀಡಿರುವುದು ಬೆಳಕಿಗೆ ಬಂದಿದೆ’ ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

‘ಜಕ್ಕಸಂದ್ರ ಮತ್ತು ಎಚ್‌ಎಸ್‌ಆರ್ ಲೇಔಟ್‌ನಲ್ಲಿ ಪ್ರಾಯೋಗಿಕವಾಗಿ ಬೆಸ್ಕಾಂನಿಂದ ಮಾಹಿತಿ ಪಡೆಯಲಾಗಿದೆ. ಮುಂದಿನ ದಿನಗಳಲ್ಲಿ ಎಲ್ಲಾ ವಾರ್ಡ್‌ಗಳಿಗೂ ಈ ಪ್ರಕ್ರಿಯೆ ವಿಸ್ತರಿಸಲಾಗುವುದು. ತೆರಿಗೆ ವಂಚಿಸಿದ ಆಸ್ತಿ ಮಾಲೀಕರಿಗೆ ನೋಟಿಸ್ ನೀಡುವ ಪ್ರಕ್ರಿಯೆ ಆರಂಭಿಸಲಾಗಿದ್ದು, ವಂಚಿಸಿದವರಿಗೆ ದಂಡ ವಿಧಿಸಲಾಗುವುದು’ ಎಂದರು.

‘ಆರ್ಥಿಕ ವರ್ಷಾಂತ್ಯಕ್ಕೆ ₹5,500 ಕೋಟಿ ಆಸ್ತಿ ತೆರಿಗೆ ಸಂಗ್ರಹಿಸುವ ಗುರಿ ಹೊಂದಿದ್ದು, ಈವರೆಗೆ ₹2,099 ಕೋಟಿ ಸಂಗ್ರಹಿಸಲಾಗಿದೆ. ಕಳೆದ ವರ್ಷದ ಇದೇ ಅವಧಿಯಲ್ಲಿ ₹1,399 ಕೋಟಿ ಸಂಗ್ರಹಿಸಲಾಗಿತ್ತು. ಡ್ರೋನ್ ಸರ್ವೆ ನಡೆಸಿ ತೆರಿಗೆ ವಂಚಿಸುತ್ತಿದ್ದ ಆಸ್ತಿಗಳನ್ನು ಪತ್ತೆ ಮಾಡಲಾಗಿತ್ತು. ತೆರಿಗೆಯಿಂದ ಹೊರಗುಳಿದಿದ್ದ ಹಲವು ಆಸ್ತಿಗಳನ್ನು ಸೇರ್ಪಡೆ ಮಾಡಿಕೊಂಡಿರುವುದರಿಂದ ತೆರಿಗೆ ಸಂಗ್ರಹ ಹೆಚ್ಚಾಗಿದೆ’ ಎಂದು ವಿವರಿಸಿದರು.

ಎನ್‌ಸಿಇಆರ್‌ಟಿ 12ನೇ ತರಗತಿ ಪಠ್ಯ ಪರಿಷ್ಕರಣೆ

ಗುಜರಾತ್ ಗಲಭೆ, ತುರ್ತು ಪರಿಸ್ಥಿತಿ ಪಠ್ಯಕ್ಕೆ ಕೊಕ್

ಮುಖ್ಯಾಂಶಗಳು

- **ಶೀತಲ ಸಮರ, ನಕ್ಸಲ್ ಚಳವಳಿ ಪಾಠಗಳನ್ನು ಕೈಬಿಟ್ಟ ಎನ್‌ಸಿಇಆರ್‌ಟಿ**
- **ಅಪ್ರಸ್ತುತ ಎಂಬ ಕಾರಣ ನೀಡಿದ ತರಬೇತಿ ಪರಿಷತ್ತು**

ನವದೆಹಲಿ (ಪಿಟಿಐ): ತುರ್ತು ಪರಿಸ್ಥಿತಿ, ಗುಜರಾತ್‌ನಲ್ಲಿನ 2002ರ ಗಲಭೆ, ಶೀತಲಸಮರ, ನಕ್ಸಲ್ ಚಳವಳಿ, ಮೊಘಲ್ ಕೋರ್ಟ್‌ಗೆ ಸಂಬಂಧಿಸಿದ ಪಠ್ಯವನ್ನು ಎನ್‌ಸಿಇಆರ್‌ಟಿ 12ನೇ ತರಗತಿ ಪಠ್ಯದಿಂದ ಕೈಬಿಟ್ಟಿದೆ.

ರಾಷ್ಟ್ರೀಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಪರಿಷತ್ತು (ಎನ್‌ಸಿಇಆರ್‌ಟಿ) ಹೀಗೆ ಆಯ್ದ ಪಠ್ಯಗಳನ್ನು ಪಠ್ಯಪುಸ್ತಕದಿಂದ ಕೈಬಿಡಲು ‘ಅವು ಅಪ್ರಸ್ತುತ’ ಅಥವಾ ‘ಪುನರಾವರ್ತನೆ’ ಆಗಲಿವೆ ಎಂಬ ಕಾರಣವನ್ನು ನೀಡಿದೆ.

ಪಠ್ಯಪರಿಷ್ಕರಣೆ ಕುರಿತ ತೀರ್ಮಾನವನ್ನು ಈ ವರ್ಷಾರಂಭದಲ್ಲೇ ಪ್ರಕಟಿಸಲಾಗಿತ್ತು. ಕೇಂದ್ರೀಯ ಪ್ರೌಢಶಿಕ್ಷಣ ಪರೀಕ್ಷಾ ಮಂಡಳಿಯಲ್ಲದೆ (ಸಿಬಿಎಸ್‌ಇ) ಕೆಲವು ರಾಜ್ಯಗಳ ಶಿಕ್ಷಣ ಮಂಡಳಿಗಳು ಕೂಡಾ ಎನ್‌ಸಿಇಆರ್‌ಟಿ ಪಠ್ಯಪುಸ್ತಕವನ್ನು ಬಳಸುತ್ತವೆ.

ಎನ್‌ಸಿಇಆರ್‌ಟಿ ಈ ಕುರಿತ ಹೇಳಿಕೆಯಲ್ಲಿ, ಪ್ರಮುಖವಾಗಿ ಈ ಪಠ್ಯಗಳನ್ನು ಕೈಬಿಡಲು ಇಂತಹದೇ ಅಡಕಗಳು ಇತರೆ ತರಗತಿಗಳ ಪಠ್ಯದಲ್ಲಿ ಇದ್ದವು. ಅವು ಪುನರಾವರ್ತನೆ ಆಗುತ್ತಿತ್ತು ಎಂಬ ಕಾರಣ ನೀಡಿದೆ.

12ನೇ ತರಗತಿಯ ರಾಜ್ಯಶಾಸ್ತ್ರ ವಿಷಯದ ಪಠ್ಯಪುಸ್ತಕದಿಂದ ‘ಗುಜರಾತ್ ಗಲಭೆ’ಗೆ ಸಂಬಂಧಿಸಿದ ವಿಷಯವನ್ನು ‘ಭಾರತ ರಾಜಕಾರಣದ ಈಚಿನ ಬೆಳವಣಿಗೆಗಳು’ ಪಠ್ಯದಿಂದ ಕೈಬಿಡಲಾಗಿದೆ. ಮಾಜಿ ಪ್ರಧಾನಿ ಎ.ಬಿ. ವಾಜಪೇಯಿ ಅವರ ‘ರಾಜಧರ್ಮ’ ಕುರಿತ ಹೇಳಿಕೆ ಹಾಗೂ ರಾಷ್ಟ್ರೀಯ ಮಾನವ ಹಕ್ಕುಗಳ ಆಯೋಗ ವರದಿಯ ಉಲ್ಲೇಖವು ಈ ಅಡಕದಲ್ಲಿ ಇತ್ತು.

ಅಂತೆಯೇ, ಮೊಘಲ್ ಕೋರ್ಟ್ ಪಠ್ಯವನ್ನು ಇತಿಹಾಸ ಪಠ್ಯ ಪುಸ್ತಕದಿಂದ, ದಲಿತ ಚಳವಳಿ ಕುರಿತ ಕವನವನ್ನು ರಾಜ್ಯಶಾಸ್ತ್ರ ಪಠ್ಯಪುಸ್ತಕದಿಂದ ಕೈಬಿಡಲಾಗಿದೆ.

ಅಂತೆಯೇ, 10ನೇ ತರಗತಿ ಪಠ್ಯಪುಸ್ತಕದಿಂದ ಕವಿ ಫೈಜ್ ಅಹಮ್ಮದ್ ಫೈಜ್ ಅವರ ಚರಣಗಳನ್ನು ‘ಧರ್ಮ, ಕೋಮುವಾದ ಮತ್ತು ರಾಜಕಾರಣ’ ವಿಷಯ ಕುರಿತ ಪಾಠವನ್ನು ಪ್ರಜಾಸತ್ತಾತ್ಮಕ ರಾಜಕಾರಣ–2 ಪಠ್ಯಪುಸ್ತಕದಿಂದ ಕೈಬಿಡಲಾಗಿದೆ.

ಏಳು, ಎಂಟನೆ ತರಗತಿ ಪಠ್ಯಪುಸ್ತಕದಿಂದ ದಲಿತ ಲೇಖಕ ಓಂಪ್ರಕಾಶ್ ವಾಲ್ಮೀಕಿ ಅವರನ್ನು ಕುರಿತ ಉಲ್ಲೇಖ ಹಾಗೂ ಏಳನೆ ತರಗತಿಯ ಪಠ್ಯಪುಸ್ತಕದಿಂದ ‘ನಮ್ಮ ಹಿನ್ನೆಲೆ-2’ ಪಠ್ಯದಲ್ಲಿ ‘ಅರಸರು: ಪ್ರಮುಖ ಅಭಿಯಾನ ಮತ್ತು ಘಟನೆಗಳು’ ಕುರಿತ ಅಂಶ ಕೈಬಿಡಲಾಗಿದೆ.

ಅಗ್ನಿಪಥ: ರೈಲುಗಳ ಸಂಚಾರ ರದ್ದು

ಪ್ರಜಾವಾಣಿ ವಾರ್ತೆ

ಅಗ್ನಿಪಥ ಯೋಜನೆ ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆಯಿಂದ ಬೆಂಗಳೂರಿನಿಂದ ಹೊರಡಬೇಕಿದ್ದ ಮತ್ತು ಬೆಂಗಳೂರಿಗೆ ಬರಬೇಕಿದ್ದ ಹಲವು ರೈಲುಗಳು ರದ್ದಾದ ಕಾರಣ ಯಶವಂತಪುರ ನಿಲ್ದಾಣದಲ್ಲಿ ಪ್ರಯಾಣಿಕರಿಗೆ ಅನಾನುಕೂಲವಾಯಿತು – ಪ್ರಜಾವಾಣಿ ಚಿತ್ರ

ಬೆಂಗಳೂರು: ಅಗ್ನಿಪಥ ಯೋಜನೆ ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆ ನಡೆಯುತ್ತಿರುವುದರಿಂದ ಬೆಂಗಳೂರಿನಿಂದ ಹೊರಡಬೇಕಿದ್ದ ಮತ್ತು ಬೆಂಗಳೂರಿಗೆ ಬರಬೇಕಿದ್ದ ಹಲವು ರೈಲುಗಳು ರದ್ದಾಗಿವೆ.

ಶನಿವಾರ ಹೊರಡಬೇಕಿದ್ದ ಬೆಂಗಳೂರಿನ ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ(ಕೆಎಸ್‌ಆರ್) ರೈಲು ನಿಲ್ದಾಣದಿಂದ ಹೊರಡುವ ಕೆಎಸ್‌ಆರ್-ದಾನಾಪುರ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ ರೈಲು(ಸಂಖ್ಯೆ 12295), ಯಶವಂತಪುರದಿಂದ ಭಗಲ್ಪುರಕ್ಕೆ ಹೊರಡುವ ವಾರದ ವಿಶೇಷ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ (12253), 20ರಂದು ಯಶವಂತಪುರದಿಂದ ಪಾಟಲಿಪುತ್ರಕ್ಕೆ ಹೊರಡುವ ವಾರದ ವಿಶೇಷ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ (22352) ರೈಲು ಸೇವೆ ರದ್ದುಗೊಳಿಸಲಾಗಿದೆ.

ಶುಕ್ರವಾರ ದಾನಾಪುರದಿಂದ ಕೆಎಸ್‌ಆರ್‌ಗೆ ಬರಲಿದ್ದ ಡೈಲಿ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ (12296), ಪಾಟಲಿಪುತ್ರದಿಂದ ಯಶವಂಪುರಕ್ಕೆ ಬರುವ ವಾರದ ಸೂಪರ್ ಫಾಸ್ಟ್ ಎಕ್ಸ್‌ಪ್ರೆಸ್ (22351) ರೈಲುಗಳು ರದ್ದುಗೊಂಡಿವೆ.

ಇದೇ ರೀತಿ ಕೆಎಸ್‌ಆರ್‌ನಿಂದ ದಾನಾಪುರಕ್ಕೆ ಹೊರಟ ಸೂಪರ್‌ಫಾಸ್ಟ್ ಎಕ್ಸ್‌ಪ್ರೆಸ್ (12295) ರೈಲು ಭಾಗಶಃ ರದ್ದಾಗಿದೆ. ಇನ್ನು ಹಜರತ್ ನಿಜಾಮುದ್ದೀನ್ ಎಕ್ಸ್‌ಪ್ರೆಸ್ (22692) ರೈಲು ಚಾರ್ಲಪಲ್ಲಿ, ಮೌಲಾಲಿ, ಅಮ್ಮುಗುಡ ಹಾಲ್ಟ್ ಸನಾತನನಗರ ಮಾರ್ಗವಾಗಿ ಸಂಚರಿಸಲಿದೆ. ಹಾಗೆಯೇ ನ್ಯೂ ತಿನ್ಸುಕಿಯಾ-ಕೆಎಸ್‌ಆರ್ ವಾರದ ಸೂಪರ್‌ಫಾಸ್ಟ್ (22502) ರೈಲು ದಿಬ್ರುಘರ್, ನ್ಯೂ ಸಿಸಿಬೊರ್ಗಾಂವ್, ರಂಗಿಯಾ ಜಂಕ್ಷನ್ ಮೂಲಕ ಕಾರ್ಯಾಚರಣೆ ಮಾಡಲಿದೆ ಎಂದು ನೈರುತ್ಯ ರೈಲ್ವೆ ಪ್ರಕಟಣೆ ತಿಳಿಸಿದೆ.

ರಾಜ್ಯದಿಂದ ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು ಸೇರಿದಂತೆ ನೆರೆ ರಾಜ್ಯಗಳಿಗೆ ಕೆಎಸ್‌ಆರ್‌ಟಿಸಿ ಬಸ್‌ಗಳು ಸೇವೆ ಇದೆ. ಆದರೆ, ಇವುಗಳ ಸಂಚಾರದಲ್ಲಿ ಯಾವುದೇ ವ್ಯತ್ಯಯ ಆಗಿಲ್ಲ.

ಶಿಲಾಫಲಕದಲ್ಲಿ ಹೆಸರು ಇಲ್ಲದ್ದಕ್ಕೆ ಸಚಿವ ಸೋಮಣ್ಣ ಕಿಡಿ

ಬೆಂಗಳೂರು: ರಾಜ್ಯದ ಮೇಲ್ದರ್ಜೆಗೇರಿಸಿದ 150 ಐಟಿಐಗಳ ಉದ್ಘಾಟನಾ ಶಿಲಾಫಲಕದಲ್ಲಿ ತಮ್ಮ ಹೆಸರಿಲ್ಲದಿರುವ ಬಗ್ಗೆ ವಸತಿ ಸಚಿವ ವಿ.ಸೋಮಣ್ಣ ಆಕ್ಷೇಪ ವ್ಯಕ್ತಪಡಿಸಿದ್ದಾರೆ.

ಗೋವಿಂದರಾಜ ನಗರದ ಶಾಸಕರೂ ಆಗಿರುವ ಸೋಮಣ್ಣ ಅವರು ಶುಕ್ರವಾರ ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರ ಜತೆ ‘ಡಾ.ಅಂಬೇಡ್ಕರ್ ಸ್ಕೂಲ್ ಆಫ್ ಎಕನಾಮಿಕ್ಸ್ ಕ್ಯಾಂಪಸ್’ ಆವರಣದಲ್ಲಿ ಸಿದ್ಧತಾ ಪರಿಶೀಲನೆ ನಡೆಸುವ ಸಂದರ್ಭದಲ್ಲಿ ಶಿಲಾಫಲಕದಲ್ಲಿ ತಮ್ಮ ಹೆಸರು ಸೇರಿಸದೇ ಇರುವುದನ್ನು ನೋಡಿ ಸಿಟ್ಟಿಗೆದ್ದರು.

ಶಿಲಾಫಲಕದಲ್ಲಿ ಪ್ರಧಾನಿ ನರೇಂದ್ರ ಮೋದಿ, ರಾಜ್ಯಪಾಲ ಥಾವರಚಂದ್ ಗೆಹಲೋತ್, ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಸಚಿವ ಅಶ್ವತ್ಥನಾರಾಯಣ ಅವರ ಹೆಸರು ಇದ್ದು, ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿರುವ ತಮ್ಮ ಹೆಸರೇ ಇಲ್ಲದಿರುವುದನ್ನು ನೋಡುತ್ತಿದ್ದಂತೆ ಅಧಿಕಾರಿಗಳನ್ನು ತರಾಟೆಗೆ ತೆಗೆದುಕೊಂಡರು. ಶಿಲಾ ಫಲಕದಲ್ಲಿ ಹೆಸರು ಸೇರಿಸದೇ ಇದ್ದರೆ ಒಡೆದು ಹಾಕುತ್ತೇನೆ’ ಎಂದರು.

ಆಗ ಮಧ್ಯಪ್ರವೇಶಿಸಿದ ಸಚಿವ ಅಶ್ವತ್ಥನಾರಾಯಣ ಅವರು, 150 ಐಟಿಐಗಳನ್ನು ಮೇಲ್ದರ್ಜೆಗೇರಿಸಿದ ಕಾರ್ಯಕ್ರಮ ಪ್ರಧಾನಿಯವರಿಂದ ಇಲ್ಲಿ ಸಾಂಕೇತಿಕವಾಗಿ ಉದ್ಘಾಟಿಸಲಾಗುತ್ತಿದೆ. ಆದ್ದರಿಂದ ಇಲ್ಲಿಗೆ ಶಿಲಾಫಲಕ ತರಲಾಗಿದೆ. ಇದು ಗೋವಿಂದನಗರ ಕ್ಷೇತ್ರಕ್ಕೆ ಸಂಬಂಧಪಟ್ಟ ಕಾರ್ಯಕ್ರಮವಲ್ಲ ಎಂದು ತಿಳಿಸಿದರು.ಆಗ ಸೋಮಣ್ಣ ಅವರು, ಆ ವಿಚಾರ ಗೊತ್ತಿರಲಿಲ್ಲ. ಹಾಗಿದ್ದರೆ ಪರವಾಗಿಲ್ಲ ಬಿಡಿ ಎಂದರು.

ಬೂದು ಪಟ್ಟಿ: ಪಾಕ್‌ಗೆ ಸಿಗದ ಮುಕ್ತಿ

ನವದೆಹಲಿ (ಪಿಟಿಐ): ಭಯೋತ್ಪಾದನೆ ಕೃತ್ಯಗಳಿಗೆ ಆರ್ಥಿಕ ನೆರವು ಕುರಿತಂತೆ ಪಾಕಿಸ್ತಾನ ‘ಬೂದು ಪಟ್ಟಿ’ಯಲ್ಲಿ ಮುಂದುವರೆಯಲಿದೆ ಎಂದು ಈ ಕುರಿತ ಕಣ್ಗಾವಲು ಸಂಸ್ಥೆ ಫೈನಾನ್ಶಿಯಲ್ ಆಕ್ಷನ್ ಟಾಸ್ಕ್ ಫೋರ್ಸ್ (ಎಫ್‌ಎಟಿಎಫ್) ಶುಕ್ರವಾರ ಹೇಳಿದೆ. ಭಯೋತ್ಪಾದನೆ ಚಟುವಟಿಕೆ ನಿಗ್ರಹಕ್ಕೆ ತೆಗೆದುಕೊಂಡಿರುವ ಕ್ರಮಗಳ ಕುರಿತು ಪಾಕಿಸ್ತಾನಕ್ಕೇ ತೆರಳಿ ವಾಸ್ತವ ಸ್ಥಿತಿ ಪರಿ ಶೀಲಿಸಿದ ಬಳಿಕ ಈ ಪಟ್ಟಿಯಿಂದ ಪಾಕಿಸ್ತಾನವನ್ನು ಕೈಬಿಡಬಹುದು ಎಂದು ಸಂಸ್ಥೆ ಹೇಳಿದೆ.

ಸಂಕ್ಷಿಪ್ತ ಸುದ್ದಿ

ಕೊಳದ ಮಠಕ್ಕೆ ಆಡಳಿತಾಧಿಕಾರಿ ನೇಮಕ

ಬೆಂಗಳೂರು: ಆದಿಪೀಠ ಕೊಳದ ಮಠಕ್ಕೆ ಬೆಂಗಳೂರು ದಕ್ಷಿಣ ಉಪವಿಭಾಗಾಧಿಕಾರಿ ಎ.ಎನ್. ರಘುನಂದನ್ ಅವರನ್ನು ಆಡಳಿತಾಧಿಕಾರಿಯನ್ನಾಗಿ ನೇಮಿಸಿ ಅಧಿಸೂಚನೆ ಹೊರಡಿಸಲಾಗಿದೆ.

‘ಕೊಳದ ಮಠದ ಪೀಠಾಧಿಪತಿಯಾಗಿದ್ದ ಶಾಂತವೀರ ಸ್ವಾಮೀಜಿ ಆಕಸ್ಮಿಕವಾಗಿ ಮರಣ ಹೊಂದಿರುವುದರಿಂದ ಮತ್ತು ಉತ್ತರಾಧಿಕಾರಿ ನೇಮಕವಾಗಿಲ್ಲದ ಕಾರಣ ಪಾರದರ್ಶಕವಾಗಿ ಆಡಳಿತ ನಡೆಸಲು, ಮಠದ ಹಣಕಾಸು, ಚಿನ್ನಾಭರಣಗಳು ಹಾಗೂ ಸ್ಥಿರ–ಚರ ಆಸ್ತಿಗಳನ್ನು ಸಂರಕ್ಷಿಸುವ ಉದ್ದೇಶದಿಂದ ಆಡಳಿತಾಧಿಕಾರಿಯನ್ನು ನೇಮಿಸಲಾಗಿದೆ’ ಎಂದು ಕಂದಾಯ ಇಲಾಖೆ ತಿಳಿಸಿದೆ.

‘ಬೆಸ್ಕಾಂ’: 104 ಹಳ್ಳಿಗಳಲ್ಲಿ ಅದಾಲತ್ ಇಂದು

ಬೆಂಗಳೂರು: ಗ್ರಾಮೀಣ ಭಾಗದಲ್ಲಿ ವಿದ್ಯುತ್ ಸಂಬಂಧಿತ ಸಮಸ್ಯೆಗಳ ಪರಿಹಾರ ಮತ್ತು ಯೋಜನೆಗಳ ಕುರಿತು ಗ್ರಾಹಕರಿಗೆ ಮಾಹಿತಿ ನೀಡಲು ಬೆಸ್ಕಾಂ ವ್ಯಾಪ್ತಿಯ 8 ಜಿಲ್ಲೆಗಳ 104 ಹಳ್ಳಿಗಳಲ್ಲಿ ಜೂನ್ 18ರಂದು ‘ವಿದ್ಯುತ್ ಅದಾಲತ್’ ನಡೆಯಲಿದೆ.

ಜನರ ಸಮಸ್ಯೆಗಳನ್ನು ಆಲಿಸಿ ಸ್ಥಳದಲ್ಲೇ ಹಿರಿಯ ಅಧಿಕಾರಿಗಳು ಪರಿಹಾರ ಸೂಚಿಸಲಿದ್ದಾರೆ. ಜತೆಗೆ, ಕಾಲಮಿತಿಯಲ್ಲಿ ವಿದ್ಯುತ್ ಸಮಸ್ಯೆಗಳಿಗೆ ಪರಿಹಾರ ಒದಗಿಸಲಿದ್ದಾರೆ. ಗ್ರಾಮೀಣ ಭಾಗದ ಜನರ ವಿದ್ಯುತ್ ಸಮಸ್ಯೆಗಳಿಗೆ ಅಧಿಕಾರಿಗಳು ತಕ್ಷಣ ಸ್ಪಂದಿಸಬೇಕೆಂಬ ಉದ್ದೇಶದಿಂದ ಪ್ರತಿ ತಿಂಗಳ 3ನೇ ಶನಿವಾರ ವಿದ್ಯುತ್ ಅದಾಲತ್ ನಡೆಸಲು ಇಂಧನ ಸಚಿವ ವಿ. ಸುನಿಲ್ ಕುಮಾರ್ ಎಲ್ಲ ಎಸ್ಕಾಂಗಳಿಗೆ ಸೂಚಿಸಿದ್ದರು.

ವಿದ್ಯುತ್ ಸಂಬಂಧಿತ ಕುಂದುಕೊರತೆ ಆಲಿಸಿ, ಅದಕ್ಕೆ ಸ್ಥಳದಲ್ಲೇ ಪರಿಹಾರ ಸೂಚಿಸುವುದು ಅಥವಾ ನಿಗದಿತ ಕಾಲಮಿತಿ ಒಳಗೆ ಸಮಸ್ಯೆಗಳಿಗೆ ಪರಿಹಾರ ಕಲ್ಪಿಸುವ ಉದ್ದೇಶದಿಂದ ಎಲ್ಲ ಎಸ್ಕಾಂಗಳಲ್ಲಿ ಅದಾಲತ್ ಏಕಕಾಲದಲ್ಲಿ ನಡೆಯಲಿದೆ. ಬೆಸ್ಕಾಂ ವ್ಯಾಪ್ತಿಯ 104 ಹಳ್ಳಿಗಳಲ್ಲಿ ಅದಾಲತ್ ನಡೆಯಲಿದೆ ಎಂದು ಮುಖ್ಯ ಪ್ರಧಾನ ವ್ಯವಸ್ಥಾಪಕ (ಆಪರೇಷನ್ಸ್) ಎಂ.ಎಲ್.ನಾಗರಾಜು ತಿಳಿಸಿದ್ದಾರೆ.

ಗ್ರಾಹಕರು ದಿನನಿತ್ಯ ಎದುರಿಸುತ್ತಿರುವ ವಿದ್ಯುತ್ ಸಮಸ್ಯೆಗಳಾದ ವಿದ್ಯುತ್ ಪೂರೈಕೆಯಲ್ಲಿನ ವ್ಯತ್ಯಯ, ಬಿಲ್ಲಿಂಗ್ ಸಮಸ್ಯೆಯನ್ನು ಅದಾಲತ್‌ನಲ್ಲಿ ಆಲಿಸಿ ಪರಿಹಾರ ಸೂಚಿಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಇಂದು ಜಗನ್ನಾಥ ದೇವಾಲಯ ಉದ್ಘಾಟನೆ

ಬೆಂಗಳೂರು:ಇಸ್ಕಾನ್, ಶೇಷಾದ್ರಿಪುರಂನಲ್ಲಿ ನೂತನವಾಗಿ ನಿರ್ಮಿಸಿರುವ ಜಗನ್ನಾಥ ದೇವಸ್ಥಾನವನ್ನು ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಶನಿವಾರ ಉದ್ಘಾಟಿಸಲಿದ್ದಾರೆ ಎಂದು ರಾಧಾಪತಿ ಗೋಪಿನಾಥ ದಾಸ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಅರಮನೆ ರಸ್ತೆಯಲ್ಲಿರುವ ಗಾಯತ್ರಿ ವಿಹಾರದಲ್ಲಿ 19ರಂದು(ಭಾನುವಾರ) ಉದ್ಘಾಟನಾ ಸಮಾರಂಭ ನಡೆಯಲಿದೆ. 20ರಂದು ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳ ಜರುಗಲಿವೆ ಎಂದು ತಿಳಿಸಿದರು. ಶಂಖದ ಆಕೃತಿ ನಿರ್ಮಿಸಲಾಗಿರುವ ದೇವಸ್ಥಾನದಲ್ಲಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಶೇಷಾದ್ರಿಪುರಂ ಇಸ್ಕಾನ್ ಘಟಕದ ಅಧ್ಯಕ್ಷ ಅನುಕೂಲ ಕೇಶವ ದಾಸ, ಸದಸ್ಯರಾದ ಜಯಪಾತಕ ಸ್ವಾಮಿ, ಭಾನುಸ್ವಾಮಿ, ಭಕ್ತಿ ವಿನೋದ ಸ್ವಾಮಿ ಪಾಲ್ಗೊಳ್ಳಲಿದ್ದಾರೆ ಎಂದರು.

ನಗರದಲ್ಲಿ ಇಂದು

ವಲಯ ಕಾನೂನು ಸೇವಾ ಚಟುವಟಿಕೆಗಳ ಕಾರ್ಯಾಗಾರ: ಉದ್ಘಾಟನೆ: ಬಿ. ವೀರಪ್ಪ, ಅತಿಥಿಗಳು: ಸಿಂಥಿಯಾ ಮೆನೆಜೆಸ್, ಎಚ್. ಶ್ರೀಧರ ಶೆಟ್ಟಿ, ಅಧ್ಯಕ್ಷತೆ: ಡಾ.ಸುರೇಶ.ವಿ. ನಾಡಗೌಡರ, ಡಾ.ಎನ್. ದಶರಥ, ಡಾ.ವಿ. ಸುದೇಶ, ವಿಘ್ನೇಶ ಕುಮಾರ, ಸತೀಶ ಗೌಡ.ಎನ್, ಆಯೋಜಕರು: ಕರ್ನಾಟಕ ರಾಜ್ಯ ಕಾನೂನು ಸೇವಾ ಪ್ರಾಧಿಕಾರ ಮತ್ತು ಕಾನೂನು ವಿಶ್ವವಿದ್ಯಾಲಯ ಕಾನೂನು ಅಧ್ಯಯನ ವಿಭಾಗ, ಸ್ಥಳ: ಎಚ್.ಎನ್. ಸಭಾಂಗಣ, ಜ್ಞಾನಭಾರತಿ ಆವರಣ, ಬೆಳಿಗ್ಗೆ: 9.30

ಮಾಸ್ತಿ ಪ್ರಶಸ್ತಿ ಪ್ರದಾನ: ಅಧ್ಯಕ್ಷತೆ–ಪ್ರಶಸ್ತಿ ಪ್ರದಾನ: ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ, ಪ್ರಸ್ತಾವನೆ: ಮಾವಿನಕೆರೆ ರಂಗನಾಥನ್, ಡಾ.ಎಲ್.ಜಿ. ಮೀರಾ, ಪ್ರಶಸ್ತಿ ಪುರಸ್ಕೃತರು: ಡಾ.ಕೆ. ವಿ. ನಾರಾಯಣ, ಡಾ.ಓ.ಎಲ್. ನಾಗಭೂಷಣ ಸ್ವಾಮಿ, ಶಶಿಕಲಾ ವಸ್ತ್ರದ, ರಾಘವೇಂದ್ರ ಪಾಟೀಲ, ಡಾ.ವಿ. ಚಂದ್ರಶೇಖರ ನಂಗಲಿ, ರವೀಂದ್ರ ಭಟ್ಟ, ಹುಣಸವಾಡಿ ರಾಜನ್, ಆಯೋಜಕರು: ಡಾ.ಮಾಸ್ತಿ ವೆಂಕಟೇಶ ಅಯ್ಯಂಗಾರ್ ಟ್ರಸ್ಟ್, ಸ್ಥಳ: ಭಾರತೀಯ ವಿದ್ಯಾಭವನ, ಬೆಳಿಗ್ಗೆ: 10

ಡಾ.ಟಿ.ವಿ. ವೆಂಕಟಾಚಲ ಶಾಸ್ತ್ರಿ

ನಲ್ಲತಂಬಿ ಅವರ ಕನ್ನಡ ಪುಸ್ತಕಗಳ ಲೋಕಾರ್ಪಣೆ: ಉಪಸ್ಥಿತಿ: ಪಾವಣ್ಣನ್, ಡಾ.ಜಿ. ರಾಮಕೃಷ್ಣ, ಎಸ್.ದಿವಾಕರ್, ಕೆ.ನಲ್ಲತಂಬಿ, ಅಧ್ಯಕ್ಷತೆ: ಇಂದಿರಾ ಕೃಷ್ಣಪ್ಪ, ಸ್ಥಳ: ಬಾಪು ಸಭಾಂಗಣ, ಗಾಂಧಿ ಭವನ, ಕುಮಾರಕೃಪಾ ರಸ್ತೆ , ಬೆಳಿಗ್ಗೆ: 10.30

ಪಠ್ಯಪುಸ್ತಕ ಪರಿಷ್ಕರಣೆ ಸತ್ಯ– ಮಿಥ್ಯೆ: ಉಪಸ್ಥಿತಿ: ತೇಜಸ್ವಿ ಕಟ್ಟಿಮನಿ, ಸಿ.ಟಿ. ರವಿ, ಗುರುಪ್ರಕಾಶ್ ಪಾಸ್ವಾನ್, ಸ್ಥಳ: ಭಾರತೀಯ ವಿದ್ಯಾಭವನ, ರೇಸ್‌ಕೋರ್ಸ್ ರಸ್ತೆ, ಸಂಜೆ 4.30

ಸಾಂಪ್ರದಾಯಿಕ ಕಾಷ್ಠ ಶಿಲ್ಪ(ಮರ ಕೆತ್ತನೆ) ಶಿಬಿರ ಸಮಾರೋಪ ಸಮಾರಂಭ: ಶಿಲ್ಪಗಳ ಲೋಕಾರ್ಪಣೆ: ವಿ.ಸುನೀಲ್ ಕುಮಾರ, ಉಪಸ್ಥಿತಿ: ಡಾ.ಚೂಡಾಮಣಿ ನಂದಗೋಪಾಲ್, ಕೆ.ಎಸ್. ಪ್ರಭಾಕರ, ಬನಶಂಕರಿ.ವಿ.ಅಂಗಡಿ, ವಿಶ್ವನಾಥ ಗುಗ್ಗರಿ, ಅಧ್ಯಕ್ಷತೆ: ವೀರಣ್ಣಾಮಾ. ಅರ್ಕಸಾಲಿ, ಆರ್. ಚಂದ್ರಶೇಖರ, ಆಯೋಜಕರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಮತ್ತು ಕರ್ನಾಟಕ ಶಿಲ್ಪಕಲಾ ಅಕಾಡೆಮಿ, ಸ್ಥಳ: ಕಾಜಾಣ ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಕರ್ನಾಟಕ ಕಲಾಗ್ರಾಮ, ಮಲ್ಲತ್ತಹಳ್ಳಿ, ಬೆಳಿಗ್ಗೆ: 11.30

ಡಾ. ಬಾಬು ಕೃಷ್ಣಮೂರ್ತಿ

ಭೀಮಾರ್ಜುನ ಗರ್ವಭಂಗ: ಅತಿಥಿಗಳು: ಪುಟ್ಟತಾಯಮ್ಮ, ದೇವರಾಜ ಕರಬ, ಕೃಷ್ಣಮೂರ್ತಿ, ಮುರಳೀಧರ ನಾವಡ, ವಿಶ್ವನಾಥ ಉರಾಳ, ಆಯೋಜಕರು: ಕಲಾ ಕದಂಬ ಆರ್ಟ್ ಸೆಂಟರ್ ಮತ್ತು ಮಾತೃಛಾಯ ಟ್ರಸ್ಟ್, ಸ್ಥಳ: ಮಾತೃಛಾಯ ಟ್ರಸ್ಟ್ ಅಗರಹಳ್ಳಿ, ಸಂಜೆ: 4.30

ವಿಧುಶೇಖರ ಭಾರತೀ ಸ್ವಾಮೀಜಿ

ಮನೆಯಂಗಳದಲ್ಲಿ ಮಾತುಕತೆ-223: ಅತಿಥಿಗಳು: ಡಾ.ಬಾಬು ಕೃಷ್ಣಮೂರ್ತಿ, ಡಾ.ಜಿ.ಬಿ. ಹರೀಶ, ಜಿ.ಟಿ. ನಿಟ್ಟಾಲಿ, ಆಯೋಜಕರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸ್ಥಳ: ನಯನ ಸಭಾಂಗಣ, ಕನ್ನಡ ಭವನ, ಜೆ.ಸಿ. ರಸ್ತೆ, ಸಂಜೆ: 4

ವಿಜಯ ಸಂಯುಕ್ತ ಪದವಿ ಪೂರ್ವ ಕಾಲೇಜಿನ ರಜತ ಮಹೋತ್ಸವದ ಉದ್ಘಾಟನಾ ಕಾರ್ಯಕ್ರಮ: ಸಾನ್ನಿಧ್ಯ: ವಿಧುಶೇಖರ ಭಾರತೀ ಸ್ವಾಮೀಜಿ, ಉಪಸ್ಥಿತಿ: ಕೆ.ಎಸ್.ಚಂದ್ರಶೇಖರಯ್ಯ, ತೇಜಸ್ವಿ ಸೂರ್ಯ, ಶತಾವಧಾನಿ ಆರ್. ಗಣೇಶ್, ಡಾ.ವಿ.ಆರ್.ಗೌರಿಶಂಕರ್, ಆಯೋಜಕರು: ವಿಜಯ ಶಿಕ್ಷಣ ಸಂಸ್ಥೆ ಟ್ರಸ್ಟ್, ವಿಜಯ ಕಾಲೇಜಿನ ಆವರಣ, ಜಯನಗರ 3ನೇ ಬ್ಲಾಕ್, ಸಂಜೆ: 5

ಗುರುರಾಜ ಸಂಗೀತ ಪಯಣದ ಸುವರ್ಣ ಮಹೋತ್ಸವ ಕಾರ್ಯಕ್ರಮ: ಅತಿಥಿಗಳು: ಡಾ.ಸಿ. ಸೋಮಶೇಖರ್, ಎಂ.ಕೃಷ್ಣಪ್ಪ, ಬಿ.ಎಲ್.ಶಂಕರ್. ಲಹರಿ ವೇಲು, ಸದಾಶಿವ ಶೆಣೈ, ಜಗನ್ನಾಥ ದಾಸರು, ಡಾ.ಎನ್.ಕೆ.ವೆಂಕಟರಮಣ, ವೆಂಕಟೇಶಮೂರ್ತಿ ಶಿರೂರ, ಆಯೋಜಕರು: ಸೃಜನ ಲಲಿತ ಕಲಾ ವೇದಿಕೆ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಸಂಜೆ: 5

ಕಂಬಳಿ ಕಥೆ-ಹಿರಿಯ ನೇಕಾರರ ಮೂಲಕ ಕರ್ನಾಟಕದ ಕೈಮಗ್ಗದ ಮರುಕಲ್ಪನೆ: ಅತಿಥಿಗಳು: ನೀಲಕಂಠ ನಾಗಪ್ಪ ಕುರುಬರ, ಶಂಕರ ಸಣ್ಣಕ್ಕಿ, ಉಪಸ್ಥಿತಿ: ಮಂಜು ಪ್ರಸನ್ನ ಪಿಳ್ಳೈ, ವಿಶ್ವೇಶ್ವರ ಭಟ್ಟ, ಪ್ರಸಾದ್ ಬಿದ್ದಪ್ಪ, ಶ್ರೇಯಾ ಕೃಷ್ಣನ್, ಸಂಚಿತಾ ದಾಸ್ ಗುಪ್ತಾ, ಆಯೋಜಕರು: ಕಂಬಳಿ ಕಥೆ, ಸ್ಥಳ: ಬೆಂಗಳೂರು ಅಂತರರಾಷ್ಟ್ರೀಯ ಕೇಂದ್ರ, ಸಂಜೆ: 5.30

ಧರ್ಮಪ್ರವರ್ತಕ ರಾವ್‌ಬಹದ್ದೂರ್ ಗುಬ್ಬಿ ತೋಟದಪ್ಪ ಸ್ಮಾರಕ ದತ್ತಿ ಉಪನ್ಯಾಸ ಕಾರ್ಯಕ್ರಮ: ಅಧ್ಯಕ್ಷತೆ: ಪ್ರೊ.ಕೆ. ಸಿದ್ದಪ್ಪ, ಕೃ.ನರಹರಿ, ವಿ.ನಾಗರಾಜ್ ಉಪನ್ಯಾಸ: ಪ್ರಕಾಶ ಶಾನಭೋಗ, ವಿಷಯ: ಮಹರ್ಷಿ ಅರವಿಂದರ ಜೀವನ ಮತ್ತು ಸಾಧನೆ, ಆಯೋಜಕರು: ದಿ ಮಿಥಿಕ್ ಸೊಸೈಟಿ, ಸ್ಥಳ: ಶತಮಾನೋತ್ಸವ ಸ್ಮಾರಕ ಸಭಾಂಗಣ, ಧರ್ಮಪ್ರವರ್ತ ರಾವ್‌ಬಹದ್ದೂರ್ ಗುಬ್ಬಿ ತೋಟದಪ್ಪ ಧರ್ಮಸಂಸ್ಥೆ (ಸಿಟಿ ರೈಲ್ವೆ ನಿಲ್ದಾಣದ ಹತ್ತಿರು), ಸಂಜೆ: 5.30

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಸಂಪದಾ ಹೊಸೂರು, ಅತಿಥಿಗಳು: ವಿ.ಜಿ.ಕಿರಣಕುಮಾರ್, ಉಪಸ್ಥಿತಿ: ಡಾ.ಪಿ. ರಮಾದೇವಿ, ಮದನ್ ಪಡಕಿ, ರಂಗಶ್ರೀ, ಸ್ಥಳ: ಸತ್ಯಸಾಯಿ ಸಂಸ್ಕೃತ ಸದನ, ಹೊಸೂರು ಮುಖ್ಯ ರಸ್ತೆ,ಸಂಜೆ: 6

ಸಂಪದಾ ಹೊಸೂರು

ಕರ್ನಾಟಕ ಶಾಸ್ತ್ರೀಯ ಗಾಯನ: ಪ್ರಸ್ತುತಿ: ವಿದುಷಿ ಎಸ್.ಆರ್.ವಿನಯ್, ಪಿಟೀಲು: ಅನಿರುದ್ಧ್ ಭಾರದ್ವಾಜ್, ಮೃದಂಗ: ಆರ್.ಅದಮ್ಯ ರಮಾನಂದ್, ಘಟ: ಶ್ರೀನಿಧಿ ಕೌಂಡಿಣ್ಯ, ಆಯೋಜಕರು: ನಾದಬ್ರಹ್ಮ ಸಂಗೀತ ಸಭಾ, ಸ್ಥಳ: ಸಂಗೀತ ಕಲಾನಿಧಿ, ಕೆ.ವಾಸುದೇವಾಚಾರ್ಯ ಭವನ, ಜೆ.ಎಲ್.ಬಿ.ರಸ್ತೆ, ಲಕ್ಷ್ಮಿಪುರಂ, ಸಂಜೆ: 6

ಭರತನಾಟ್ಯ ರಂಗಪ್ರವೇಶ: ಪ್ರಸ್ತುತಿ: ಅನನ್ಯಾ ವಿ, ಉಪಸ್ಥಿತಿ: ಪೂರ್ಣಿಮಾ ನವೀನ್, ಸಾಯಿ ವೆಂಕಟೇಶ್, ಕೌಸಲ್ಯ ನಿವಾಸ, ಆಯೋಜಕರು: ಎಂ.ಎಸ್. ನಾಟ್ಯಶಾಸ್ತ್ರ, ಸ್ಥಳ: ಎಡಿಎ ರಂಗಮಂದಿರ, ಜೆ.ಸಿ. ರಸ್ತೆ, ಕಲಾಸಿಪಾಳ್ಯ, ಸಂಜೆ: 4

‘ಸಡನ್ನಾಗಿ ಸತ್ತೋದ್ರೆ’ ನಾಟಕ ಪ್ರದರ್ಶನ: ರಚನೆ, ನಿರ್ಮಾಣ, ನಿರ್ದೇಶನ: ಶೈಲೇಶ್ ಕುಮಾರ್. ಎಂ.ಎಂ, ಆಯೋಜಕರು: ಸೈಡ್ ವಿಂಗ್ ತಂಡ, ಸ್ಥಳ: ಕೆ.ಎಚ್.ಕಲಾಸೌಧ ಹನುಮಂತನಗರ, ಸಂಜೆ: 7.30

ಪಾಂಚಜನ್ಯ ಕೃಷ್ಣಲೀಲೆ ಯಕ್ಷಗಾನ: ಹಿಮ್ಮೇಳ ಕಲಾವಿದರು: ಸುಧೀರ್ ಭಟ್ ಪೆರ್ಪೂರು, ಶಂಕರ್ ಬಾಳ್ಕುದ್ರು, ಶ್ರೀರಕ್ಷಾ ಹೆಗ್ಡೆ, ಎನ್.ಬಿ.ಹೆಗ್ಡೆ, ಕಾರ್ತಿಕ್ ಧಾರೇಶ್ವರ, ಹಾಸ್ಯ: ಹಳ್ಳಾಡಿ ಜಯರಾಮ ಶೆಟ್ಟಿ, ಹಳ್ಳಾಡಿ ರತೀಶ್ ಶೆಟ್ಟಿ, ಸ್ತ್ರೀ ವೇಷ: ಶಂಕರ ದೇವಾಡಿಗ, ಗಣೇಶ ದೇವಾಡಿಗ, ಮುಮ್ಮೇಳ: ಶ್ರೀಧರ ಕಾಂಚನ್, ದಿವಳ್ಳಿ ಶಂಕರ್, ಶೀತಲ್ ಶೆಟ್ಟಿ ಐರ್‌ಬೈಲ್, ರಾಜೇಶ್ ಬೈಕಾಡಿ, ಯುವರಾಜ್ ನಾಯ್ಡು, ಆಯೋಜಕರು: ಕೃಪಾಪೋಷಿತ ಯಕ್ಷಗಾನ ಮಂಡಳಿ, ಹಟ್ಟಿಯಂಗಡಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ರಾತ್ರಿ: 10

ಚಿತ್ರಾವಳಿ

ನಗರದಲ್ಲಿ ಶುಕ್ರವಾರ ವಕೀಲರ ಸಂಘ ಬೆಂಗಳೂರು ಕಾರ್ಯಕ್ರಮದಲ್ಲಿ ಕರ್ನಾಟಕ ಹೈಕೋರ್ಟ್ ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ಅವರು ಡಿಜಿಟಲ್ ಇ–ಲೈಬ್ರರಿಯನ್ನು ಉದ್ಘಾಟಿಸಿದರು. ಉನ್ನತ ಶಿಕ್ಷಣ ಸಚಿವ ಡಾ.ಸಿ.ಎಸ್. ಅಶ್ವತ್ಥನಾರಾಯಣ ಮತ್ತು ವಕೀಲರ ಸಂಘ ಬೆಂಗಳೂರು ಅಧ್ಯಕ್ಷ ವಿವೇಕ್ ಸುಬ್ಬರೆಡ್ಡಿ ಇದ್ದರು – ಪ್ರಜಾವಾಣಿ ಚಿತ್ರ

ಭಾವಸಾರ ವಿಷನ್ ಇಂಡಿಯಾ ಹಾಗೂ ಭಾವಸಾರ ಕ್ಷತ್ರಿಯ ಎಜುಕೇಷನಲ್ ಎನ್‌ಕರೇಜ್‌ಮೆಂಟ್ ಟ್ರಸ್ಟ್ ವತಿಯಿಂದ ಶನಿವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ನಿವೃತ್ತ ಲೋಕಾಯುಕ್ತ ನ್ಯಾಯಮೂರ್ತಿ ಸಂತೋಷ್ ಹೆಗ್ಡೆ, ಸಾಹಿತಿ ವೂಡೇ ಪಿ.ಕೃಷ್ಣ ಅವರು ಶಾಲಾ ಮಕ್ಕಳಿಗೆ ಉಚಿತ ಪುಸ್ತಕಗಳನ್ನು ವಿತರಣೆ ಮಾಡಿದರು. ಭಾವಸಾರ ವಿಷನ್ ಇಂಡಿಯಾ ಅಧ್ಯಕ್ಷ ಮಂಜುನಾಥ, ಭಾವಸಾರ ಕ್ಷತ್ರಿಯ ಎಜುಕೇಷನಲ್ ಎನ್‌ಕರೇಜ್‌ಮೆಂಟ್ ಟ್ರಸ್ಟ್ ಅಧ್ಯಕ್ಷ ಉಮಾಕಾಂತ್ ಇದ್ದರು – ಪ್ರಜಾವಾಣಿ ಚಿತ್ರ

44ನೇ ರಜತ ಮಹೋತ್ಸವ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಟೆ ‘ಇ’ ಬೀದಿಯ ಐತಿಹಾಸಿಕ ಕೋಟೆ ಮಾರಮ್ಮ ದೇವಸ್ಥಾನದ ಅನ್ನದಾನ ಸಮಿತಿಯ 44ನೇ ವರ್ಷದ ರಜತ ಮಹೋತ್ಸವ ಮತ್ತು ಊರ ನಾಡಹಬ್ಬದ ಆಚರಣೆ ಜೂನ್ 21ರಿಂದ ಆರಂಭವಾಗಲಿದೆ. ಜೂನ್ 25ರವರೆಗೆ ಪ್ರತಿದಿನ ವಿವಿಧ ಧಾರ್ಮಿಕ ಮತ್ತು ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗಿದೆ.

ಮಂಗಳವಾರ ಬೆಳಿಗ್ಗೆ 8.30ಕ್ಕೆ ಅಮ್ಮನವರಿಗೆ ಮಹಾ ಅಭಿಷೇಕ ಮಾಡಲಾಗುವುದು. ಮಧ್ಯಾಹ್ನ 4 ಗಂಟೆಗೆ ರಾಜಬೀದಿಗಳಲ್ಲಿ ಪಲ್ಲಕ್ಕಿ ಮೆರವಣಿಗೆ ಮೂಲಕ ರಜತ ಕವಚ ಅಲಂಕೃತ ಮಾರಮ್ಮ ದೇವಿ ಮೂರ್ತಿ ಮೆರವಣಿಗೆಯೊಂದಿಗೆ ಉತ್ಸವಕ್ಕೆ ಅದ್ದೂರಿ ಚಾಲನೆ ದೊರೆಯಲಿದೆ.

ಪ್ರತಿದಿನ ಮಾರಮ್ಮ ದೇವಿಗೆ ವಿಭಿನ್ನ ಅಲಂಕಾರ ಮಾಡಲಾಗುವುದು. ಬುಧವಾರ ಅಮ್ಮನವರಿಗೆ ಪುಷ್ಪ ಅಲಂಕಾರ, ಸಂಜೆ 6.30ಕ್ಕೆ ವಾದ್ಯಗೋಷ್ಠಿ, ಗುರುವಾರ ಮಹಾಮಂಗಳಾರತಿ ಹಾಗೂ ಸಂಜೆ 4 ಗಂಟೆಗೆ ರಂಗೋಲಿ ಸ್ಪರ್ಧೆ. ಅಮ್ಮನವರಿಗೆ ಶ್ರೀಗಂಧದ ಅಲಂಕಾರ ಮತ್ತು ಮರದ ಆರತಿ ಮಾಡಲಾಗುತ್ತದೆ. ಶುಕ್ರವಾರ ಬೆಳಿಗ್ಗೆ 10.30ಕ್ಕೆ ಅಮ್ಮನವರಿಗೆ ಲಕ್ಷ್ಮೀ ಅಲಂಕಾರ, ಸಂಜೆ 6.30ಕ್ಕೆ ವಾದ್ಯಗೋಷ್ಠಿ ನಡೆಯಲಿದೆ. ಪ್ರತಿ ದಿನ ಪ್ರಸಾದ ವ್ಯವಸ್ಥೆ ಮಾಡಲಾಗಿದೆ.

ಶನಿವಾರ ಅರಿಶಿಣ ಕುಂಕುಮ ಅಲಂಕಾರ, ಪ್ರಸಾದ ವಿನಿಯೋಗ ನಡೆಯಲಿದೆ. ಸಂಜೆ 6 ಗಂಟೆಗೆ ರಾಜಬೀದಿಗಳಲ್ಲಿ ದೀಪಾಲಂಕೃತ ಪಲ್ಲಕ್ಕಿಯಲ್ಲಿ ದೇವಿಯ ಮೆರವಣಿಗೆ ನಡೆಯಲಿದೆ ಎಂದು ದೇವಸ್ಥಾನದ ಅನ್ನದಾನ ಸಮಿತಿ ಪ್ರಕಟಣೆಯಲ್ಲಿ ತಿಳಿಸಿದೆ.

‘ರಕ್ತಕ್ಕೆ ಪರ್ಯಾಯ ಸೃಷ್ಟಿ ಅಸಾಧ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ವಿಜ್ಞಾನ ಎಷ್ಟೇ ಮುಂದುವರಿದರೂ, ರಕ್ತಕ್ಕೆ ಪರ್ಯಾಯ ಸೃಷ್ಟಿ ಸಾಧ್ಯವಾಗಿಲ್ಲ. ರಕ್ತದಾನದಿಂದ ಮಾತ್ರವೇ ರಕ್ತದ ಕೊರತೆ ನೀಗಲು ಸಾಧ್ಯ’ ಎಂದು ಸಕ್ರ ವರ್ಲ್ಡ್ ಆಸ್ಪತ್ರೆಯ ವ್ಯವಸ್ಥಾಪಕ ನಿರ್ದೇಶಕ ಯುಯಿಚಿ ನಗಾನೊ ತಿಳಿಸಿದರು.

ವಿಶ್ವ ರಕ್ತದಾನಿಗಳ ದಿನದ ಅಂಗವಾಗಿ ಆಸ್ಪತ್ರೆಯು ಇದೇ 18ರವರೆಗೆ ರಕ್ತದಾನ ಶಿಬಿರ ಹಮ್ಮಿಕೊಂಡಿದೆ. ‘ಹೆಚ್ಚಿನ ಸಂಖ್ಯೆಯಲ್ಲಿ ಯುವಜನರು ಉತ್ಸಾಹದಿಂದ ರಕ್ತದಾನ ಮಾಡಲು ಮುಂದೆ ಬರಬೇಕು. ಇದರಿಂದ ಪ್ರಾಣ ಹಾನಿಯನ್ನು ಸ್ವಲ್ಪ ಮಟ್ಟಿಗೆ ತಡೆಯಬಹುದು. ರಕ್ತದಾನ ಇತರರಿಗೆ ಮರುಜನ್ಮ ನೀಡುವ ಶ್ರೇಷ್ಠ ಮತ್ತು ಸಾರ್ಥಕ ಸೇವೆ’ ಎಂದು ಯುಯಿಚಿ ನಗಾನೊ ಅಭಿಪ್ರಾಯಪಟ್ಟರು.

ಆಸ್ಪತ್ರೆಯ ವೈದ್ಯೆ ಡಾ. ರಾಣಿ ಪ್ರೇಮಕುಮಾರ್, ‘ರಕ್ತದಾನದ ಬಗ್ಗೆ ಜನರಲ್ಲಿ ಇರುವ ಅಪನಂಬಿಕೆಗಳನ್ನು ತೊಲಗಿಸಬೇಕು. ರಕ್ತದ ಅವಶ್ಯಕತೆ ಉಂಟಾದಾಗ ಮಾತ್ರ ರಕ್ತದ ಮಹತ್ವ ಪ್ರತಿಯೊಬ್ಬರಿಗೂ ಅರಿವಾಗುತ್ತದೆ. ರಕ್ತದಾನದಿಂದ ದಾನಿಯ ಆರೋಗ್ಯದ ಮೇಲೆ ಯಾವುದೇ ಪರಿಣಾಮ ಬೀರುವುದಿಲ್ಲ’ ಎಂದು ಹೇಳಿದರು.

ಆಸ್ಪತ್ರೆಯ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಲವಕೇಶ್ ಫಾಸು, ‘ವೈದ್ಯಕೀಯ ಲೋಕಕ್ಕೆ ರಕ್ತದಾನ ಮಹತ್ವದ್ದಾಗಿದೆ. ರಕ್ತಕ್ಕೆ ನಿರಂತರ ಬೇಡಿಕೆ ಇರುತ್ತದೆ. ರಕ್ತದಾನದ ಕುರಿತು ಇರುವ ತಪ್ಪು ಕಲ್ಪನೆಗಳನ್ನು ಕೈಬಿಟ್ಟು, ರಕ್ತದಾನ ಮಾಡಬೇಕು’ ಎಂದು ತಿಳಿಸಿದರು.

ಆನ್‌ಲೈನ್ ಅಂಗಳದಿಂದ ಹೊರಬರಲಿ ಮಕ್ಕಳು

ವ್ಯಸನದ ಲಾಗ್ ಆಫ್ ಹೇಗೆ?

ಭವ್ಯಾ ವಿಶ್ವನಾಥ್

ಡಿಜಿಟಲ್ ಗೇಮ್ಸ್ ವ್ಯಸನ ಅತ್ಯಂತ ಅಪಾಯಕಾರಿ. ಮಕ್ಕಳಲ್ಲಿ ಹೇಗೆ ಈ ವ್ಯಸನ ಅಂಟಿಕೊಳ್ಳುತ್ತದೆ. ಇದರಿಂದಾಗುವ ಪರಿಣಾಮವೇನು? ಪರಿಹಾರವೇನು? ಪೋಷಕರು ಕೈಗೊಳ್ಳಬೇಕಾದ ಕ್ರಮಗಳೇನು? – ಈ ಕುರಿತ ಮಾಹಿತಿ ಇಲ್ಲಿದೆ.

ಇತ್ತೀಚಿಗಿನ ಸುದ್ದಿ. ಆನ್‌ಲೈನ್ ಗೇಮ್ 'ಪಬ್‌ಜಿ' ಆಡುವುದನ್ನು ತಡೆದಿದ್ದಕ್ಕಾಗಿ 16 ವರ್ಷದ ಮಗನೊಬ್ಬ ತನ್ನ ತಾಯಿಯನ್ನು ಗುಂಡಿಕ್ಕಿ ಹತ್ಯೆ ಮಾಡಿದ್ದ. ಆ ಬಾಲಕ 'ಪಬ್‌ಜಿ' ಗೇಮ್‌ನ ವ್ಯಸನಿಯಾಗಿದ್ದ ಎಂದು ವರದಿಯಾಗಿದೆ.

ಹಿಂದೆಯೂ ಇಂಥ ಘಟನೆಗಳು ನಡೆದಿರುವುದು ವರದಿಯಾಗಿತ್ತು. ಹೀಗೆ ಆನ್‌ಲೈನ್ ಗೇಮ್ಸ್ ಗೀಳಿಗೆ ಒಳಗಾಗುತ್ತಿರುವವರಲ್ಲಿ ಬಾಲಕರು, ಬಾಲಕಿಯರು ಹಾಗೂ ಹದಿಹರೆಯದವದವರು ಹೆಚ್ಚಾಗಿದ್ದರೂ, ಇದರಲ್ಲಿ ಬಾಲಕರ ಸಂಖ್ಯೆಯೇ ಹೆಚ್ಚು.

ಒಂದು ಅಧ್ಯಯನದ ಪ್ರಕಾರ, 4 ರಿಂದ 18 ವಯೋಮಾನದವರು ಹೆಚ್ಚಾಗಿ ವಿಡಿಯೊ ಗೇಮ್ಸ್ ಹಾಗೂ ಸಾಮಾಜಿಕ ಮಾಧ್ಯಮಗಳಿಗೆ ದಾಸರಾಗುತ್ತಿದ್ದಾರೆ. ಮಾಹಿತಿ, ಮನರಂಜನೆ, ವ್ಯಾಕುಲತೆ (Distraction) ಮತ್ತು ವಿಶ್ರಾಂತಿ (Relaxation) ಎಲ್ಲದಕ್ಕೂ ಈ ಡಿಜಿಟಲ್ ವೇದಿಕೆ ಏಕಮೇವ ಗಮ್ಯವಾಗಿದೆ.

ಮೊಬೈಲ್ ಫೋನ್ ಬಳಕೆಯೇ ಒಂದು ಗೀಳಾಗಿರುವ ಈ ಕಾಲದಲ್ಲಿ, ಸಾಮಾಜಿಕ ಜಾಲತಾಣಗಳು, ಡಿಜಿಟಲ್ ಗೇಮ್ಸ್ ಆ ಗೀಳನ್ನು ವೃದ್ಧಿಸುತ್ತಿವೆ. ಮನಸ್ಸಿನ ಆರೋಗ್ಯ ಕೆಡಿಸಿ, ಬಂಧು–ಮಿತ್ರರ ಬಾಂಧವ್ಯಗಳನ್ನೂ ಹದಗೆಡಿಸುತ್ತಿವೆ.

'ಆಟ'ಗಳೇ ಚಟವಾದಾಗ..

ಯಾವುದೇ ಚಟುವಟಿಕೆಯನ್ನು ಅತಿಯಾಗಿ ಮಾಡುತ್ತಿದ್ದರೆ ಅದು ಗೀಳು ಅಥವಾ ಚಟ ಅಥವಾ ವ್ಯಸನವಾಗುತ್ತದೆ. ಯಾವುದೇ ಚಟುವಟಿಕೆ ದಿನಕಳೆದಂತೆ ವ್ಯಸನವಾಗಿ ರೂಪುಗೊಳುತ್ತದೆ. ಅದರಲ್ಲೂ ಇಂಥ 'ಗೇಮ್ಸ್'ಗಳಲ್ಲಿ ಏನಾದರೂ ಬಹುಮಾನ (ರಿವಾರ್ಡ್) ಇದ್ದರಂತೂ, ಆಟವಾಡುವ ಪ್ರಮಾಣವೂ ಹೆಚ್ಚಾಗುತ್ತದೆ. ಈ ಸಂದರ್ಭದಲ್ಲಿ ಆಟ ಮತ್ತು ವ್ಯಕ್ತಿಯ ನಡುವೆ ಒಂದು ಭಾವನಾತ್ಮಕ ಸಂಪರ್ಕ ಬೆಳೆಯುತ್ತದೆ.

ಆಟದ ವಸ್ತು ವಿಷಯ (ಕಂಟೆಂಟ್) ಊಹೆಗೆ ನಿಲುಕದಮಟ್ಟಿಗೆ ವ್ಯಕ್ತಿಯ ಮಾನಸಿಕ ಹಾಗೂ ದೈಹಿಕ ಆರೋಗ್ಯದ ಮೇಲೆ ಪ್ರಭಾವ ಬೀರಿ, ಆತನ ನಡತೆ ಹಾಗೂ ಗುಣಗಳೊಂದಿಗೆ ಬೆರೆತು ನಿಯಂತ್ರಿಸಲಾಗದ ಮಟ್ಟಕ್ಕೆ ಹೋಗುತ್ತದೆ. 'ವ್ಯಸನಕ್ಕೆ' ಒಳಗಾಗುವ ಮಗುವಿನ ಆಲೋಚನೆ, ಪ್ರೇರಣೆ, ಆಸಕ್ತಿ, ಗುರಿ, ಗಮನ ಎಲ್ಲವೂ ಗೇಮಿಂಗ್ ಬಗ್ಗೆಯೇ ಆಗಿರುತ್ತದೆ.

ಟಿವಿ ಮತ್ತು ಸಿನಿಮಾದಲ್ಲಿನ ಸಂಘರ್ಷದ ದೃಶ್ಯಗಳಿಗಿಂತ ಆನ್‌ಲೈನ್ ಗೇಮ್‌ನಲ್ಲಿರುವ ಸಂಘರ್ಷ, ಗಲಭೆಯಂತಹ ದೃಶ್ಯಗಳು ಮಕ್ಕಳ ಮನಸ್ಸಿನ ಮೇಲೆ ತೀವ್ರ ಪರಿಣಾಮ ಬೀರುತ್ತವೆ. ಗೇಮ್‌ಗಳಲ್ಲಿರುವ ಹೊಡೆದಾಟ, ಎದುರಾಳಿಯನ್ನು ಕೊಲ್ಲುವಂತಹ ದೃಶ್ಯಗಳು ಮಕ್ಕಳ ಮನಸ್ಸಲ್ಲಿ ಕ್ರೋಧ ತುಂಬುತ್ತವೆ. ಕೆಲವು ಮಕ್ಕಳು ಆ ಪಾತ್ರಗಳನ್ನೇ ಅನುಕರಿಸುವಂತಾಗುತ್ತಾರೆ. ಮುಂದೇ ಇದೇ ಗೀಳಾಗುತ್ತದೆ.

ಪರಿಹಾರ ಏನು?

- ಮಕ್ಕಳು ಆಡುವ ವಿಡಿಯೊ ಗೇಮ್ಸ್ ಕಂಟೆಂಟ್ ಮೇಲೆ ಪೋಷಕರು ಗಮನವಿರಲಿ. ಗೇಮ್ಸ್, ಮಕ್ಕಳ ವಯಸ್ಸಿಗೆ ಅನುಗುಣವಾಗಿದೆಯೇ ಎಂದು ಪರಿಶೀಲಿಸಿ. ಆ ಆಟಗಳಲ್ಲಿ ಅತಿಯಾದ ಆಕ್ರಮಣಕಾರಿ, ಸಂಘರ್ಷ, ಹೊಡೆದಾಟ, ಗಲಭೆಯಂತಹ ವಿಷಯ ವಸ್ತು ಇದ್ದರೆ, ಇಂಥವುಗಳಿಂದ ಮನಸ್ಸಿನ ಮೇಲೆ ಎಷ್ಟೆಲ್ಲ ಪರಿಣಾಮ ಬೀರುತ್ತವೆ ಎಂಬುದನ್ನು ಮಕ್ಕಳಿಗೆ ಮನವರಿಕೆ ಮಾಡಿ. ಯಾವ ಕಾರಣಕ್ಕೂ ಉದಾಸೀನ ಮಾಡಬೇಡಿ.
- ಆನ್‌ಲೈನ್ ಗೇಮ್‌ಗಳಿಗೆ ಆದಷ್ಟು ತಡೆ ಹಾಕಿ. ಆಡಲೇಬೇಕೆಂದರೆ ಪುಟ್ಟ ಸಮಯವನ್ನು ನಿಗದಿಪಡಿಸಿ. ಹೆಚ್ಚು ಸಮಯವನ್ನು ಹೊರಾಂಗಣ ಕ್ರೀಡೆಗಳಿಗೆ ನೀಡಲು ಉತ್ತೇಜಿಸಿ. ವ್ಯಾಯಾಮ, ವಾಕಿಂಗ್ ಮಕ್ಕಳ ದಿನಚರಿಯಾಗಲಿ. ಮನಸ್ಸು ಅರಳಿಸುವ ಕಲೆ, ಸಾಹಿತ್ಯದಂತಹ ಚಟುವಟಿಕೆಗಳನ್ನು ಪ್ರೋತ್ಸಾಹಿಸಿ.
- ಮಕ್ಕಳು, ಇಂಥ ಗೇಮ್‌ಗಳ ವ್ಯಸನಿಗಳಾಗಿದ್ದರೆ, ಥಟ್ ಎಂದು ನಿಲ್ಲಿಸಲು ಅಥವಾ ಬಲವಂತವಾಗಿ ನಿಯಂತ್ರಿಸಲು ಪ್ರಯತ್ನಿಸಬೇಡಿ. ಮಕ್ಕಳ ಮನಃಸ್ಥಿತಿಗೆ ತಕ್ಕಂತೆ ನಿಧಾನವಾಗಿ ಪರಿಹಾರ ಕಂಡುಕೊಳ್ಳಿ.
- ಈ ಪ್ರಕ್ರಿಯೆಯಲ್ಲಿ ಪೋಷಕರು ಅತ್ಯಂತ ಸೂಕ್ಷ್ಮವಾಗಿರಬೇಕು. ವ್ಯಸನ ಬಿಡಿಸುವುದಕ್ಕಾಗಿ ಅತಿಯಾಗಿ ನಿಂದಿಸುವುದು, ಗದರುವುದು, ಹೊಡೆಯುವುದನ್ನು ಮಾಡಬೇಡಿ. ಇದು ಸರಿಯಾದ ಕ್ರಮವಲ್ಲ. ಅಷ್ಟೇ ಅಲ್ಲ,'ನೀನು ಇಂಥವನು' ಎಂದು ಚುಚ್ಚು ಮಾತನಾಡಬೇಡಿ. ಬೇರೆಯವರ ಎದುರು ಜರಿಯಬೇಡಿ. ಇವೆಲ್ಲ ಮಕ್ಕಳನ್ನು 'ವ್ಯಸನ'ದಿಂದ ಮುಕ್ತಗೊಳಿಸುವ ಬದಲು, ಇನ್ನಷ್ಟು ವ್ಯಗ್ರವಾಗಿಸುತ್ತದೆ.

ಇಷ್ಟೆಲ್ಲ ಪ್ರಯತ್ನಗಳ ನಂತರವೂ, ನಿಮ್ಮಿಂದ ಮಕ್ಕಳನ್ನು ತಿದ್ದಲು ಸಾಧ್ಯವಾಗುತ್ತಿಲ್ಲ ಎಂದಾದಾಗ ಮನಃಶಾಸ್ತ್ರಜ್ಞರ / ಆಪ್ತ ಸಮಾಲೋಚಕರ ಸಹಾಯ ಪಡೆಯಿರಿ.

ಪರಿಣಾಮ ಏನು?

ಇಂಥ ಆನ್‌ಲೈನ್ ಗೇಮ್‌ಗಳಲ್ಲಿರುವ ಸಂಘರ್ಷ, ಕ್ರೋಧದಂತಹ ದುಷ್ಕೃತ್ಯದ ದೃಶ್ಯಗಳು ಮಕ್ಕಳ ಮನಸ್ಸಿನಾಳಕ್ಕೆ ಇಳಿಯುತ್ತವೆ. ಅವು ಒಳಗೊಳಗೆ ನಿರಂತರವಾಗಿ ಕೆಲಸ ಮಾಡುತ್ತಿರುತ್ತವೆ. ಮಕ್ಕಳು ಆ ಸಂಘರ್ಷವನ್ನು ತಮ್ಮ ವರ್ತನೆಗಳ ಮೂಲಕ ಹೊರ ಹಾಕುವುದಕ್ಕೆ ಪ್ರಯತ್ನಿಸುತ್ತಾರೆ.

ಗೇಮ್‌ಗಳಿಗೆ ದಾಸರಾಗಿರುವ ಮಕ್ಕಳು ಜಗಳಗಂಟರಾಗುತ್ತಾರೆ. ಅವರಲ್ಲಿ ರ‍್ಯಾಗ್ ಮಾಡುವಂತಹ ಸ್ವಭಾವ ಹೆಚ್ಚಾಗುತ್ತದೆ. ಗೇಮ್ ಆಡುತ್ತಾ ಆಡುತ್ತಾ ಪ್ರಬಲವಾದ ಆಕ್ರಮಣಕಾರಿ ಹಾಗೂ ವಿನಾಶಕಾರಿ ನಡವಳಿಕೆಯೂ ಹೆಚ್ಚಾಗುತ್ತದೆ. ಇಂಥ ವರ್ತನೆಗೆ ಸಮೀಪದಲ್ಲಿರುವ ಪೋಷಕರು ಹಾಗೂ ಕುಟುಂಬದ ಇತರ ಸದಸ್ಯರು, ಗೆಳೆಯರು ಸುಲಭ ಹಾಗೂ ಅನುಕೂಲಕರವಾದ ಟಾರ್ಗೆಟ್ ಆಗುತ್ತಾರೆ.

'ವ್ಯಸನ'ಕ್ಕೆ ಕಾರಣ

ಮಕ್ಕಳಿಗೆ ಕಾಡುವ ಒಂಟಿತನ, ಶೈಕ್ಷಣಿಕ ಒತ್ತಡ, ಸೋಲು–ನಷ್ಟಗಳು, ಕೌಟುಂಬಿಕ ಕಲಹಗಳು, ವೈಯಕ್ತಿಕ ಆಸಕ್ತಿ ಹಾಗೂ ಪ್ರವೃತ್ತಿ, ಗೆಳೆಯರ ಒತ್ತಡ, ಅತಿಯಾದ ಬಿಡುವಿನ ವೇಳೆ ಇರುವುದು... ಇತ್ಯಾದಿ.

ಈ ಆನ್‌ಲೈನ್ ಗೇಮ್‌ಗಳ ವ್ಯಸನ, ಏಕಾಗ್ರತೆ ಕೊರತೆ ಜತೆಗೆ ಅತಿಯಾಗಿ ರಂಪಾಟ ಮಾಡುವುದು(ADHD), ಕೋಪ ಮತ್ತು ಖಿನ್ನತೆ ಮತ್ತಿತರ ಮಾನಸಿಕ ಅಸ್ವಸ್ಥತೆ ಇರುವ ಮಕ್ಕಳು ದೃಷ್ಕೃತ್ಯಗಳನ್ನು ಮಾಡುವಂತೆ ಪ್ರೇರೇಪಿಸುತ್ತದೆ. ಇದನ್ನು ಅಂತರ್ಜಾಲ ವ್ಯಸನದ ಅಸ್ವಸ್ಥತೆ ಅಥವಾ ಇಂಟರ್ನೆಟ್ ಅಡಿಕ್ಷನ್ ಡಿಸಾರ್ಡರ್ (Internet Addiction Disorder – IAD) ಎಂದು ಕರೆಯಲಾಗುತ್ತದೆ.

ಐಎಡಿ ಲಕ್ಷಣಗಳು

ಈ ಐಎಡಿ ಸಮಸ್ಯೆಯಿಂದ ಬಳಲುತ್ತಿರುವವರಲ್ಲಿ, ನಿತ್ಯದ ಚಟುವಟಿಕೆಗಳಲ್ಲಿ ವ್ಯತ್ಯಾಸವಾಗುತ್ತದೆ. ನಿದ್ರಾಹೀನತೆ, ಸರಿಯಾಗಿ ಊಟ ಸೇರುವುದಿಲ್ಲ, ಇಲ್ಲವೇ ಅತಿಯಾಗಿ ಊಟ ಮಾಡುವುದು, ಅತಿಯಾಗಿ ಜಂಕ್ ಫುಡ್ ತಿನ್ನವುದು.. ಇಂಥ ಲಕ್ಷಣಗಳಿರುತ್ತವೆ.

ಈ ವ್ಯತ್ಯಾಸದ ಜೊತೆಗೆ, ವರ್ತನೆಯಲ್ಲೂ ಬದಲಾವಣೆಯಾಗುತ್ತದೆ. ಆಕ್ರಮಣಕಾರಿ ಮನೋಭಾವವಿರುತ್ತದೆ. ಅನಾವಶ್ಯಕವಾಗಿ ಕೋಪ ಮಾಡಿಕೊಳ್ಳುತ್ತಾರೆ. ಆಗಾಗ್ಗೆ ಮೂಡ್ ವ್ಯತ್ಯಾಸವಾಗುತ್ತಿರುತ್ತದೆ. ಮಾಡಿದ ಕೆಲಸವನ್ನೇ ಪದೇ ಪದೇ ಮಾಡುತ್ತಿರುತ್ತಾರೆ. ವಿಳಂಬ ಪ್ರವೃತ್ತಿ ಹೆಚ್ಚು.

ಹೆಚ್ಚು ಒಂಟಿಯಾಗಿದ್ದು, ಹೆಚ್ಚು ಮೌನವಾಗಿರುತ್ತಾರೆ. ಸಾಮಾಜಿಕ ಜೀವನದಲ್ಲಿ ನಿರಾಸಕ್ತಿ. ಕುಟುಂಬದವರ ಜೊತೆಯೂ ಒಡನಾಟವಿರುವುದಿಲ್ಲ. ಸುಳ್ಳು ಹೇಳುತ್ತಾರೆ. ಕಳ್ಳತನ ಮಾಡುತ್ತಾರೆ. ಸದಾ ಗೊಂದಲದಲ್ಲಿರುತ್ತಾರೆ. ಮಾನಸಿಕ ಖಿನ್ನತೆ, ಉದ್ವೇಗ, ಏಕಾಗ್ರತೆ ಕೊರತೆ, ನೆನಪಿನ ಶಕ್ತಿ ಕುಂದುವಿಕೆ, ನಿರ್ಧಾರ ತೆಗೆದುಕೊಳ್ಳಲು ಕೊರತೆ, ಸದಾ ಸಂಘರ್ಷದಲ್ಲಿ ತೊಡಗಲು ಬಯಸುತ್ತಾರೆ.

ಕಣ್ಣು ಉರಿ, ದೃಷ್ಟಿ ಸಮಸ್ಯೆ, ಬೆನ್ನು ನೋವು, ಕುತ್ತಿಗೆ ನೋವು, ಕಾರಣವಿಲ್ಲದೇ ತೂಕ ಹೆಚ್ಚಾಗುವುದು, ತಲೆ ನೋವು, ಕೈ ಬೆರಳು ಸೆಳೆತ, ನರಗಳ ದೌರ್ಬಲ್ಯಗಳಂತಹ ಆರೋಗ್ಯ ಸಮಸ್ಯೆ ಕೂಡ ಐಎಡಿಯಿಂದ ಬಳಲುತ್ತಿರುವವರನ್ನು ಗುರುತಿಸುವ ಲಕ್ಷಣಗಳಾಗಿವೆ.

(ಲೇಖಕರು: ಮನಃಶಾಸ್ತ್ರಜ್ಞರು ಮತ್ತು ಆಪ್ತ ಸಮಾಲೋಚಕಿ)

ಮೂವತ್ತು ನಿಮಿಷದಲ್ಲಿ ಲೆಮನ್ ಗ್ರಿಲ್ಡ್ ಚಿಕನ್!

ನಿಂಬೆಹಣ್ಣು ಹಿಂಡಿದರೆ ಹಾಲು ಕೆಡಬಹುದು. ಆದರೆ ಮಾಂಸಾಹಾರ ಖಾದ್ಯಗಳಿಗೆ ಹುಳಿ ಹಿಂಡಿದಷ್ಟೂ ರುಚಿ ಹೆಚ್ಚು. ನಿಂಬೆಹಣ್ಣಿನ ಗ್ರಿಲ್ಡ್ ಚಿಕನ್ ಬಾಯಲ್ಲಿ ನೀರೂರಿಸುತ್ತದೆ. ಇದನ್ನು ಮನೆಯಲ್ಲೇ ಸುಲಭ ವಿಧಾನದಲ್ಲಿ, ಅರ್ಧ ಗಂಟೆಗೊಳಗೆ ತಯಾರಿಸುವುದು ಹೇಗೆ ಎಂಬ ವಿವರ ಇಲ್ಲಿದೆ.

ಇಬ್ಬನಿ

ಬೇಕಾಗುವ ಸಾಮಗ್ರಿಗಳು: ಮೂಳೆ ರಹಿತ, ಚರ್ಮ ರಹಿತ 6 ಚಿಕನ್ ಬ್ರೆಸ್ಟ್ ಪೀಸ್‌ಗಳು, 1/4 ಕಪ್ ಅಡುಗೆ ಎಣ್ಣೆ, 3 ನಿಂಬೆಹಣ್ಣು, ಸ್ವಲ್ಪ ತಾಜಾ ಅಥವಾ ಒಣಗಿದ ಒರೆಗನೊ ಸೊಪ್ಪು (ಪುದೀನ ಕುಟುಂಬಕ್ಕೆ ಸೇರಿದ ಒಂದು ಜಾತಿಯ ಸೊಪ್ಪು), 4 ಬೆಳ್ಳುಳ್ಳಿ ಎಸಳು, 1/2 ಟೀ ಸ್ಪೂನ್ ಉಪ್ಪು, 1/4 ಟೀ ಸ್ಪೂನ್ ಕಾಳು ಮೆಣಸು, ಸ್ವಲ್ಪ ಕೊತ್ತಂಬರಿ ಸೊಪ್ಪು

ತಯಾರಿಸುವ ವಿಧಾನ: ಚಿಕನ್ ಪೀಸ್‌ಗಳನ್ನು ಚೆನ್ನಾಗಿ ತೊಳೆಯಿರಿ. ದೊಡ್ಡ ಪಾತ್ರೆಯಲ್ಲಿ ಅಡುಗೆ ಎಣ್ಣೆ, ನಿಂಬೆರಸ, ಒರೆಗನೊ, ಬೆಳ್ಳುಳ್ಳಿ, ಉಪ್ಪು ಮತ್ತು ಕಾಳುಮೆಣಸನ್ನು ಸೇರಿಸಿಕೊಳ್ಳಿ. ಬ್ರೆಸ್ಟ್ ಪೀಸ್‌ಗಳನ್ನು ಸೇರಿಸಿ ಚೆನ್ನಾಗಿ ಮಿಶ್ರಣ ಮಾಡಿ. ನೀರಿನ ಹನಿಗಳು ಸೋಕದಂತೆ 30 ನಿಮಿಷಗಳ ಕಾಲ ಹಾಗೆ ಸಂರಕ್ಷಿಸಿ ಇಡಿ.

ಗ್ರಿಲ್ ಪ್ಯಾನ್‌ಅನ್ನು ಸಾಧಾರಣ ಫ್ಲೇಮ್‌ನಲ್ಲಿ ಬಿಸಿ ಮಾಡಿ. ಬ್ರೆಸ್ಟ್ ಪೀಸ್‌ಗಳನ್ನು 7 ರಿಂದ10 ನಿಮಿಷಗಳ ಕಾಲ ಗ್ರಿಲ್ ಮೇಲೆ ಇಡಿ. ನಂತರ ಹೆಂಚಿನ ಕಡ್ಡಿ ಸಹಾಯದಿಂದ ಮಗುಚಿ ಹಾಕುತ್ತ ಬೇಯಿಸಿ. ಮುಂದಿನ ಹತ್ತು ನಿಮಿಷದಲ್ಲಿ ದ್ರವಾಂಶವೆಲ್ಲ ಆರಿಹೋಗಿ ಡ್ರೈ ಆಗುತ್ತದೆ. ಗ್ರಿಲ್‌ನಿಂದ ಚೆನ್ನಾಗಿ ಬೆಂದ ಬ್ರೆಸ್ಟ್ ಪೀಸ್‌ಗಳನ್ನು ಹೊರಗೆ ತೆಗೆದಿಡಿ. ಚಿಕ್ಕದಾಗಿ ಹೆಚ್ಚಿದ ಕೊತ್ತಂಬರಿ ಸೊಪ್ಪನ್ನು ಉದುರಿಸಿ. ಕತ್ತರಿಸಿದ ನಿಂಬೆಹಣ್ಣಿನ ತುಂಡುಗಳನ್ನು ಪಕ್ಕದಲ್ಲಿಡಿ. ಹುಳಿಯನ್ನು ಹೆಚ್ಚು ಇಷ್ಟಪಡುವವರು ನಿಂಬೆ ಹಿಂಡಿಕೊಂಡರೆ ರುಚಿ ದುಪ್ಪಟ್ಟಾಗುತ್ತದೆ.

ನಳಪಾಕ

ಮೀನಿನ ಫ್ರೈ ಎಂದರೆ ಇಷ್ಟ. ಆದರೆ ಅದನ್ನು ಸ್ವಚ್ಛಗೊಳಿಸುವುದು ಫ್ರೈ ಮಾಡುವುದಕ್ಕಿಂತ ಕಷ್ಟ ಎಂದು ಭಾವಿಸುವವರೇ ಹೆಚ್ಚು. ಆದರೆ ಈಗೀಗ ಹೆಚ್ಚಿನ ಮೀನು ಮಾರುಕಟ್ಟೆಗಳಲ್ಲಿ ಅವರೇ ಮೀನುಗಳನ್ನು ಸ್ವಚ್ಛಗೊಳಿಸಿ ಕೊಡುತ್ತಾರೆ. ಮಸಾಲೆ ಪೇಸ್ಟ್ ಸಿದ್ಧ ಪಡಿಸಿಕೊಳ್ಳುವುದನ್ನು ಕರಗತ ಮಾಡಿಕೊಂಡರೆ, ತವಾದಲ್ಲಿ ಮೀನು ಫ್ರೈ ಆಗುವವರೆಗೆ ತಾಳ್ಮೆ ಕಂಡುಕೊಂಡರೆ ಗರಿಗರಿ ತವಾ ಫ್ರೈ ಊಟದ ಗಮ್ಮತ್ತೇ ಬೇರೆ.

ಬಂಗುಡೆ ತವಾ ಫ್ರೈ

ಬೇಕಾಗುವ ಸಾಮಗ್ರಿಗಳು: 3 ಬಂಗುಡೆ ಮೀನು, ಸ್ವಲ್ಪ ಅಡುಗೆ ಎಣ್ಣೆ, 2 ನಿಂಬೆಹಣ್ಣು (1 ಮಸಾಲೆಗೆ, 1 ಸಿದ್ಧಗೊಂಡ ಫ್ರೈ ಜೊತೆಗೆ), 1 ಈರುಳ್ಳಿ, 1 ಚಮಚ ಕೆಂಪು ಮೆಣಸಿನ ಪುಡಿ, 1/2 ಚಮಚ ಕೊತ್ತಂಬರಿ ಪುಡಿ, 1/2 ಪೂನ್ ಕಾಳು ಮೆಣಸಿನ ಪುಡಿ, 1/4 ಚಮಚ ಅರಿಶಿಣ ಪುಡಿ, 1/2 ಚಮಚ ಶುಂಠಿ ಬೆಳ್ಳುಳ್ಳಿ ಪೇಸ್ಟ್, 1 ಚಮಚ ಪುಡಿ ಉಪ್ಪು, 2 ಚಮಚಗಳಷ್ಟು ಅಕ್ಕಿಹಿಟ್ಟು, 2 ಚಮಚ ಜೋಳದ ಹಿಟ್ಟು, 1 ಚಮಚ ಮೈದಾ ಹಿಟ್ಟು

ತಯಾರಿಸುವ ವಿಧಾನ: ಮೀನುಗಳನ್ನು ಚೆನ್ನಾಗಿ ತೊಳೆಯಿರಿ. ನೀರು ಆರಿದ ಬಳಿದ ಸ್ವಲ್ಪ ಅರಿಶಿಣ ಪುಡಿ ಮತ್ತು ಉಪ್ಪನ್ನು ಮೀನುಗಳ ಎರಡು ಬದಿಯ ಮೇಲೆ ಹಾಕಿ. ಸ್ವಲ್ಪ ಹೊತ್ತಿನ ಬಳಿಕ ಪುನಃ ಮೀನುಗಳನ್ನು ತೊಳೆಯಿರಿ. ನಂತರ ಮೀನುಗಳ ಎರಡು ಬದಿಯಲ್ಲಿ ಎರಡೆರಡು ಅಡ್ಡ ಪಟ್ಟಿಗಳಂತೆ ಕೊಂಚ ಆಳವಾಗಿ ಚಾಕುವಿನಿಂದ ಗೀರಿ. ಇದು ಮಸಾಲೆಯನ್ನು ಮೀನಿನ ಮಾಂಸದೊಳಗೆ ಸೇರಿಕೊಳ್ಳಲು ಸಹಕರಿಸುತ್ತದೆ.

ಒಂದು ಸಣ್ಣ ಪಾತ್ರೆಯಲ್ಲಿ ಈರುಳ್ಳಿಯನ್ನು ಹೊರತು ಪಡಿಸಿ ಮೇಲೆ ಸೂಚಿಸಿದ ಎಲ್ಲ ಪದಾರ್ಥಗಳನ್ನು ಚೆನ್ನಾಗಿ ಮಿಶ್ರಣ ಮಾಡಿ. ಒಂದು ನಿಂಬೆಹಣ್ಣಿನ ರಸವನ್ನು ಸೇರಿಸಿ ಕಲಸಿ. ರುಚಿಗೆ ತಕ್ಕಷ್ಟು ಉಪ್ಪಿರಲಿ. ಸ್ವಲ್ಪ ನೀರನ್ನು ಸೇರಿಸಿ ಪೇಸ್ಟ್‌ನಂತೆ ಸಿದ್ಧಪಡಿಸಿಕೊಳ್ಳಿ. ಮೀನುಗಳ ಎರಡೂ ಬದಿಗೆ ಮಸಾಲೆಯನ್ನು ಚೆನ್ನಾಗಿ ತಿಕ್ಕಿ. ಒಂದು ಗಂಟೆ ಕಾಲ ಹಾಗೆಯೇ ಇಡಿ.

ತವಾಗೆ ಸ್ವಲ್ಪ ಎಣ್ಣೆಯನ್ನು ಹಾಕಿ, ಸ್ಟವ್ ಆನ್ ಮಾಡಿ. ತವಾ ಸುತ್ತಲೂ ಎಣ್ಣೆ ಹರಡುವಂತೆ, ಚೆನ್ನಾಗಿ ಬಿಸಿಯಾಗುವಂತೆ ನೋಡಿಕೊಳ್ಳಿ. ಬಾಲದ ಸಹಾಯದಿಂದ ಮೆದುವಾಗಿ ತವಾದ ಮೇಲೆ ಮೀನುಗಳನ್ನು ಇರಿಸಿ. ಸ್ಟವ್ ಸಾಧಾರಣ ಫ್ಲೇಮ್‌ನಲ್ಲಿರಲಿ. ಎರಡರಿಂದ ಮೂರು ನಿಮಿಷದ ಬಳಿಕ ಮೀನುಗಳನ್ನು ಮಗುಚಿ ಬೇಯಿಸಿ. ಸ್ವಲ್ಪ ಹೊತ್ತಿನ ಬಳಿಕ ಪುನಃ ಮಗುಚಿ ಬೇಯಿಸಿ. ಮೀನಿನ ಮೇಲಿನ ಎಣ್ಣೆ/ ದ್ರವಾಂಶವೆಲ್ಲ ಆರುವಂತೆ ನೋಡಿಕೊಳ್ಳಿ. ಸಿದ್ಧಗೊಂಡ ಬಂಗುಡೆ ತವಾ ಫ್ರೈ ಜೊತೆಗೆ ಕತ್ತರಿಸಿದ ನಿಂಬೆ, ಈರುಳ್ಳಿಯನ್ನು ಇಡಿ.

ಹ್ಯಾಂಡ್ ಕ್ರಾಫ್ಟೆಡ್ ಬ್ಯಾಗ್ ಟ್ರೆಂಡ್...

ಕೆ.ವಿ. ರಾಜಲಕ್ಷ್ಮಿ

ಫ್ಯಾಷನ್ ಲೋಕದಲ್ಲಿ ಹಳೇ ಸ್ಟೈಲನ್ನೇ ಪುನಃ ಹೊಸರೂಪದಲ್ಲಿ ಬಳಸುವ ಟ್ರೆಂಡ್ ಕೆಲ ವರ್ಷಗಳಿಂದ ಚಾಲ್ತಿಯಲ್ಲಿದೆ. ಇದು ಫ್ಯಾಷನ್ ಪ್ರಿಯರಿಗೆ ಅಚ್ಚುಮೆಚ್ಚು ಕೂಡ. ದಶಕಗಳ ಹಿಂದೆ ಮಣಿ, ಕ್ರೋಶಾ, ಗೋಣಿದಾರ, ಟ್ಯೂಬ್ ವೈರ್, ಟ್ವಿಸ್ಟೆಡ್ ನೈಲಾನ್ ಇತ್ಯಾದಿ ವಸ್ತುಗಳಿಂದ ಹೆಣೆಯುತ್ತಿದ್ದ ಬ್ಯಾಗ್‌ಗೆ ಬೇಡಿಕೆ ಹೆಚ್ಚಿತ್ತು. ಅವು ಈಗ ವಿವಿಧ ರೂಪ, ಅಳತೆ, ಬಣ್ಣ, ವಿನ್ಯಾಸಗಳಲ್ಲಿ ಕಾಣಿಸಿಕೊಳ್ಳುತ್ತವೆ. ಪರಿಸರ ಸ್ನೇಹಿ ಮತ್ತು ಕ್ಯಾಶುವಲ್‌ನಿಂದ ಪಾರ್ಟಿಗಳವರೆಗೆ ಒಯ್ಯಬಹುದಾದ ಗ್ರಾಹಕರ ಅಗತ್ಯ ಮತ್ತು ಅಭಿರುಚಿಗೆ ತಕ್ಕಂತೆ ದೊರೆ ಯುವ ಕರಕುಶಲ (hand crafted) ಈ ಚೀಲಗಳು ನಮ್ಮ ಪರಂಪರೆಯ ದ್ಯೋತಕವೆಂದೇ ಹೇಳಬಹುದು.

ಕ್ರೋಶಾ(crochet) ಬ್ಯಾಗ್

ಇದು ಕ್ರೋಶಾದಾರವೆಂದೇ ಗುರುತಿಸುವ ಗಟ್ಟಿ ದಾರವನ್ನು ಕ್ರೋಶಾ ಕಡ್ಡಿಯಲ್ಲಿ ಹೆಣೆಯುವ ಚೀಲ. ಈ ಬ್ಯಾಗುಗಳ ಅಂಚುಗಳು ಮೃದುವಾಗಿರುತ್ತದೆ. ಗಾಳಿಯಾಡುವ ಲೈನಿಂಗ್ ರಹಿತ ಓಪನ್ ಬ್ಯಾಗ್ ಮತ್ತು ಲೈನಿಂಗ್, ಸೇಫ್ ಜಿಪ್ ಇರುತ್ತದೆ. ಮೊಬೈಲ್ ಪೌಚ್‌ನಿಂದ ಶಾಪಿಂಗ್ ಬ್ಯಾಗ್‌ವರೆಗೆ ಎಲ್ಲ ಅಳತೆಗಳಲ್ಲೂ ದೊರೆಯುತ್ತದೆ. ಅವಶ್ಯಕತೆಗೆ ತಕ್ಕಂತೆ ಉದ್ದ, ಗಿಡ್ಡ ಹಿಡಿಕೆಗಳ ಬ್ಯಾಗ್ ಸಿಗುತ್ತದೆ.

ವುಡನ್ ಬೀಡ್ ಬ್ಯಾಗ್

ವಿವಿಧ ಅಳತೆ ಹಾಗೂ ಆಕಾರದ ಮರದ ಮಣಿಗಳನ್ನು ಸುಂದರವಾಗಿ ಪೋಣಿಸಿ ರೂಪಿಸಿರುವ ಬ್ಯಾಗ್. ಕೌಶಲಕ್ಕೆ ತಕ್ಕಂತ ವಿನ್ಯಾಸ. ಗುಂಪಿನಲ್ಲಿ ಎದ್ದುಕಾಣುವ ಈ ಬ್ಯಾಗ್‌ಗಳು ಕೊಂಚ ಭಾರವಿರುತ್ತದೆ. ಸರಳ ಉಡುಗೆಗೆ ಇದು ವಿಶೇಷ ಮೆರುಗು ಕೊಡುತ್ತದೆ.

ಫ್ಯಾಷನ್

ಬ್ಯಾಂಬೂ ಬ್ಯಾಗ್

ಬಿದಿರಿನ ಕಡ್ಡಿ ಮತ್ತು ಎಳೆನಾರಿನಿಂದ ತಯಾರಾದ ಈ ಚೀಲಗಳು ಸೌಂದರ್ಯಪ್ರಿಯರ ಅಚ್ಚುಮೆಚ್ಚು. ಪಾರ್ಟಿಗಳಿಗೆ ಉಡುಗೆಯ ಜೊತೆ ಮತ್ತೊಂದು ಪರಿಕರವಾಗಿ ಬಳಸಬಹುದು.

ಕಾಟನ್ ರೋಪ್ ಬ್ಯಾಗ್

ಎಲ್ಲ ಋತುಗಳಿಗೂ ಹೊಂದುವ ಈ ಚೀಲಗಳು ತನ್ನ ಸಹಜ ಗುಣದಿಂದಲೇ ಹೆಚ್ಚು ಭಾರ ತಡೆಯುತ್ತದೆ. ದೀರ್ಘಕಾಲ ಬಾಳಿಕೆ ಬರುವ ಈ ಬ್ಯಾಗ್‌ಗಳು ಹೆಸರಿಗೆ ತಕ್ಕಂತೆ ಘನವಾಗಿರುತ್ತದೆ. ವೃತ್ತಾಕಾರ, ಆಯತ ಇತ್ಯಾದಿ ಆಕಾರಗಳಲ್ಲಿ ದೊರೆಯುವ ಈ ಚೀಲಗಳು ನೋಡಲು ಅಷ್ಟೇ ಆಕರ್ಷಕ.

ಋತುಮತಿಯಾಗದಿದ್ದರೆ ಗರ್ಭಕೋಶ ಬೆಳೆಯುವುದಿಲ್ಲವೇ?



ಸ್ಪಂದನ

ಡಾ. ವೀಣಾ ಎಸ್. ಭಟ್

1. ನನ್ನ ತಂಗಿಗೆ 35 ವರ್ಷ. ಇದುವರೆಗೂ ಆಕೆ ಋತುಮತಿ ಆಗಿಲ್ಲ. ಚಿಕಿತ್ಸೆಗೆಂದು ಹೋಗಿದ್ದಾಗ, ಅವಳಿಗೆ ಗರ್ಭಕೋಶ ಬೆಳವಣಿಗೆ ಆಗಿಲ್ಲ, ಇನ್ನು ಮುಂದೆ ಋತುಮತಿ ಆಗುವುದಿಲ್ಲ ಎಂದು ವೈದ್ಯರು ಹೇಳಿದ್ದರು. ಅವಳು ಋತುಮತಿಯಾಗುತ್ತಾಳಾ ಇಲ್ಲವಾ ಎಂದು ತಿಳಿಸಿ.

ಪೂಜಾ, ಊರು ತಿಳಿಸಿಲ್ಲ

ನಿಮ್ಮ ತಂಗಿಗೆ 35 ವರ್ಷವಾದರೂ ಋತುಮತಿಯಾಗಿಲ್ಲವೆಂದರೆ ಅವರಿಗೆ ಗರ್ಭಕೋಶ ಬೆಳವಣಿಗೆ ಆಗಿಲ್ಲ ಎನಿಸುತ್ತದೆ. ಕೆಲವೊಂದು ಆಜನ್ಮ ನ್ಯೂನತೆಯಲ್ಲಿ ಗರ್ಭಕೋಶ ಹಾಗೂ ಯೋನಿಮಾರ್ಗವೂ ಇರದೇ ಕೇವಲ ಅಂಡಾಶಯವಿರುತ್ತದೆ. ಒಂದು ಅಂದಾಜಿನ ಪ್ರಕಾರ 4 ರಿಂದ 5 ಸಾವಿರ ಮಹಿಳೆಯರಲ್ಲಿ ಒಬ್ಬರಿಗೆ ಇಂಥ ಸಮಸ್ಯೆ ಕಂಡುಬರಬಹುದು. ಹೆಚ್ಚಿನ ಸಮಯದಲ್ಲಿ ಪತ್ತೆಯಾಗದೆಯೂ ಉಳಿಯಬಹುದು. ಯಾವುದೋ ವಿಷಯಕ್ಕಾಗಿ ವೈದ್ಯರಲ್ಲಿ ಪರೀಕ್ಷೆಗೆ ತೆರಳಿದಾಗ ಇಂಥ ವಿಚಾರಗಳು ಪತ್ತೆಯಾಗಬಹುದು. ಇಂತಹವರಲ್ಲಿ ಹೆಣ್ತನದ ಲೈಂಗಿಕ ಚಿಹ್ನೆಗಳಾದ ಸ್ತನಗಳ ಬೆಳವಣಿಗೆ ಇದ್ದು, ಕಂಕುಳಲ್ಲಿ ಹಾಗೂ ಜನನೇಂದ್ರಿಯ ಭಾಗದಲ್ಲಿ ಕೂದಲುಗಳಿರುತ್ತವೆ.

ಹೀಗೆ ಗರ್ಭಕೋಶವೇ ಬೆಳೆಯದಿರುವ ಸ್ಥಿತಿಯನ್ನು 'ಮುಲೇರಿಯನ್ ಏಜೆನಿಸಿಸ್' ಎನ್ನುತ್ತಾರೆ. ಇವರಲ್ಲಿ ಮಾಸಿಕ ಋತುಚಕ್ರವಾಗುವುದಿಲ್ಲ. ನಿಮ್ಮ ತಂಗಿಗೂ ಇಂತಹ ಸ್ಥಿತಿ ಇದ್ದರೆ ಅವರಿಗೆ ಮಾಸಿಕ ಋತುಚಕ್ರ ಮುಂದೆಯೂ ಆಗುವುದಿಲ್ಲ. ಇಂತಹವರು ಬಯಸಿದರೆ ಮದುವೆಯಾಗಬಹುದು. ವೈದ್ಯರು ಶಸ್ತ್ರ ಚಿಕಿತ್ಸೆ ಮೂಲಕ ಇಂಥವರಲ್ಲಿ ಕೃತಕ ಯೋನಿಯನ್ನು ರಚಿಸುತ್ತಾರೆ. ಮುಂದೆ ಸೂಕ್ತ ಲೈಂಗಿಕ ಜೀವನ ನಡೆಸಲು ಸಲಹೆ ಸೂಚನೆಗಳನ್ನು ನೀಡುತ್ತಾರೆ. ಆದರೆ ಅವರಿಗೆ ಮಕ್ಕಳಾಗುವುದಿಲ್ಲ. ಇಂತಹ ಮಹಿಳೆಯರನ್ನು ಮದುವೆ ಮಾಡುವಾಗ ಎಲ್ಲಾ ವಿಷಯಗಳನ್ನು ಪರಸ್ಪರ ಚರ್ಚಿಸಿಯೇ ಮಾಡಬೇಕು. ಜೊತೆಗೆ ವೈದ್ಯರ ಸಲಹೆ ಸೂಚನೆಗಳನ್ನು ತೆಗೆದುಕೊಳ್ಳಬೇಕು. ಇವರ ಅಂಡಾಶಯದಿಂದ ಸರಿಯಾಗಿ ಅಂಡಾಣು ಬಿಡುಗಡೆಯಾಗದಿದ್ದಾಗ ಇಂಥವರು ಮಗು ಬೇಕೆಂದು ಬಯಸಿದಲ್ಲಿ ಇವರ ಅಂಡಾಣು ಹಾಗೂ ಪತಿಯ ವೀರ್ಯಾಣುಗಳನ್ನು ಉಪಯೋಗಿಸಿ ಬಾಡಿಗೆ ತಾಯ್ತನದಿಂದ ಮಗುವನ್ನು ಪಡೆಯಬಹುದು. ನೀವೂ ಕೂಡ ಅವರಿಗೆ ಮದುವೆ ಮಾಡುವುದಿದ್ದರೆ ಇವೆಲ್ಲಾ ವಿಷಯಗಳ ಬಗ್ಗೆ ವಿವರವಾಗಿ ಚರ್ಚಿಸಬೇಕು.

2. ನನಗೆ 46 ವರ್ಷ. ಮುಟ್ಟಿನ ಸಮಸ್ಯೆ ಇದೆ. ನಾನು 19 ಜನವರಿ 2022ರಂದು ಮುಟ್ಟಾದೆ. ಮುಟ್ಟಾಗಿ ಮೂರು ದಿನದ ನಂತರ ರಕ್ತಸ್ರಾವ ಆಯಿತು. ಮತ್ತೆ 3 ಫೆಬ್ರವರಿ 2022ಕ್ಕೆ ಮುಟ್ಟಾದೆ. ಆಗಿನಿಂದ ಐದು ದಿನಗಳಾದರೂ ಸ್ವಲ್ಪ ರಕ್ತಸ್ರಾವ ಕಾಣಿಸಿಕೊಳ್ಳುತ್ತಿದೆ. ಇದು ಹಾಗೆ ಮುಂದುವರಿದಿದೆ. ನನಗೆ ಪ್ಯಾಡ್ ಅಲರ್ಜಿ ಇದೆ. ಇದಕ್ಕೆ ಪರಿಹಾರ ತಿಳಿಸಿ.

ಸುಮಾ, ಊರು ತಿಳಿಸಿಲ್ಲ

ಸುಮಾರವರೇ ನಿಮ್ಮ ವಯಸ್ಸು ಋತುಬಂಧವಾಗುವ ಆಸುಪಾಸಿನಲ್ಲಿದೆ. ಈ ಮುಟ್ಟು ನಿಲ್ಲುವ ಸಂದರ್ಭಗಳಲ್ಲಿ ಹೆಚ್ಚಿನ ಮಹಿಳೆಯರಿಗೆ ಬೇಗ ಬೇಗನೆ ಋತುಚಕ್ರ ಕಾಣಿಸಿಕೊಂಡು ನಂತರ ಕೆಲವರ್ಷಗಳಲ್ಲಿ ನಿಂತೇಹೋಗುತ್ತದೆ. ಆದರೆ ಅತಿ ರಕ್ತಸ್ರಾವವಾದರೆ ಮಾತ್ರ ನೀವು ನಿರ್ಲಕ್ಷಿಸದೇ ತಜ್ಞವೈದ್ಯರ ಸಹಾಯ ಪಡೆದುಕೊಳ್ಳಿ.

ಕೆಲವೊಮ್ಮೆ ನಿಮಗೆ ಅಲ್ಟ್ರಾಸೌಂಡ್ ಸ್ಕ್ಯಾನಿಂಗ್ ಮಾಡಿಸಲು ತಿಳಿಸುತ್ತಾರೆ. ಎಲ್ಲಾ ವರದಿಗಳು ನಾರ್ಮಲ್ ಅಂತ ಬಂದರೆ ಏನು ಭಯ ಬೇಡ. ನಿಮಗೆ ಪ್ಯಾಡ್ ಅಲರ್ಜಿ ಇದ್ದರೆ ನೀವು ಮರುಬಳಕೆ ಮಾಡಬಹುದಾದಂತಹ ಕಾಟನ್ ಪ್ಯಾಡ್ ಅಥವಾ ಸ್ವಚ್ಛವಾದ ಹತ್ತಿ ಬಟ್ಟೆಯನ್ನು ಮುಟ್ಟಿನ ಸಮಯದಲ್ಲಿ ಬಳಸಿ. ಅದನ್ನು ತಣ್ಣೀರಿನಲ್ಲಿ ತೊಳೆದು ಬಿಸಿಲಿನಲ್ಲಿ ಒಣಗಿಸಿ ಉಪಯೋಗಿಸುವುದು ಅತ್ಯುತ್ತಮ ವಿಧಾನ. ಬಳಸಿ ಬಿಸಾಡುವ ಪ್ಯಾಡ್‌ಗಳಿಂದ ನಿಮಗೆ ಅಲರ್ಜಿ ಅಷ್ಟೇ ಅಲ್ಲ, ಪರಿಸರ ಮಾಲಿನ್ಯ ಕೂಡ. ಆದ್ದರಿಂದ ನಿಮಗೆ ತಾಳ್ಮೆ ಇದ್ದರೆ, ತೊಳೆಯುವ ಸೌಲಭ್ಯವಿದ್ದರೆ, ಹತ್ತಿಬಟ್ಟೆಯನ್ನು ಬಳಸುವುದು ಅಥವಾ ಮರುಬಳಕೆಯ ಕಾಟನ್ ಪ್ಯಾಡ್ ಅತ್ಯುತ್ತಮ ವಿಧಾನ.

ಇನ್ನಷ್ಟು ಪ್ರಶ್ನೋತ್ತರಗಳಿಗೆ prajavani.net ನೋಡಿ

ಸ್ಪಂದನ... ಮುಟ್ಟು, ಗರ್ಭಧಾರಣೆ, ಋತುಬಂಧ, ಹಾರ್ಮೋನ್ ಮುಂತಾದ ಸಮಸ್ಯೆಗಳಿದ್ದರೆ ಪ್ರಶ್ನೆಗಳನ್ನು ನಮಗೆ ಕಳುಹಿಸಬಹುದು. ನಿಮ್ಮ ಪ್ರಶ್ನೆಗಳಿಗೆ ಪ್ರಸೂತಿ ಮತ್ತು ಸ್ತ್ರೀರೋಗ ತಜ್ಞೆ ಡಾ. ವೀಣಾ ಎಸ್. ಭಟ್ ಅವರು ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು bhoomi@prajavani.co.in ಗೆ ಕಳಿಸಬಹುದು.

ಅಧಿಕಾರಿಗಳ ಬಳಿ ಪತ್ತೆಯಾಗಿರುವ ಆಸ್ತಿ ವಿವರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ವಿವಿಧೆಡೆ 21 ಸರ್ಕಾರಿ ಅಧಿಕಾರಿಗಳ ಮೇಲೆ ಭ್ರಷ್ಟಾಚಾರ ನಿಗ್ರಹ ದಳ ಶುಕ್ರವಾರ ನಡೆಸಿದ ದಾಳಿಯಲ್ಲಿ ಅಪಾರ ಪ್ರಮಾಣದ ಆಸ್ತಿ ಪತ್ತೆಯಾಗಿದೆ. ತನಿಖಾ ತಂಡ ಪತ್ತೆಮಾಡಿರುವ ಆಸ್ತಿಗಳ ವಿವರ ಈ ಕೆಳಗಿನಂತಿದೆ.

- **ಶ್ರೀಧರ್ ಬಿ.ಎಸ್.**, ಉತ್ತರ ಕನ್ನಡ ಜಿಲ್ಲಾ ನೋಂದಣಾಧಿಕಾರಿ – ಬೆಂಗಳೂರಿನಲ್ಲಿ 2 ಮನೆ, 1 ನಿವೇಶನ, ಕನಕಪುರದಲ್ಲಿ ಫಾರ್ಮ್ ಹೌಸ್, 2 ಎಕರೆ ಕೃಷಿ ಜಮೀನು, ತಲಾ 2 ಕಾರು ಮತ್ತು ಬೈಕ್, ಬ್ಯಾಂಕ್ ಖಾತೆಗಳಲ್ಲಿ ₹ 24 ಲಕ್ಷ.
- **ಎ. ಮೋಹನ್ ಕುಮಾರ್**, ಸಣ್ಣ ನೀರಾವರಿ ಇಲಾಖೆಯ ಚಿಕ್ಕಬಳ್ಳಾಪುರ ಉಪ ವಿಭಾಗದ ಕಾರ್ಯನಿರ್ವಾಹಕ ಎಂಜಿನಿಯರ್– ಬೆಂಗಳೂರಿನಲ್ಲಿ 1 ಮನೆ, 7 ನಿವೇಶನ, 2 ವಾಣಿಜ್ಯ ಸಂಕೀರ್ಣ, 2.27 ಕೆ.ಜಿ. ಚಿನ್ನ, 6.6 ಕೆ.ಜಿ. ಬೆಳ್ಳಿ, ಕೆಂಗೇರಿಯಲ್ಲಿ 1 ಎಕರೆ 13 ಗುಂಟೆ ಜಮೀನು, ತಲಾ 2 ಕಾರು ಮತ್ತು ಬೈಕ್.
- **ತಿಪ್ಪಣ್ಣ ಪಿ. ಸಿರಸಗಿ,** ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ನಿಗಮದ ಬೀದರ್ ಜಿಲ್ಲಾ ಯೋಜನಾಧಿಕಾರಿ – ಕಲಬುರಗಿಯಲ್ಲಿ 3 ಮನೆ, 4 ಎಕರೆ 19 ಗುಂಟೆ ಕೃಷಿ ಜಮೀನು, 2 ಕಾರು ಮತ್ತು 1 ಬೈಕ್.
- **ಮೃತ್ಯುಂಜಯ ಸಿ. ತಿರಾಣಿ,** ಬೀದರ್ ಪಶುವೈದ್ಯಕೀಯ ವಿಜ್ಞಾನಗಳ ವಿಶ್ವವಿದ್ಯಾಲಯದ ಸಹಾಯಕ ಹಣಕಾಸು ನಿಯಂತ್ರಕ – ಕಲಬುರಗಿಯಲ್ಲಿ 1 ಮನೆ, ಬೀದರ್‌ನಲ್ಲಿ 1 ಮನೆ, 6 ನಿವೇಶನ, 10 ಎಕರೆ 35 ಗುಂಟೆ ಕೃಷಿ ಜಮೀನು, 717 ಗ್ರಾಂ. ಚಿನ್ನ, ಬ್ಯಾಂಕ್ ಖಾತೆಗಳಲ್ಲಿ ₹ 76.50 ಲಕ್ಷ,
- **ಉದಯ ರವಿ,** ಕೊಪ್ಪಳದ ಪೊಲೀಸ್ ಇನ್‌ಸ್ಪೆಕ್ಟರ್ – ಕೊಪ್ಪಳ ಜಿಲ್ಲೆಯ ಮುದ್ಗಲ್‌ನಲ್ಲಿ 2 ನಿವೇಶನ, ವಿವಿಧೆ 79 ಎಕರೆ.23 ಗುಂಟೆ ಕೃಷಿ ಜಮೀನು, 1.036 ಕೆ.ಜಿ. ಚಿನ್ನ, 1.090 ಕೆ.ಜಿ. ಬೆಳ್ಳಿ, 1 ಟ್ರ್ಯಾಕ್ಟರ್.
- **ಪರಮೇಶ್ವರಪ್ಪ,** ಸಣ್ಣ ನೀರಾವರಿ ಇಲಾಖೆಯ ಹೂವಿನಹಡಗಲಿ ಉಪ ವಿಭಾಗದ ಸಹಾಯಕ ಎಂಜಿನಿಯರ್– ಚಿತ್ರದುರ್ಗ ಜಿಲ್ಲೆಯ ಮೇದೆಹಳ್ಳಿಯಲ್ಲಿ 1 ಮನೆ, ಕೂಡ್ಲಿಗಿಯಲ್ಲಿ 1 ಮನೆ, ವಿವಿಧೆಡೆ 7 ನಿವೇಶನ, 4 ಎಕರೆ 72 ಸೆಂಟ್ಸ್ ಕೃಷಿ ಜಮೀನು, 892 ಗ್ರಾಂ. ಚಿನ್ನ, 2.68ನ ಕೆ.ಜಿ. ಬೆಳ್ಳಿ, 1 ಕಾರು, 1 ಬೈಕ್, 10.33 ಲಕ್ಷ ನಗದು.
- **ಮಂಜುನಾಥ ಜಿ.,** ಲೋಕೋಪಯೋಗಿ ಇಲಾಖೆಯ ನಿವೃತ್ತ ಸೂಪರಿಂಟೆಂಡಿಂಗ್ ಎಂಜಿನಿಯರ್– ಬೆಂಗಳೂರಿನಲ್ಲಿ ಎರಡು ಮನೆ, ಎರಡು ವಾಣಿಜ್ಯ ಸಂಕೀರ್ಣ, ಎರಡು ಫ್ಲ್ಯಾಟ್, ಬೆಂಗಳೂರು ದಕ್ಷಿಣ ತಾಲ್ಲೂಕು ಚಿಂಚನಘಟ್ಟದಲ್ಲಿ 4 ಎಕರೆ ಕೃಷಿ ಜಮೀನು, 1 ಬೈಕ್, 2 ಕಾರು, 3.75 ಕೆ.ಜಿ. ಬೆಳ್ಳಿ.
- **ಡಾ.ಕೆ. ಜನಾರ್ದನ್,** ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಮೌಲ್ಯಮಾಪನ ವಿಭಾಗದ ನಿವೃತ್ತ ಕುಲಸಚಿವ – ಬೆಂಗಳೂರಿನಲ್ಲಿ 1 ಮನೆ, 2 ನಿವೇಶನ, 3 ಫ್ಲ್ಯಾಟ್, ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯಲ್ಲಿ ಒಂದು ಶಾಲೆ, 7 ಎಕರೆ 30 ಗುಂಟೆ ಕೃಷಿ ಜಮೀನು, ನಾಲ್ಕು ಕಾರು, ಮೂರು ಬೈಕ್.
- **ಶಿವಲಿಂಗಯ್ಯ,** ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ ಉದ್ಯಾನ ಸಿಬ್ಬಂದಿ – ಬೆಂಗಳೂರು ನಗರದಲ್ಲಿ 4 ಮನೆ, 1 ನಿವೇಶನ, 510 ಗ್ರಾಂ. ಚಿನ್ನ, ಚನ್ನಪಟ್ಟಣ ತಾಲ್ಲೂಕಿನಲ್ಲಿ 1 ಎಕರೆ 9 ಗುಂಟೆ ಕೃಷಿ ಜಮೀನು, 2 ಬೈಕ್, ಮೂರು ಕಾರು.
- **ಮಧುಸೂದನ್,** ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಸಹಾಯಕ ಮಹಾನಿರೀಕ್ಷಕ – ಬೆಂಗಳೂರು ನಗರದಲ್ಲಿ ಎರಡು ಮನೆ, 1 ನಿವೇಶನ, 2.29 ಕೆ.ಜಿ. ಚಿನ್ನ, 4.99 ಕೆ.ಜಿ. ಬೆಳ್ಳಿ, ಮಂಡ್ಯ ಜಿಲ್ಲೆಯಲ್ಲಿ 13 ಎಕರೆ 5 ಗುಂಟೆ ಕೃಷಿ ಜಮೀನು, 2 ಕಾರು, 1 ಬೈಕ್.
- **ಎಚ್.ಈ. ರಾಮಕೃಷ್ಣ,** ಸಣ್ಣ ನೀರಾವರಿ ಇಲಾಖೆಯ ಹಾಸನ ವಿಭಾಗದ ಸಹಾಯಕ ಕಾರ್ಯ ನಿರ್ವಾಹಕ ಎಂಜಿನಿಯರ್ – ಹಾಸನ ನಗರದಲ್ಲಿ 1 ಮನೆ, ವಿವಿಧೆಡೆ ಮೂರು ನಿವೇಶನ, 26 ಗುಂಟೆ ಕೃಷಿ ಜಮೀನು, ಬ್ಯಾಂಕ್ ಖಾತೆಗಳಲ್ಲಿ ₹ 37 ಲಕ್ಷ.
- **ಓಬಯ್ಯ,** ಕೊಡಗು ಜಿಲ್ಲಾ ಪಂಚಾಯಿತಿಯ ವಿರಾಜಪೇಟೆ ಉಪ ವಿಭಾಗದ ಸಹಾಯಕ ಎಂಜಿನಿಯರ್– ಹುಣಸೂರು ತಾಲ್ಲೂಕಿನಲ್ಲಿ ಮೂರು ಮನೆ, 9 ಎಕರೆ 14 ಗುಂಟೆ ಕೃಷಿ ಜಮೀನು, 342 ಗ್ರಾಂ. ಚಿನ್ನ, 2.8 ಕೆ.ಜಿ. ಬೆಳ್ಳಿ.
- **ಡಿ. ಸಿದ್ದಪ್ಪ,** ವಿದ್ಯುತ್ ಪರಿವೀಕ್ಷಣಾ ಇಲಾಖೆಯ ಶಿವಮೊಗ್ಗದ ಉಪ ಮುಖ್ಯ ವಿದ್ಯುತ್ ಇನ್‌ಸ್ಪೆಕ್ಟರ್ – ಶಿವಮೊಗ್ಗ ಮತ್ತು ಹೊನ್ನಾಳಿಯಲ್ಲಿ ತಲಾ ಒಂದು ಮನೆ, ಶಿವಮೊಗ್ಗ ಮತ್ತು ದಾವಣಗೆರೆ ನಗರಗಳಲ್ಲಿ 7 ನಿವೇಶನ, ದಾವಣಗೆರೆ ಜಿಲ್ಲೆಯಲ್ಲಿ 11 ಎಕರೆ 5 ಗುಂಟೆ ಕೃಷಿ ಜಮೀನು, 730 ಗ್ರಾಂ. ಚಿನ್ನ, 3.4 ಕೆ.ಜಿ. ಬೆಳ್ಳಿ, ₹ 7.85 ಲಕ್ಷ ನಗದು.
- **ಚಂದ್ರಪ್ಪ ಸಿ. ಓಲೇಕರ್,** ತುಂಗಾ ಮೇಲ್ದಂಡೆ ಯೋಜನೆಯ ರಾಣೆಬೆನ್ನೂರು ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್– ರಾಣೆಬೆನ್ನೂರಿನಲ್ಲಿ 1 ಮನೆ, 1 ನಿವೇಶನ, ಬ್ಯಾಡಗಿ ತಾಲ್ಲೂಕಿನಲ್ಲಿ 5 ನಿವೇಶನ, ಮೈದೂರು ಗ್ರಾಮದಲ್ಲಿ 25 ಎಕರೆ 22 ಗುಂಟೆ ಕೃಷಿ ಜಮೀನು, ನಾಲ್ಕು ಬೈಕ್, 1 ಕಾರು, 1 ಟ್ರ್ಯಾಕ್ಟರ್, ₹ 13.39 ಲಕ್ಷ ನಗದು, 1 ಕೋಳಿ ಸಾಕಣೆ ಫಾರ್ಮ್.
- **ಭೀಮರಾವ್ ಯಶವಂತ ಪವಾರ,** ಲೋಕೋಪಯೋಗಿ ಇಲಾಖೆಯ ಬೆಳಗಾವಿ ವೃತ್ತದ ಸೂಪರಿಂಟೆಂಡಿಂಗ್ ಎಂಜಿನಿಯರ್ – ಬೆಳಗಾವಿ ನಗರದಲ್ಲಿ 1 ಮನೆ, ಎರಡು ನಿವೇಶನ, ನಿಪ್ಪಾಣಿಯಲ್ಲಿ ನಿರ್ಮಾಣ ಹಂತದ ಪೆಟ್ರೋಲ್ ಬಂಕ್, ಬೋರಗಾಂವದಲ್ಲಿ 2 ವಾಣಿಜ್ಯ ಸಂಕೀರ್ಣ, ವಿವಿಧೆಡೆ 22 ಎಕರೆ 12 ಗುಂಟೆ ಕೃಷಿ ಜಮೀನು, 3 ಬೈಕ್, ಎರಡು ಕಾರು.
- **ಪ್ರದೀಪ ಶಿವಪ್ಪ ಆಲೂರ,** ಗದಗ ತಾಲ್ಲೂಕು ಅಸುಂಡಿ ಗ್ರಾಮ ಪಂಚಾಯಿತಿ ಗ್ರೇಡ್–2 ಕಾರ್ಯದರ್ಶಿ– ಗದಗ ಜಿಲ್ಲೆಯ ಹುಲಕೋಟಿ ಸೇರಿದಂತೆ ವಿವಿಧೆಡೆ ನಾಲ್ಕು ಮನೆ, ಆಸ್ಪತ್ರೆ, ಗದಗ ಮತ್ತು ಧಾರವಾಡದಲ್ಲಿ 7 ನಿವೇಶನ, 39 ಎಕರೆ 39 ಗುಂಟೆ ಕೃಷಿ ಜಮೀನು, 3 ಬೈಕ್, 2 ಕಾರು, 2 ಟ್ರ್ಯಾಕ್ಟರ್.
- **ಶಂಕರಲಿಂಗ ನಾಗಪ್ಪ ಗೋಗಿ,** ಬಾಗಲಕೋಟೆ ಜಿಲ್ಲಾ ನಿರ್ಮಿತಿ ಕೇಂದ್ರದ ಯೋಜನಾ ನಿರ್ದೇಶಕ – ಬಾಗಲಕೋಟೆಯಲ್ಲಿ 1 ಮನೆ, ಕೊಪ್ಪಳ ಮತ್ತು ಧಾರವಾಡದಲ್ಲಿ 2 ನಿವೇಶನ, ಇಳಕಲ್‌ನಲ್ಲಿ 2 ವಾಣಿಜ್ಯ ಸಂಕೀರ್ಣ, 2 ಬೈಕ್, 1 ಕಾರು.
- **ಯಲ್ಲಪ್ಪ ಪಡಸಾಲಿ,** ಬಾಗಲಕೋಟೆಯ ಪ್ರಾದೇಶಿಕ ಸಾರಿಗೆ ಅಧಿಕಾರಿ–ಧಾರವಾಡದಲ್ಲಿ 2, ಕೊಪ್ಪಳದಲ್ಲಿ 1 ಮನೆ, 1 ಖಾಲಿನ ನಿವೇಶನ, ಧಾರವಾಡ ಜಿಲ್ಲೆಯಲ್ಲಿ 3 ವಾಣಿಜ್ಯ ಸಂಕೀರ್ಣ, ಬೆಂಗಳೂರಿನಲ್ಲಿ 1 ಫ್ಲ್ಯಾಟ್, ಕೊಪ್ಪಳ ಜಿಲ್ಲೆಯಲ್ಲಿ 11 ಎಕರೆ 35 ಗುಂಟೆ ಕೃಷಿ ಜಮೀನು, ಮೂರು ಕಾರು, 2 ಬೈಕ್.
- **ರಾಜೀವ್ ಪಿ. ನಾಯಕ್,** ಉತ್ತರ ಕನ್ನಡ ಜಿಲ್ಲೆಯ ಕಾರವಾರ ಉಪ ವಿಭಾಗದ ಪ್ರಧಾನ ಮಂತ್ರಿ ಗ್ರಾಮ ಸಡಕ್ ಯೋಜನಾ ವಿಭಾಗದ ಸಹಾಯಕ ಕಾರ್ಯ-ನಿರ್ವಾಹಕ ಎಂಜಿನಿಯರ್ – ಕಾರವಾರದಲ್ಲಿ 1 ಫ್ಲ್ಯಾಟ್, ಕಾರವಾರ ಮತ್ತು ಬೆಂಗಳೂರಿನಲ್ಲಿ ತಲಾ 1 ನಿವೇಶನ, ಬೆಂಗಳೂರಿನಲ್ಲಿ 1 ಫ್ಲ್ಯಾಟ್, ಶಿರಸಿಯಲ್ಲಿ 4 ಗುಂಟೆ ಕೃಷಿ ಜಮೀನು, 2 ಕಾರು, 2 ಬೈಕ್.
- **ಹರೀಶ್,** ಸಣ್ಣ ನೀರಾವರಿ ಇಲಾಖೆಯ ಉಡುಪಿ ವಿಭಾಗದ ಸಹಾಯಕ ಎಂಜಿನಿಯರ್ – ಉಡುಪಿಯಲ್ಲಿ 1 ಮನೆ, ಹಾವಂಜೆಯಲ್ಲಿ 2 ನಿವೇಶನ, 3 ಎಕರೆ ಕೃಷಿ ಜಮೀನು, 970 ಗ್ರಾಂ. ಚಿನ್ನ, 2 ಕಾರು, 2 ಬೈಕ್, 4.03 ಲಕ್ಷ ನಗದು.
- **ಬಿ.ಜಿ. ತಿಮ್ಮಯ್ಯ,** ಅಜ್ಜಂಪುರ ಪಟ್ಟಣ ಪಂಚಾಯಿತಿಯ ದ್ವಿತೀಯ ದರ್ಜೆ ಸಹಾಯಕ– ಕಡೂರು ತಾಲ್ಲೂಕಿನಲ್ಲಿ 2 ಮನೆ, ವಿವಿಧೆಡೆ 3 ನಿವೇಶನ, 21 ಎಕರೆ ಕೃಷಿ ಜಮೀನು, 1 ಕುರಿ ಸಾಕಣೆ ಶೆಡ್, 1 ವಾಣಿಜ್ಯ ಸಂಕೀರ್ಣ, 1 ಬೈಕ್, 1 ಕಾರು, 2 ಟ್ರ್ಯಾಕ್ಟರ್.

ಸ್ನಾನಗೃಹದಲ್ಲಿ ₹5 ಲಕ್ಷ ನಗದು ಪತ್ತೆ

ಬಿ.ವೈ.ಪವಾರ್

ಬೆಳಗಾವಿ: ಇಲ್ಲಿನ ಪಿಡಬ್ಲ್ಯುಡಿ ಸೂಪರಿಂಟೆಂಡೆಂಟ್ ಎಂಜಿನಿಯರ್ ಬಿ.ವೈ. ಪವಾರ್ ಅವರ ಕಚೇರಿ, ಸರ್ಕಾರಿ ಹಾಗೂ ಖಾಸಗಿ ನಿವಾಸಗಳು ಹಾಗೂ ಅವರ ಒಡೆತನದ ಕಾರ್ಖಾನೆ ಮೇಲೆ ಶುಕ್ರವಾರ ಎಸಿಬಿ ತಂಡ ದಾಳಿ ನಡೆಸಿದೆ.

ಈ ವೇಳೆ ಸರ್ಕಾರಿ ನಿವಾಸದ ಸ್ನಾನಗೃಹದಲ್ಲಿ ಪ್ಲಾಸ್ಟಿಕ್ ಚೀಲದಲ್ಲಿ ಹಾಕಿ ಇಟ್ಟಿದ್ದ ₹5 ಲಕ್ಷ ನಗದು, ಕಪಾಟಿನಲ್ಲಿದ್ದ 310 ಗ್ರಾಂ ಚಿನ್ನಾಭರಣ, ಒಂದು ಐಷಾರಾಮಿ ಕಾರು ಸೇರಿ ಮೂರು ಕಾರುಗಳನ್ನು ಅಧಿಕಾರಿಗಳು ವಶಕ್ಕೆ ಪಡೆದರು.

ನಿಪ್ಪಾಣಿ ನಗರದ ಅವರ ಸ್ವಂತ ಮನೆ, ಪತ್ನಿಯ ಮನೆ, ಬೋರಗಾಂವ್‌ನಲ್ಲಿರುವ ಜವಳಿ ಕಾರ್ಖಾನೆ ಮೇಲೂ ಅಧಿಕಾರಿಗಳು ದಾಳಿ ಮಾಡಿದ್ದು, ಕೆಲವು ಆಸ್ತಿ ದಾಖಲೆ ಪತ್ರಗಳನ್ನು ವಶಕ್ಕೆ ಪಡೆಯಲಾಗಿದೆ ಎಂದು ಮೂಲಗಳು ತಿಳಿಸಿವೆ.

‘ಎಸಿಬಿ ಅಧಿಕಾರಿಗಳು ಅವರ ಕೆಲಸ ಮಾಡುತ್ತಿದ್ದಾರೆ. ಅದಕ್ಕೆ ಸಹಕರಿಸಿದ್ದೇನೆ. ಏನೂ ಪ್ರತಿಕ್ರಿಯೆ ಕೊಡುವುದಿಲ್ಲ’ ಎಂದು ಪವಾರ್ ಅವರು ಮಾಧ್ಯಮಗಳ ಮುಂದೆ ಹೇಳಿದರು. ಇದೇ ಜೂನ್ 30ಕ್ಕೆ ಅವರು ನಿವೃತ್ತಿ ಹೊಂದಲಿದ್ದಾರೆ.

ಎಇ ಮನೆಯಲ್ಲಿ ₹10 ಲಕ್ಷ ಮೌಲ್ಯದ ವಜ್ರಾಭರಣ ಪತ್ತೆ

ಪರಮೇಶ್ವರಪ್ಪ

ಹೊಸಪೇಟೆ (ವಿಜಯನಗರ): ಜಿಲ್ಲೆಯ ಹೂವಿನಹಡಗಲಿ ಸಣ್ಣ ನೀರಾವರಿ ಇಲಾಖೆಯಲ್ಲಿ ಸಹಾಯಕ ಎಂಜಿನಿಯರ್ ಆಗಿ ಕೆಲಸ ನಿರ್ವಹಿಸುತ್ತಿರುವ ವಿ. ಪರಮೇಶ್ವರಪ್ಪ ಅವರ ಮನೆ, ಕಚೇರಿ ಮೇಲೆ ಭ್ರಷ್ಟಾಚಾರ ನಿಗ್ರಹ ದಳದವರು (ಎಸಿಬಿ) ಶುಕ್ರವಾರ ದಾಳಿ ನಡೆಸಿದ್ದು, ₹10 ಲಕ್ಷ ಮೌಲ್ಯದ ವಜ್ರಾಭರಣ ಪತ್ತೆ ಹಚ್ಚಿದ್ದಾರೆ.

ಜಿಲ್ಲೆಯ ಹಗರಿಬೊಮ್ಮನಹಳ್ಳಿಯ ಬಾಡಿಗೆ ಮನೆ ಮೇಲೆ ದಾಳಿ ನಡೆಸಿದ ಎಸಿಬಿ ತಂಡ, 892 ಗ್ರಾಂ ಚಿನ್ನ, 2 ಕೆ.ಜಿ ಬೆಳ್ಳಿ ಆಭರಣ ₹10.33 ಲಕ್ಷ ನಗದು, 2 ಮನೆ, 7 ನಿವೇಶನ 4.72 ಸೇಂಟ್ಸ್ ಕೃಷಿ ಭೂಮಿ, ಕೋಟಕ್ ಬ್ಯಾಂಕ್‌ನಲ್ಲಿ ಲಾಕರ್ ಇರುವುದು ಪತ್ತೆ ಹಚ್ಚಿದೆ.

₹ 1.92 ಕೋಟಿ ನಗದು, 13 ಕೆ.ಜಿ ಚಿನ್ನಾಭರಣ ವಶ

ಒಂದನೇ ಪುಟದಿಂದ...

79 ಎಕರೆ 23 ಗುಂಟೆ ಕೃಷಿ ಜಮೀನು, ಎರಡು ನಿವೇಶನ ಹೊಂದಿರುವುದಕ್ಕೆ ಸಂಬಂಧಿಸಿದ ದಾಖಲೆಗಳನ್ನು ತನಿಖಾ ತಂಡ ಪತ್ತೆಹಚ್ಚಿದೆ. ಈ ಅಧಿಕಾರಿ, ಬೇನಾಮಿಯಾಗಿ ಹಲವು ವ್ಯಕ್ತಿಗಳ ಹೆಸರಿನಲ್ಲಿ ಆಸ್ತಿ ಹೊಂದಿರುವ ಶಂಕೆ ಇದ್ದು, ತನಿಖೆ ಮುಂದುವರಿದಿದೆ ಎಂದು ಮೂಲಗಳು ತಿಳಿಸಿವೆ.

ಕುಲಸಚಿವ ಶಾಲೆಯ ಒಡೆಯ: ಬೆಂಗಳೂರು ಉತ್ತರ ವಿಶ್ವವಿದ್ಯಾಲಯದ ಮೌಲ್ಯಮಾಪನ ವಿಭಾಗದ ನಿವೃತ್ತ ಕುಲಸಚಿವ ಡಾ.ಕೆ. ಜನಾರ್ದನ್, ಆಂಧ್ರಪ್ರದೇಶದ ಚಿತ್ತೂರು ಜಿಲ್ಲೆಯ ಬಂಗಾರುಪಾಳ್ಯದಲ್ಲಿ ಶಾಲೆ ನಡೆಸುತ್ತಿರುವುದು ತನಿಖೆ ವೇಳೆ ಬಯಲಿಗೆ ಬಂದಿದೆ. ಬೆಂಗಳೂರು ನಗರ ಮತ್ತು ಆಂಧ್ರಪ್ರದೇಶದ ವಿವಿಧೆಡೆ ಸ್ಥಿರಾಸ್ತಿಗಳನ್ನು ಹೊಂದಿರುವ ದಾಖಲೆಗಳೂ ತನಿಖಾ ತಂಡಕ್ಕೆ ದೊರಕಿವೆ.

ಗದಗ ತಾಲ್ಲೂಕಿನ ಅಸುಂಡಿ ಗ್ರಾಮ ಪಂಚಾಯಿತಿಯ ಗ್ರೇಡ್–2 ಕಾರ್ಯದರ್ಶಿ ಪ್ರದೀಪ ಶಿವಪ್ಪ ಆಲೂರ 16 ಬ್ಯಾಂಕ್ ಖಾತೆಗಳನ್ನು ಹೊಂದಿದ್ದಾರೆ. ಅಪಾರ ಪ್ರಮಾಣದ ಸ್ಥಿರಾಸ್ತಿಯೂ ಈ ಅಧಿಕಾರಿ ಬಳಿ ಪತ್ತೆಯಾಗಿದೆ.

ಎಸಿಬಿ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಸೀಮಾಂತ್ ಕುಮಾರ್ ಸಿಂಗ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಸಂಸ್ಥೆಯ 555 ಅಧಿಕಾರಿಗಳು ಮತ್ತು ಸಿಬ್ಬಂದಿ ಪಾಲ್ಗೊಂಡಿದ್ದರು.

80 ತಂಡಗಳನ್ನು ಶೋಧ ಕಾರ್ಯಾಚರಣೆಗೆ ನಿಯೋಜಿಸಲಾಗಿತ್ತು.

ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ) ಶುಕ್ರವಾರ ನಡೆಸಿದ ಶೋಧ ಕಾರ್ಯಾಚರಣೆ ವೇಳೆ ನೋಂದಣಿ ಮತ್ತು ಮುದ್ರಾಂಕ ಇಲಾಖೆಯ ಸಹಾಯಕ ಮಹಾನಿರೀಕ್ಷಕ ಮಧುಸೂದನ್ ಮನೆಯಲ್ಲಿ ಪತ್ತೆಯಾಗಿರುವ ಚಿನ್ನಾಭರಣ ಮತ್ತು ನಗದು

ಬಿಡಿಎ ಉದ್ಯಾನ ಸಿಬ್ಬಂದಿ ಬಹುಕೋಟಿ ಒಡೆಯ!

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದ (ಬಿಡಿಎ) ಉದ್ಯಾನ ನಿರ್ವಹಣಾ ಸಿಬ್ಬಂದಿಯಾಗಿರುವ ಶಿವಲಿಂಗಯ್ಯ ನಗರದಲ್ಲಿ ನಾಲ್ಕು ಮನೆ, ಒಂದು ನಿವೇಶನ, ಚನ್ನಪಟ್ಟಣದಲ್ಲಿ 1 ಎಕರೆ 9 ಗುಂಟೆ ಕೃಷಿ ಜಮೀನು ಸೇರಿದಂತೆ ಬಹು ಕೋಟಿ ರೂಪಾಯಿ ಮೌಲ್ಯದ ಆಸ್ತಿ ಹೊಂದಿರುವುದನ್ನು ಎಸಿಬಿ ಪತ್ತೆಮಾಡಿದೆ.

ನಿವೃತ್ತಿ ಬಳಿಕ ದಿಢೀರ್ ಮೇಲೇರಿದ ಆಸ್ತಿ!

ಬೆಂಗಳೂರು: ಲೋಕೋಪಯೋಗಿ ಇಲಾಖೆಯ ನಿವೃತ್ತ ಸೂಪರಿಂಟೆಂಡಿಂಗ್ ಎಂಜಿನಿಯರ್ ಮಂಜುನಾಥ ಜಿ. 2018ರಲ್ಲಿ ನಿವೃತ್ತರಾಗಿದ್ದು, ಆ ಬಳಿಕ ಭಾರಿ ಪ್ರಮಾಣದ ಆಸ್ತಿ ಖರೀದಿಸಿರುವುದನ್ನು ಎಸಿಬಿ ಅಧಿಕಾರಿಗಳು ಶುಕ್ರವಾರ ಪತ್ತೆಮಾಡಿದ್ದಾರೆ.

ಬೆಂಗಳೂರು ನಗರದ ಬಸವೇಶ್ವರ ನಗರ ಮತ್ತು ರಾಜಾಜಿನಗರದಲ್ಲಿ ತಲಾ ಒಂದು ಮನೆ, ಜಯನಗರ ಹಾಗೂ ನಾಗವಾರದಲ್ಲಿ ತಲಾ ಒಂದು ವಾಣಿಜ್ಯ ಸಂಕೀರ್ಣ, ಎರಡು ಫ್ಲ್ಯಾಟ್ ಸೇರಿದಂತೆ ಹಲವು ಸ್ಥಿರಾಸ್ತಿಗಳು ಇವರ ಕುಟುಂಬದ ಬಳಿ ಪತ್ತೆಯಾಗಿವೆ. ಪತ್ನಿ, ಮಗಳ ಹೆಸರಿನಲ್ಲೂ ಆಸ್ತಿ ಖರೀದಿಸಿರುವ ದಾಖಲೆಗಳು ತನಿಖಾ ತಂಡಕ್ಕೆ ಲಭಿಸಿವೆ.

‘ನಿವೃತ್ತ ಅಧಿಕಾರಿ ಮಂಜುನಾಥ ನೋಂದಣಿ ಮತ್ತು ಮುದ್ರಾಂಕ ಇಲಾಖೆ ಅಧಿಕಾರಿಗಳನ್ನು ಎಸಿಬಿ ಸೇರಿದಂತೆ ತನಿಖಾ ಸಂಸ್ಥೆಗಳ ಹೆಸರಿನಲ್ಲಿ ಬೆದರಿಸಿ ಹಣಕ್ಕೆ ಬೇಡಿಕೆ ಇಡುತ್ತಿದ್ದಾರೆ. ಕಂದಾಯ ಸಚಿವರ ಹಣಕ್ಕಾಗಿ ಒತ್ತಾಯಿಸುತ್ತಾರೆ. ಶಾಸಕರ ಭವನವನ್ನು ಈ ಕೆಲಸಕ್ಕೆ ದುರ್ಬಳಕೆ ಮಾಡಿಕೊಳ್ಳುತ್ತಿದ್ದಾರೆ’ ಎಂದು ಆರೋಪಿಸಿ ಬಾಗಲಕೋಟೆಯ ಗುಳೇದಗುಡ್ಡ ತಾಲ್ಲೂಕಿನ ಹೊಳೆಬಸಪ್ಪ ಹಾಳಕೇರಿ ಎಂಬ ವಕೀಲರು ಫೆಬ್ರುವರಿಯಲ್ಲಿ ಎಸಿಬಿಗೆ ದೂರು ನೀಡಿದ್ದರು. ಅದರ ಆಧಾರದಲ್ಲೇ ತನಿಖೆ ಆರಂಭಿಸಲಾಗಿತ್ತು ಎಂದು ಮೂಲಗಳು ಹೇಳಿವೆ.

ಸದ್ಯ, ಮಂಜುನಾಥ್ ಬಳಿ ಹತ್ತಾರು ಕೋಟಿ ರೂಪಾಯಿ ಮೌಲ್ಯದ ಸ್ಥಿರಾಸ್ತಿಗಳು ಪತ್ತೆಯಾಗಿವೆ.

ಸುದ್ದಿ 2 ನಿಮಿಷ

ಪೊಲೀಸ್ ಪಡೆಗೂ ‘ಅಗ್ನಿವೀರ’ ಸೈನಿಕರ ಭರ್ತಿ: ಆರಗ ಜ್ಞಾನೇಂದ್ರ

ಬೆಂಗಳೂರು: ‘ಅಗ್ನಿಪಥ’ ಯೋಜನೆಯಡಿ ತರಬೇತಿ ಪಡೆದು ಬರುವ ‘ಅಗ್ನಿವೀರ’ ಸೈನಿಕರನ್ನು ರಾಜ್ಯ ಪೊಲೀಸ್ ಇಲಾಖೆಯಲ್ಲೂ ಭರ್ತಿ ಮಾಡಲಾಗುವುದು ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ತಿಳಿಸಿದರು.

ಸೇನೆಯ ಹೊಸ ನೇಮಕಾತಿ ನೀತಿಯನ್ನು ವಿರೋಧಿಸಿ ನಡೆಯುತ್ತಿರುವ ಪ್ರತಿಭಟನೆಯನ್ನು ಖಂಡಿಸಿದ ಅವರು, ‘4 ವರ್ಷ ಸೇನೆಯಲ್ಲಿ ತರಬೇತಿ ಪಡೆದು ಬರುವ ‘ಅಗ್ನಿವೀರ’ ಸೈನಿಕರಿಗೆ ರಾಜ್ಯದ ಪೊಲೀಸ್ ಪಡೆಗೆ ಭರ್ತಿ ಮಾಡಿಕೊಳ್ಳುವ ಉದ್ದೇಶವಿದೆ’ ಎಂದು ಅವರು ಸುದ್ದಿಗಾರರಿಗೆ ತಿಳಿಸಿದರು. ಉತ್ತರಪ್ರದೇಶ ಮತ್ತು ಮಧ್ಯ ಪ್ರದೇಶದಲ್ಲೂ ಇಂತಹ ಯೋಜನೆಯನ್ನು ಪ್ರಕಟಿಸಲಾಗಿದೆ.

‘ಯುವಕರು ಕೇವಲ ₹5,000ಕ್ಕೆ ವಿವಿಧ ಉದ್ಯೋಗಗಳಿಗೆ ಸೇರುತ್ತಿದ್ದಾರೆ. ಅಗ್ನಿಪಥ ಯೋಜನೆ ಲಕ್ಷಾಂತರ ಯುವಕರಿಗೆ ಪ್ರಯೋಜನವಾಗಲಿದೆ. ಸೇನೆಯಲ್ಲಿ ಸೇವೆ ಸಲ್ಲಿಸಿ ಬಂದ ನಂತರ ಪೊಲೀಸ್, ಇತರ ಭದ್ರತಾ ಸಂಸ್ಥೆಗಳೂ ಸೇರಿ ಯಾವುದೇ ಸೇವೆಗಳಿಗೂ ಸೇರಲು ಅವಕಾಶವಿದೆ. ಆದರೆ ಯಾವ ಕಾರಣಕ್ಕಾಗಿ ಪ್ರತಿಭಟನೆ ನಡೆಸುತ್ತಿದ್ದಾರೆ ಎಂಬುದು ಅರ್ಥವಾಗುತ್ತಿಲ್ಲ’ ಎಂದರು.

ಕೋವಿಡ್ ಪರಿಹಾರ: ಅರ್ಜಿ ಸಲ್ಲಿಕೆಗೆ ಜೂ.30 ಕೊನೇ ದಿನ

ಬೆಂಗಳೂರು: ಕೋವಿಡ್‌ನಿಂದ ಮೃತಪಟ್ಟ ವ್ಯಕ್ತಿಗಳ ಕುಟುಂಬದವರು ಪರಿಹಾರ ಕೋರಿ ಅರ್ಜಿ ಸಲ್ಲಿಸಲು ನಿಗದಿಪಡಿಸಿದ್ದ ಕಾಲಮಿತಿಯನ್ನು ಜೂನ್ 30 ರವರೆಗೆ ವಿಸ್ತರಿಸಲಾಗಿದೆ.

ಈ ಹಿಂದೆ ಅರ್ಜಿ ಸಲ್ಲಿಸಲು ಮಾರ್ಚ್ 20 ಕೊನೆಯ ದಿನವಾಗಿತ್ತು. ಕಾಲಾವಧಿ ವಿಸ್ತರಿಸಲು ಹಲವು ಜಿಲ್ಲೆಗಳಿಂದ ಕೋರಿಕೆ ಬಂದಿತ್ತು. ಕೇಂದ್ರ ಸರ್ಕಾರದ ಮಾರ್ಗಸೂಚಿಯನ್ವಯ ಸಂತ್ರಸ್ತ ಕುಟುಂಬಗಳಿಗೆ ತಲಾ ₹50 ಸಾವಿರ ಪರಿಹಾರ ಧನ ವಿತರಿಸಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕೋವಿಡ್: ದೇಶದಲ್ಲಿ 12,887 ಹೊಸ ಪ್ರಕರಣ, 63,063 ಸಕ್ರಿಯ

ನವದೆಹಲಿ (ಪಿಟಿಐ): ದೇಶದಲ್ಲಿ ಕೊರೊನಾ ಸೋಂಕಿನ ಪ್ರಮಾಣ ಏರುಗತಿಯಲ್ಲಿ ಮುಂದುವರಿದಿದ್ದು, ಶುಕ್ರವಾರ ಬೆಳಿಗ್ಗೆ 8 ಗಂಟೆಗೆ ಮುಕ್ತಾಯವಾದ 24 ತಾಸುಗಳ ಅವಧಿಯಲ್ಲಿ 12,847 ಹೊಸ ಕೊರೊನಾ ಪ್ರಕರಣಗಳು ಪತ್ತೆಯಾಗಿವೆ. ಇದೇ ಅವಧಿಯಲ್ಲಿ 14 ಮಂದಿ ಮೃತಪಟ್ಟಿದ್ದಾರೆ.

ಸಕ್ರಿಯ ಪ್ರಕರಣಗಳ ಸಂಖ್ಯೆ 63,063ಕ್ಕೆ ಏರಿಕೆಯಾಗಿದೆ. ದೈನಂದಿನ ಪಾಸಿಟಿವಿಟಿ ದರ ಶೇ 2.47ಕ್ಕೆ ಹೆಚ್ಚಿದೆ.

ಹೊಸ ಪ್ರಕರಣಗಳೂ ಸೇರಿ ಒಟ್ಟು ಸೋಂಕಿತರ ಸಂಖ್ಯೆ 4,32,70,577ಕ್ಕೆ ಏರಿಕೆಯಾಗಿ, ಮೃತಪಟ್ಟವರ ಸಂಖ್ಯೆ 5,24,817ಕ್ಕೆ ಹೆಚ್ಚಿದೆ. ಒಟ್ಟು ಸೋಂಕಿತರ ಪೈಕಿ 4,26,82,697 ಮಂದಿ ಗುಣಮುಖರಾಗಿದ್ದಾರೆ.

ಈ ಮಧ್ಯೆ, ದೇಶದಲ್ಲೇ ಅತ್ಯಧಿಕ ಪಾಸಿಟಿವಿಟಿ ದರ ಮುಂಬೈಯಲ್ಲಿ ದಾಖಲಾಗಿದೆ. ನಡೆಸಲಾದ 15,656 ಪರೀಕ್ಷೆಗಳ ಪೈಕಿ 2,366 ಮಂದಿಗೆ ಕೋವಿಡ್ ದೃಢಪಟ್ಟಿದ್ದು, ಈ ಮೂಲಕ ಅಲ್ಲಿ ಪಾಸಿಟಿವಿಟಿ ದರ ಶೇಕಡ 15.11ರಷ್ಟಾಗಿದೆ. ಇದೇ 14ರಂದು ನಗರದಲ್ಲಿನ ಪಾಸಿಟಿವಿಟಿ ದರ ಶೇ 15.58ರಷ್ಟಾಗಿತ್ತು.

ಡೇರಾ ಸಚ್ಚಾ ಸೌಧಾ ಮುಖ್ಯಸ್ಥನಿಗೆ ಪೆರೋಲ್

ಚಂಡೀಗಢ (ಪಿಟಿಐ): ಡೇರಾ ಸಚ್ಚಾ ಸೌಧಾ ಮುಖ್ಯಸ್ಥ ಗುರ್ಮಿತ್ ರಾಮ್ ರಹೀಮ್ ಸಿಂಗ್‌ಗೆ ಒಂದು ತಿಂಗಳ ಪೆರೋಲ್ ಮಂಜೂರಾಗಿದ್ದು, ಹರಿಯಾಣದ ರೋಹ್ಟಕ್ ಜೈಲಿನಿಂದ ಬಿಡುಗಡೆ ಮಾಡಲಾಗಿದೆ.

ಸಂಬಂಧಿತ ಅಧಿಕಾರಿಗಳ ಶಿಫಾರಸಿನ ಮೇರೆಗೆ ರೋಹ್ಟಕ್ ವಿಭಾಗೀಯ ಆಯುಕ್ತರು 30 ದಿನಗಳ ಪೆರೋಲ್ ಮಂಜೂರು ಮಾಡಿದ್ದಾರೆ.

ಕೇಂದ್ರ ಜಲಶಕ್ತಿ ಸಚಿವರಿಗೆ ಮುಖ್ಯಮಂತ್ರಿ ಮನವಿ

ಮೇಕೆದಾಟು ಯೋಜನೆಗೆ ಶೀಘ್ರ ಒಪ್ಪಿಗೆ ಕೊಡಿ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ನವದೆಹಲಿ: ಕೇಂದ್ರ ಜಲಶಕ್ತಿ ಸಚಿವ ಗಜೇಂದ್ರ ಸಿಂಗ್ ಶೆಖಾವತ್ ಅವರನ್ನು ನವದೆಹಲಿಯಲ್ಲಿ ಶುಕ್ರವಾರ ಭೇಟಿಯಾದ ಕರ್ನಾಟಕದ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಮೇಕೆದಾಟು ಯೋಜನೆಗೆ ಶೀಘ್ರ ಅನುಮತಿ ನೀಡುವಂತೆ ಮನವಿ ಮಾಡಿದರು.

ಕಾವೇರಿ ನೀರು ನಿರ್ವಹಣಾ ಪ್ರಾಧಿಕಾರದ ಸಭೆ ಇದೇ 23ರಂದು ನಡೆಯಲಿದ್ದು, ಯೋಜನೆಯ ವಿಸ್ತೃತ ಯೋಜನಾ ವರದಿಗೆ ಒಪ್ಪಿಗೆ ಸಿಗುವ ವಿಶ್ವಾಸ ಇದೆ. ಈ ಬಗ್ಗೆ ಸಚಿವರ ಗಮನ ಸೆಳೆಯಲಾಗಿದೆ ಎಂದು ಬೊಮ್ಮಾಯಿ ಅವರು ಸುದ್ದಿಗಾರರಿಗೆ ತಿಳಿಸಿದರು.

ಭದ್ರಾ ಮೇಲ್ದಂಡೆ ಯೋಜನೆಯನ್ನು ರಾಷ್ಟ್ರೀಯ ಯೋಜನೆಯನ್ನಾಗಿ ಘೋಷಿಸಲು ಕೇಂದ್ರ ಹಣಕಾಸು ಸಚಿವಾಲಯ ಒಪ್ಪಿಗೆ ನೀಡಿದೆ. ಕೇಂದ್ರ ಸಚಿವ ಸಂಪುಟದ ಸಭೆಯಲ್ಲಿ ಶೀಘ್ರ ಇದಕ್ಕೆ ಒಪ್ಪಿಗೆ ಸಿಗುವ ವಿಶ್ವಾಸ ಇದೆ. ಯೋಜನೆಗೆ ಕೇಂದ್ರದ ಪಾಲಿನ ಅನುದಾನವನ್ನು ಆದಷ್ಟು ಬೇಗ ಬಿಡುಗಡೆ ಮಾಡುವಂತೆ ಸಹ ಸಚಿವರಲ್ಲಿ ವಿನಂತಿ ಮಾಡಲಾಗಿದೆ ಎಂದು ಅವರು ಹೇಳಿದರು.

‘ಕರ್ನಾಟಕದ ಜಿಎಸ್‌ಟಿ ಪರಿಹಾರ ಮೊತ್ತದಲ್ಲಿ ₹8,500 ಕೋಟಿ ಇತ್ತೀಚೆಗೆ ಬಿಡುಗಡೆಯಾಗಿದೆ. ಉಳಿದ ಮೊತ್ತವನ್ನು ತ್ವರಿತಗತಿಯಲ್ಲಿ ಬಿಡುಗಡೆ ಮಾಡುವಂತೆ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರಿಗೆ ಮನವಿ ಮಾಡಲಾಗಿದೆ. ಇದಕ್ಕೆ ಸಚಿವರು ಸಕಾರಾತ್ಮಕವಾಗಿ ಸ್ಪಂದಿಸಿದ್ದಾರೆ’ ಎಂದು ಅವರು ತಿಳಿಸಿದರು.

27ಕ್ಕೆ ಮಧ್ಯಂತರ ವರದಿ: ಬಸವರಾಜ ಬೊಮ್ಮಾಯಿ ಅಧ್ಯಕ್ಷತೆಯಲ್ಲಿ ರಚಿತವಾಗಿರುವ ಜಿಎಸ್‌ಟಿಯ ಸಚಿವರ ಗುಂಪಿನ ಸಭೆ ಕರ್ನಾಟಕ ಭವನದಲ್ಲಿ ನಡೆಯಿತು. ಸಭೆಯಲ್ಲಿ ವಿವಿಧ ರಾಜ್ಯಗಳ ಸಚಿವರು, ಕರ್ನಾಟಕ ಹಣಕಾಸು ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಐ.ಎಸ್.ಎನ್.ಪ್ರಸಾದ್, ಮುಖ್ಯಮಂತ್ರಿಗಳ ಪ್ರಧಾನ ಕಾರ್ಯದರ್ಶಿ ಮಂಜುನಾಥ ಪ್ರಸಾದ್, ವಾಣಿಜ್ಯ ತೆರಿಗೆ ಇಲಾಖೆಯ ಆಯುಕ್ತೆ ಸಿ.ಶಿಖಾ ಸೇರಿ ಹಲವು ಅಧಿಕಾರಿಗಳು ಪಾಲ್ಗೊಂಡಿದ್ದರು.

ಹಲವು ಅಗತ್ಯವಸ್ತುಗಳ ಜಿಎಸ್‌ಟಿ ದರ ಶೇ 18, ಶೇ 12 ಇದೆ. ಅವುಗಳನ್ನು ಕ್ರಮವಾಗಿ ಶೇ 12 ಹಾಗೂ ಶೇ 5ಕ್ಕೆ ಇಳಿಸುವ ಬಗ್ಗೆ ಸಮಾಲೋಚಿಸಲಾಯಿತು. ಈ ಬಗ್ಗೆ ಜಿಎಸ್‌ಟಿ ಕೌನ್ಸಿಲ್‌ಗೆ ಶಿಫಾರಸು ಮಾಡಲು ನಿರ್ಧರಿಸಲಾಯಿತು.

‘ಜಿಎಸ್‌ಟಿ ಕೌನ್ಸಿಲ್‌ನ ಸಭೆ ಇದೇ 27 ಹಾಗೂ 28ರಂದು ನಡೆಯಲಿದೆ. ಸಮಿತಿಯ ಮಧ್ಯಂತರ ವರದಿಯನ್ನು ಸಭೆಗೆ ಮುನ್ನ ಸಲ್ಲಿಸಲಾಗುವುದು’ ಎಂದು ಬಸವರಾಜ ಬೊಮ್ಮಾಯಿ ಹೇಳಿದರು.

ರಾಜ್ಯದಲ್ಲಿ ಕಟ್ಟೆಚ್ಚರ: ‘ಅಗ್ನಿಪಥ ಯೋಜನೆಯಡಿ ಗರಿಷ್ಠ ವಯೋಮಿತಿಯನ್ನು 21 ವರ್ಷದಿಂದ 23ಕ್ಕೆ ಏರಿಸಿರುವುದು ಶ್ಲಾಘನೀಯ. ಆದರೆ, ಇಂತಹ ಉತ್ತಮ ಯೋಜನೆಯನ್ನು ವಿರೋಧಿಸಿ ಹಲವು ರಾಜ್ಯಗಳಲ್ಲಿ ಪ್ರತಿಭಟನೆಗಳು ನಡೆದಿವೆ. ಕರ್ನಾಟಕದಲ್ಲಿ ಅಹಿತಕರ ಘಟನೆ ನಡೆಯದಂತೆ ಎಚ್ಚರಿಕೆ ವಹಿಸುವಂತೆ ಡಿಜಿಪಿ, ಎಡಿಜಿಪಿ (ಕಾನೂನು ಸುವ್ಯವಸ್ಥೆ) ಹಾಗೂ ಬೆಂಗಳೂರು ನಗರ ಪೊಲೀಸ್ ಕಮಿಷನರ್ ಅವರಿಗೆ ನಿರ್ದೇಶನ ನೀಡಲಾಗಿದೆ’ ಎಂದು ಮುಖ್ಯಮಂತ್ರಿ ಹೇಳಿದರು.

ದೆಹಲಿ: ಪ್ರತಿಭಟನೆಗೆ ವಿದ್ಯಾರ್ಥಿಗಳ ಸೇರ್ಪಡೆ

ನವದೆಹಲಿ (ಪಿಟಿಐ): ಕೇಂದ್ರಸರ್ಕಾರದ ನೂತನ ‘ಅಗ್ನಿಪಥ’ ಯೋಜನೆಯನ್ನು ವಿರೋಧಿಸಿ ದೆಹಲಿಯಲ್ಲಿ ಹಲವು ವಿದ್ಯಾರ್ಥಿ ಸಂಘಟನೆಗಳ ಸದಸ್ಯರು ಶುಕ್ರವಾರ ಪ್ರತಿಭಟನೆ ನಡೆಸಿದರು. ಇದರಿಂದ ದೆಹಲಿಯ ಹಲವೆಡೆ ಮೆಟ್ರೊ ರೈಲುನಿಲ್ದಾಣಗಳ ಬಾಗಿಲುಗಳನ್ನು ಬಂದ್ ಮಾಡಬೇಕಾದ ಸ್ಥಿತಿ ಎದುರಾಗಿತ್ತು. ಹಲವು ವಿದ್ಯಾರ್ಥಿ ಸಂಘಟನೆಗಳು ಈ ಯೋಜನೆಯನ್ನು ವಿರೋಧಿಸಿ ಸೋಮವಾರ ಭಾರಿ ಪ್ರತಿಭಟನೆಗೆ ಕರೆ ನೀಡಿವೆ.

ಈ ಯೋಜನೆ ವಿರುದ್ಧ ದೇಶದ ಎಲ್ಲೆಡೆ ಪ್ರತಿಭಟನೆ ಹಿಂಸೆಗೆ ತಿರುಗಿದ್ದರೂ ದೆಹಲಿಯಲ್ಲಿ ಮಾತ್ರ ವಿದ್ಯಾರ್ಥಿಗಳು ಶಾಂತಿಯುತವಾಗಿ ಪ್ರತಿಭಟನೆ ನಡೆಸಿದ್ದಾರೆ. ‘ಪ್ರತಿಭಟನೆ ನಡೆಸಲು ವಿದ್ಯಾರ್ಥಿ ಸಂಘಟನೆಗಳು ಅನುಮತಿ ಪಡೆದಿರಲಿಲ್ಲ. ಆದರೂ ಪ್ರತಿಭಟನೆಗೆ ಅವಕಾಶ ನೀಡಿದೆವು’ ಎಂದು ದೆಹಲಿ ಪೊಲೀಸರು ಹೇಳಿದ್ದಾರೆ. ಪ್ರತಿಭಟನೆ ನಡೆದ ರಸ್ತೆಗಳಲ್ಲಿ ವಾಹನ ಸಂಚಾರವನ್ನು ಪೊಲೀಸರು ಬಂದ್ ಮಾಡಿದ್ದರು ಮತ್ತು ಬೇರೆಡೆ ಸಂಚಾರಕ್ಕೆ ಅವಕಾಶ ಮಾಡಿಕೊಟ್ಟರು.

ಯುವ ಕಾಂಗ್ರೆಸ್ ಸದಸ್ಯರು ದೆಹಲಿಯಲ್ಲಿನ ತಮ್ಮ ಕಚೇರಿ ಬಳಿ ಪ್ರತಿಭಟನೆ ನಡೆಸಿದರು. ಆದರೆ ಅವರು ಅನುಮತಿ ಪಡೆಯದೇ ಇದ್ದ ಕಾರಣ, ಮೆರವಣಿಗೆ ನಡೆಸಲು ಪೊಲೀಸರು ಅವಕಾಶ ನೀಡಲಿಲ್ಲ.

ಅಖಿಲ ಭಾರತ ವಿದ್ಯಾರ್ಥಿ ಸಂಘಟನೆಯ ಸದಸ್ಯರು ದೆಹಲಿಯ ಹಲವೆಡೆ ಪ್ರತಿಭಟನಾ ಮೆರವಣಿಗೆ ನಡೆಸಿದರು. ಭಾರತೀಯ ಸ್ಟೂಡೆಂಟ್ಸ್ ಫೆಡರೇಷನ್ (ಎಸ್‌ಎಫ್‌ಐ), ಸಂಯುಕ್ತ ರೋಜಗಾರ್ ಆಂದೋಲನ ಸಮಿತಿ, ದೇಶ್ ಕಿ ಬಾತ್ ಫೌಂಡೇಷನ್‌ನ ಸದಸ್ಯರು ಪ್ರತಿಭಟನೆಯಲ್ಲಿ ಭಾಗಿಯಾದರು. ಪ್ರತಿಭಟನೆ ವೇಳೆ, ‘ಸರ್ವಾಧಿಕಾರ ನಡೆಯುವುದಿಲ್ಲ, ನಿಮ್ಮ ಅಗ್ನಿಪಥ ವಾಪಸ್ ತೆಗೆದುಕೊಳ್ಳಿ’, ‘ಸೇನೆಯ ಖಾಲಿ ಹುದ್ದೆಗಳನ್ನು ಶೀಘ್ರವೇ ಭರ್ತಿ ಮಾಡಿ’ ಎಂದು ಘೋಷಣೆ ಕೂಗಲಾಯಿತು.

ಅಗ್ನಿಪಥ ಯೋಜನೆ ವಿರೋಧಿಸಿ ಬಿಹಾರದ ದಾನಪುರದಲ್ಲಿ ಶುಕ್ರವಾರ ಪ್ರತಿಭಟನೆ ನಡೆಯಿತು –ಪಿಟಿಐ ಚಿತ್ರ

‘ಭಾರತ ಸೂಪರ್ ಪವರ್ ಆಗಲಿದೆ’

‘ಸೇನೆಯ ವಿವಿಧ ವಿಭಾಗಗಳ ಸಹಯೋಗದಲ್ಲಿ ಕೌಶಲ ಅಭಿವೃದ್ಧಿ ಸಚಿವಾಲಯವು ಅಗ್ನಿವೀರರಿಗೆ ಅಗತ್ಯ ತರಬೇತಿಯನ್ನು ನೀಡಲಿದೆ. ಇದರಿಂದ ದೇಶದ ಸೇನೆಯಲ್ಲೂ ಕೌಶಲವಿರುವ ಸೈನಿಕರು ಇರಲಿದ್ದಾರೆ. ಜತೆಗೆ ದೇಶದ ಉದ್ಯೋಗ ಮಾರುಕಟ್ಟೆಯಲ್ಲಿ ಕೌಶಲಯುಕ್ತ ನೌಕರರು ದೊರೆಯಲಿದ್ದಾರೆ’ ಎಂದು ಕೌಶಲ ಅಭಿವೃದ್ಧಿ ಸಚಿವಾಲಯವು ಹೇಳಿದೆ.

‘ಈ ತರಬೇತಿಯಲ್ಲಿ ದೊರೆಯುವ ಕೌಶಲಗಳು, ರಾಷ್ಟ್ರೀಯ ಕೌಶಲ ಅರ್ಹತಾ ಚೌಕಟ್ಟಿನ ಪಠ್ಯಕ್ರಮಕ್ಕೆ ಪೂರಕವಾಗಿ ಇರುತ್ತವೆ. ನಾಲ್ಕು ವರ್ಷಗಳ ನಂತರ ಅಗ್ನಿವೀರರು ಔದ್ಯೋಗಿಕ ಅನುಭವವನ್ನೂ ಹೊಂದಿರುತ್ತಾರೆ. ಜತೆಗೆ ಕೌಶಲಗಳನ್ನೂ ಕಲಿತಿರುತ್ತಾರೆ. ಸಶಸ್ತ್ರ ಪಡೆಗಳಲ್ಲಿ ಇವರಿಗೆ ನೀಡಲಾಗುವ ತರಬೇತಿ, ಪ್ರಮಾಣಪತ್ರ ಪರೀಕ್ಷೆಗಳ ರೂಪುರೇಷೆಗಳನ್ನು ಅಂತಿಮಗೊಳಿಸಲಾಗುತ್ತಿದೆ. ಅಗ್ನಿಪಥ ಯೋಜನೆಯಿಂದ ದೇಶದ ಗಡಿಯು ಸುರಕ್ಷಿತವಾಗಿ ಇರಲಿದೆ ಮತ್ತು ದೇಶದೊಳಗೆ ಅತ್ಯಾಧುನಿಕ ಕೌಶಲ ಹೊಂದಿದ ಅಭ್ಯರ್ಥಿಗಳ ದಂಡೂ ಹೆಚ್ಚಲಿದೆ. ಇದರಿಂದ ಭಾರತವು ಸೂಪರ್ ಪವರ್ ಆಗಲಿದೆ’ ಎಂದು ಸಚಿವಾಲಯವು ಹೇಳಿದೆ.

‘ಯುವಕರ ಹಾದಿ ತಪ್ಪಿಸಲಾಗುತ್ತಿದೆ’: ‘ಅಗ್ನಿಪಥ ಯೋಜನೆಯು ಒಂದು ಅತ್ಯುತ್ತಮವಾದ ಕ್ರಮವಾಗಿದೆ. ಆದರೆ, ಕೆಲವು ರಾಜಕೀಯ ಪಕ್ಷಗಳು ಈ ಯೋಜನೆಯ ಬಗ್ಗೆ ಯುವಕರನ್ನು ಹಾದಿ ತಪ್ಪಿಸುತ್ತಿವೆ’ ಎಂದು ಕೇಂದ್ರ ಸಚಿವ ನರೇಂದ್ರ ಸಿಂಗ್ ತೋಮರ್ ಅವರು ಆರೋಪಿಸಿದ್ದಾರೆ.

ರಕ್ಷಣಾ ಸಮಿತಿಗೆ ಪತ್ರ

‘ಅಗ್ನಿಪಥ ಯೋಜನೆಗೆ ಸಂಬಂಧಿಸಿದಂತೆ ಚರ್ಚಿಸಲು ಮತ್ತು ಅಗತ್ಯ ಶಿಫಾರಸುಗಳನ್ನು ಮಾಡಲು ತಕ್ಷಣವೇ ಸಭೆ ಕರೆಯಿರಿ’ ಎಂದು ರಕ್ಷಣಾ ವ್ಯವಹಾರಗಳ ಸಂಸದೀಯ ಸ್ಥಾಯಿ ಸಮಿತಿ ಅಧ್ಯಕ್ಷರಿಗೆ, ಸಮಿತಿಯ ಸದಸ್ಯ ಮತ್ತು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಪತ್ರ ಬರೆದಿದ್ದಾರೆ.

‘ಅಗ್ನಿಪಥ ಯೋಜನೆಯು ತಾತ್ಕಾಲಿಕವಾದ ಉದ್ಯೋಗವನ್ನಷ್ಟೇ ನೀಡುತ್ತದೆ. ಹೀಗಾಗಿ ಅದರ ವಿರುದ್ಧ ದೇಶದ ಯುವಜನರು ಸಿಡಿದೆದ್ದಿದ್ದಾರೆ. ಕೇವಲ ಆರು ತಿಂಗಳ ತರಬೇತಿ ನೀಡುವುದರಿಂದ ಸೇನೆಗೆ ನಿಯೋಜನೆ ಆಗುವವರು ಅಪಾಯ ಎದುರಿಸಬೇಕಾಗುತ್ತದೆ. ಈ ಯೋಜನೆಯನ್ನು ಸರಿಯಾಗಿ ರೂಪಿಸಿಲ್ಲ. ಹೀಗಾಗಿ ಸಂಬಂಧಿಸಿದ ಎಲ್ಲರ ಜತೆಗೆ ಸಮಾಲೋಚನೆ ನಡೆಸಬೇಕಿದೆ. ಇದಕ್ಕಾಗಿ ತುರ್ತಾಗಿ ಸಭೆ ಕರೆಯಿರಿ’ ಎಂದು ವೇಣುಗೋಪಾಲ್ ಆಗ್ರಹಿಸಿದ್ದಾರೆ.

ನಿಮ್ಮ ಹಕ್ಕುಗಳಿಗಾಗಿ ಹೋರಾಡುವ ಹಕ್ಕು ನಿಮಗೆ ಇದೆ. ಆದರೆ ನಿಮ್ಮ ಹೋರಾಟವು ಅಹಿಂಸಾರೂಪದ್ದಾಗಿರಬೇಕು ಮತ್ತು ಶಾಂತಿಯುತವಾಗಿರಬೇಕು
ವರುಣ್ ಗಾಂಧಿ
ಬಿಜೆಪಿ ಸಂಸದ

ಮೋದಿ ಯುವಕರಿಗೆ 16 ಕೋಟಿ ಉದ್ಯೋಗಗಳ ಭರವಸೆ ನೀಡಿದ್ದರು. ಈಗ ಅಗ್ನಿಪಥದ ಮೂಲಕ ಯುವಕರ ಭವಿಷ್ಯದ ಜತೆಗೆ ಆಟವಾಡುತ್ತಿದ್ದಾರೆ
ಗೋವಿಂದ್ ಸಿಂಗ್ ಡೋಟಾಸ್ರ
ರಾಜಸ್ಥಾನ ಕಾಂಗ್ರೆಸ್ ಅಧ್ಯಕ್ಷ

ಅಗ್ನಿಪಥವನ್ನು ದೇಶದ ಯುವಜನರು ಎಂದಿಗೂ ಒಪ್ಪಿಕೊಳ್ಳುವುದಿಲ್ಲ ಎಂಬುದನ್ನು ದೇಶದಾದ್ಯಂತ ನಡೆಯುತ್ತಿರುವ ಪ್ರತಿಭಟನೆಯೇ ಸಾಬೀತು ಮಾಡಿದೆ
ಮನೀಷ್ ಸಿಸೋಡಿಯಾ
ದೆಹಲಿ ಉಪಮುಖ್ಯಮಂತ್ರಿ

ಮೋದಿ ಸರ್ಕಾರವು ದೇಶದ ಭದ್ರತೆಯೊಂದಿಗೆ ಮತ್ತು ದೇಶದ ಯುವಕರ ಭದ್ರತೆಯೊಂದಿಗೆ ಚೆಲ್ಲಾಟವಾಡುತ್ತಿದೆ. ಪೂರ್ಣಾವಧಿಯ ನೇಮಕಾತಿ ಕೈಬಿಟ್ಟಿದ್ದೇಕೆ?
ಭೂಪೇಶ್ ಬಘೇಲ್
ಛತ್ತೀಸಗಡ ಮುಖ್ಯಮಂತ್ರಿ

ಇದು ಸೇನೆಗೆ ಕೇಂದ್ರ ಸರ್ಕಾರವು ಮಾಡುತ್ತಿರುವ ಅವಮಾನ ಮತ್ತು ದೇಶದ ಯುವಜನರಿಗೆ ಸರ್ಕಾರವು ಮಾಡುತ್ತಿರುವ ಮೋಸ. ಇದನ್ನು ತಕ್ಷಣವೇ ಹಿಂಪಡೆಯಬೇಕು
ಭಗವಂತ್ ಮಾನ್, ಪಂಜಾಬ್ ಮುಖ್ಯಮಂತ್ರಿ

ಪ್ರತಿರೋಧ ಹಲವೆಡೆ ವಿಸ್ತರಣೆ

ಒಂದನೇ ಪುಟದಿಂದ...

ಬಿಹಾರದ ವಿವಿಧೆಡೆ ಪ್ರತಿಭಟನೆ ನಡೆದಿದೆ. ‘ಅಗ್ನಿಪಥ’ ಯೋಜನೆಯನ್ನು ಮರುಪರಿಶೀಲಿಸಬೇಕು ಎಂಬ ಬೇಡಿಕೆಯನ್ನು ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್ ಪುನರುಚ್ಚರಿಸಿದ್ದಾರೆ.

ಲಖಿಸರಾಯ್ ಮತ್ತು ಸಮಷ್ಟಿಪುರ ರೈಲು ನಿಲ್ದಾಣಗಳಲ್ಲಿ ಒಟ್ಟು 30 ಬೋಗಿಗಳಿಗೆ ಬೆಂಕಿ ಹಚ್ಚಲಾಗಿದೆ. ಬೆಟಿಯಾದಲ್ಲಿ ಒಂದು ರೈಲು ಎಂಜಿನ್ ಬೆಂಕಿಗೆ ಆಹುತಿಯಾಗಿದೆ.

6.	No. KMIO/SME(I)/Tender/Chemicals/ 327/2022-23 Dated: 16-06-2022 (Call-1)	Tender for Supply of Consumables, Disposables and Other Medical Devices (Other than Innovators and Non US FDA/ Non European Medical Agency Approved Products) for Kidwai Memorial Institute of Oncology, Bengaluru (KMIO); PCC, Kalaburgi (PCC) and Kidwai Cancer Drug Foundation, Bengaluru (KCDF).
7.	No. KMIO/SME(I)/Tender/Chemicals/ 328 /2022-23 Dated: 16-06-2022 (Call-1)	Tender for Supply of US FDA/European Medical Agency Approved (Other than Innovators) Consumables, Disposables and Other Medical Devices for Kidwai Memorial Institute of Oncology, Bengaluru (KMIO); PCC, Kalaburgi (PCC) and Kidwai Cancer Drug Foundation, Bengaluru (KCDF).
8.	No. KMIO/SME(I)/Tender/Drugs KCDF/ 329/2022-23 Dated: 16-06-2022 (Call-1)	Tender for Supply of High Value Innovator Drugs and other Items for Kidwai Cancer Drug Foundation, Bengaluru (KCDF) on Consignment Basis.

ಆನ್‌ಲೈನ್‌ನಲ್ಲಿ ಬಿಡ್ ದಾಖಲೆಗಳ ಲಭ್ಯತೆ ದಿನಾಂಕ: **20.06.2022** ರಿಂದ **10.07.2022** ರವರೆಗೆ ಬಿಡ್ಡರ್‌ಗಳು ಬಿಡ್ ದಾಖಲೆಗಳನ್ನು ವೆಬ್‌ಸೈಟ್: **https://eproc.karnataka. gov.in**ನಲ್ಲಿ ನೋಡಿ ಡೌನ್‌ಲೋಡ್ ಮಾಡಿಕೊಳ್ಳ–ಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಶುಲ್ಕ **ರೂ.500/–**ನ್ನು ಪಾವತಿಸಿ, ಬಿಡ್‌ನ್ನು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಸಲ್ಲಿಸಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ಬಿಡ್ ಸ್ವೀಕರಿಸುವ ಕೊನೆಯ ದಿನಾಂಕ ಮತ್ತು ಸಮಯ **10.07.2022 ರ ಮಧ್ಯಾಹ್ನ 3:00 ಗಂಟೆಗೆ**. ಟೆಂಡರ್ ಸ್ವೀಕರಿಸುವ ಪ್ರಾಧಿಕಾರವು ಯಾವುದೇ ಕಾರಣ ನೀಡದೆ ಟೆಂಡರನ್ನು ಸ್ವೀಕರಿಸುವ/ತಿರಸ್ಕರಿಸುವ/ರದ್ದುಪಡಿಸುವ ಹಕ್ಕನ್ನು ಕಾಯ್ದಿರಿಸಿಕೊಂಡಿರುತ್ತದೆ.

ಸಹಿ/–
ನಿರ್ದೇಶಕರು

DIPR/CP/AAPL/RO945/22-23

ಕೋವಿಡ್-19 - ಗಾಳಿಸುದ್ದಿ ಹರಡಬೇಡಿ, ಜವಾಬ್ದಾರಿಯಿಂದ ವರ್ತಿಸಿ, ಸೋಂಕನ್ನು ದೂರವಿಡಿ-ಸೋಂಕಿತರನ್ನಲ್ಲ.
ಮಾಸ್ಕ್ ಧರಿಸಿ | 6 ಅಡಿ ದೈಹಿಕ ಅಂತರ ಪಾಲಿಸಿ | ಕೈಗಳ ಸ್ವಚ್ಛತೆ ಕಾಪಾಡಿಕೊಳ್ಳಿ

ಕೆನರಾ ಬ್ಯಾಂಕ್ Canara Bank

ಭಾರತ ಸರ್ಕಾರದ ಒಂದು ಉದ್ಯಮ — A Government of India Undertaking
ಸಿಂಡಿಕೇಟ್ Syndicate

ಸಾಮಾನ್ಯ ಆಡಳಿತ ವಿಭಾಗ, ವೃತ್ತ ಕಛೇರಿ,
ನಂ.86, ಎಂ.ಜಿ.ರಸ್ತೆ, ಬೆಂಗಳೂರು – 560001 ಫೋ : 25310039 / 25310038

ಆವರಣಗಳು ಬೇಕಾಗಿವೆ

ಕೆಳಗಿನ ಸ್ಥಳಗಳಲ್ಲಿ ಶಾಖೆ / ಕಛೇರಿಗಾಗಿ ವಾಣಿಜ್ಯ ಸ್ಥಳಾವಕಾಶವನ್ನು ಹೊಂದಿರುವ ಮಾಲೀಕರಿಂದ ಮೊಹರಾದ ಲಕೋಟೆಯಲ್ಲಿ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ.

ಕ್ರ	ಸ್ಥಳ	ಕ್ರ	ಸ್ಥಳ
1.	ತಿಂಡ್ಲು, ಬೆಂಗಳೂರು	7.	ಸರ್ಜಾಪುರ, ಬೆಂಗಳೂರು
2.	ದೊಡ್ಡಕಮ್ಮನಹಳ್ಳಿ, ಬೆಂಗಳೂರು	8.	ಮಾಯಸಂದ್ರ, ಬೆಂಗಳೂರು ಗ್ರಾಮಾಂತರ ಜಿಲ್ಲೆ
3.	ಹೆಚ್‌ಎಸ್‌ಆರ್ ಬಡಾವಣೆ, ಬೆಂಗಳೂರು	9.	ವಿವೇಕನಗರ, ಬೆಂಗಳೂರು
4.	ಸಾಸಲು, ಬೆಂಗಳೂರು ಗ್ರಾಮಾಂತರ ಜಿಲ್ಲೆ	10.	ಇಂಡ್ಲವಾಡಿಪುರ, ಆನೇಕಲ್, ಬೆಂಗಳೂರು ಗ್ರಾಮಾಂತರ ಜಿಲ್ಲೆ
5.	ಹುಲಿಯೂರುದುರ್ಗ, ತುಮಕೂರು ಜಿಲ್ಲೆ	11.	ಗಂಗಾನಗರ, ಬೆಂಗಳೂರು
6.	ಕೋರಮಂಗಲ, ಬೆಂಗಳೂರು	12.	ಮಾಲೂರು, ಕೋಲಾರ ಜಿಲ್ಲೆ

ವಿವರಗಳನ್ನು ಬ್ಯಾಂಕಿನ ವೆಬ್‌ಸೈಟ್ **http://www.canarabank.com** ನಲ್ಲಿ ಪ್ರಕಟಿಸಲಾಗಿದೆ. ಅಗತ್ಯವಾದ ಅರ್ಜಿಗಳನ್ನು ಮೇಲೆ ತಿಳಿಸಲಾದ ಕಛೇರಿಯಿಂದ ಪಡೆಯಬಹುದು ಅಥವಾ ಬ್ಯಾಂಕಿನ ವೆಬ್‌ಸೈಟ್‌ನಿಂದ Announcement → Tenders ಅಡಿಯಲ್ಲಿ ಡೌನ್‌ಲೋಡ್ ಮಾಡಿಕೊಳ್ಳಬಹುದು. ಪ್ರಸ್ತಾವನೆಗಳನ್ನು ನಮ್ಮ ಕಛೇರಿಯಲ್ಲಿ ಸಲ್ಲಿಸಲು ಕೊನೆಯ ದಿನಾಂಕ : **08–07–2022 ರಂದು ಸಂಜೆ 3.00 ಗಂಟೆಯವರೆಗೆ**. ಮುಂದೆ, ಮಾಹಿತಿಗಳು, ತಿದ್ದುಪಡಿಗಳು, ಮಾರ್ಪಾಡುಗಳು ಇದ್ದಲ್ಲಿ, ಬ್ಯಾಂಕಿನ ವೆಬ್‌ಸೈಟ್‌ನಲ್ಲಿ ಮಾತ್ರವೇ ಪ್ರಕಟಿಸಲಾಗುವುದು. "ಮಧ್ಯವರ್ತಿಗಳಿಗೆ ಅವಕಾಶವಿಲ್ಲ"

ಸ್ಥಳ : ಬೆಂಗಳೂರು
ದಿನಾಂಕ : 18–06–2022

ಸಹಿ/–
ಸಹಾಯಕ ಮಹಾ ಪ್ರಬಂಧಕರು

ಸುಭಾಷಿತ

ಕೋಪ, ದ್ವೇಷ ಮತ್ತು ಅಸೂಯೆಯು ಸಮಸ್ಯೆಗಳನ್ನು ಎಂದಿಗೂ ಪರಿಹರಿಸುವುದಿಲ್ಲ. ಪ್ರೀತಿ, ಕಾಳಜಿ ಮತ್ತು ಗೌರವ ಮಾತ್ರ ಅಂತಹ ಕಾರ್ಯ ಮಾಡಬಲ್ಲವು.

–ದಲೈಲಾಮಾ

ಕಲುಷಿತ ನೀರಿನಿಂದ ಸಾವು– ನೋವು ನಿರ್ಲಕ್ಷ್ಯಕ್ಕೆ ತಕ್ಕ ಶಾಸ್ತಿಯಾಗಲಿ

ರಾಯಚೂರಿನಲ್ಲಿ ಕಲುಷಿತ ನೀರು ಸೇವನೆಯಿಂದ ವಾಂತಿ-ಭೇದಿ ಕಾಣಿಸಿಕೊಂಡು ಐವರು ಮಂದಿ ಮೃತಪಟ್ಟಿದ್ದಾರೆ. ಮೇ 29ರಿಂದ ಈಚೆಗೆ ಕಂಡುಬಂದಿರುವ ಈ ವಿದ್ಯಮಾನದಿಂದ ಈವರೆಗೆ 230ಕ್ಕೂ ಹೆಚ್ಚು ಜನ ಆಸ್ಪತ್ರೆಗೆ ದಾಖಲಾಗಿದ್ದಾರೆ. ಈ ಪೈಕಿ 25 ಮಂದಿ ಇನ್ನೂ ಚಿಕಿತ್ಸೆ ಪಡೆಯುತ್ತಿದ್ದಾರೆ. ಅಷ್ಟೇ ಅಲ್ಲದೆ ಹೊರರೋಗಿಗಳ ವಿಭಾಗದಲ್ಲಿ 800ಕ್ಕೂ ಹೆಚ್ಚು ಮಂದಿ ಔಷಧೋಪಚಾರ ಪಡೆದಿದ್ದಾರೆ. ಇಂತಹ ಆತಂಕಕಾರಿ ಘಟನೆಗೆ ನಗರಸಭೆ ಪೂರೈಸುತ್ತಿದ್ದ ಮಲಿನ ನೀರೇ ಕಾರಣ ಎಂಬುದು ಅತ್ಯಂತ ಆಘಾತಕಾರಿ. ಸ್ಥಳೀಯ ಸಂಸ್ಥೆಯೊಂದು ನಾಗರಿಕರ ಬಗ್ಗೆ ತೋರಬಹುದಾದ ಕೆಟ್ಟ ನಿರ್ಲಕ್ಷ್ಯ ಇದಾಗಿದೆ. ಕೆರೆಯಿಂದ ಕುಡಿಯುವ ನೀರು ಸಂಗ್ರಹಿಸಲು ನಗರಸಭೆಯಿಂದ ನಿರ್ಮಿಸಲಾದ ಓವರ್‌ಹೆಡ್ ಟ್ಯಾಂಕ್‌ಗಳನ್ನು 20 ವರ್ಷಗಳಿಂದಲೂ ಸ್ವಚ್ಛಗೊಳಿಸದೇ ಇದ್ದುದು ಸ್ಥಳೀಯ ಆಡಳಿತದ ಅಸಡ್ಡೆ ಮತ್ತು ಅಶಿಸ್ತನ್ನೇ ಪ್ರಶ್ನೆ ಮಾಡುವಂತಿದೆ. ಸುಮಾರು 3 ಲಕ್ಷ ಜನಸಂಖ್ಯೆ ಹೊಂದಿರುವ ನಗರದ ಉತ್ತರಕ್ಕೆ ಕೃಷ್ಣಾ ಮತ್ತು ದಕ್ಷಿಣಕ್ಕೆ ತುಂಗಭದ್ರಾ ನದಿಗಳಿವೆ. ಕೃಷ್ಣಾ ನದಿಯಿಂದ 21 ವಾರ್ಡ್‌ಗಳಿಗೆ ಮತ್ತು ತುಂಗಭದ್ರಾ ನದಿಯಿಂದ 14 ವಾರ್ಡ್‌ಗಳಿಗೆ ನೀರು ಸರಬರಾಜು ಮಾಡಲಾಗುತ್ತಿದೆ. ತುಂಗಭದ್ರಾ ನದಿ ನೀರನ್ನು ಕಾಲುವೆ ಮೂಲಕ ರಾಂಪೂರ ಕೆರೆಗೆ ತುಂಬಿಸಿ, ಅಲ್ಲಿಂದ ಎರಡು ಶುದ್ಧೀಕರಣ ಘಟಕಗಳ ಮೂಲಕ ಮನೆಮನೆಗೆ ಪೂರೈಸಲಾಗುತ್ತದೆ. ಆದರೆ ಈ ಶುದ್ಧೀಕರಣ ಘಟಕಗಳ ಪೈಕಿ ಹಳೆಯ ಘಟಕವನ್ನು 10 ವರ್ಷಗಳಿಂದಲೂ ಸ್ವಚ್ಛಗೊಳಿಸಿಲ್ಲ. ಹೀಗಾಗಿ ಅಲ್ಲಿ 8- 10 ಅಡಿಗಳಷ್ಟು ಹೂಳು ತುಂಬಿಕೊಂಡಿತ್ತು. ಶುದ್ಧೀಕರಣ ಘಟಕದಲ್ಲಿ ಈ ಕಾರಣಕ್ಕಾಗಿ ಇದ್ದ ಯಂತ್ರಗಳು ತುಕ್ಕು ಹಿಡಿದು ಕುಳಿತಿವೆ. ಈ ಯಂತ್ರಗಳು ಸ್ಥಗಿತಗೊಂಡು ಹಲವು ವರ್ಷಗಳಾದರೂ ದುರಸ್ತಿಗೆ ಯಾವುದೇ ಕ್ರಮ ಕೈಗೊಂಡಿಲ್ಲದೇ ಇದ್ದುದಕ್ಕೆ ಕಾರಣವಾದರೂ ಏನು? ನೀರು ಸರಬರಾಜು ಉಸ್ತುವಾರಿಗೆ ನೇಮಿಸಲಾಗಿದ್ದ ನಗರಸಭೆ ತಾಂತ್ರಿಕ ವಿಭಾಗದ ಎಇಇ, ವ್ಯವಸ್ಥೆ ಸುಧಾರಿಸುವುದಕ್ಕೆ ಮೇಲಧಿಕಾರಿಗಳಿಗೆ ಯಾವುದೇ ಬೇಡಿಕೆಯನ್ನೇ ಸಲ್ಲಿಸಿರಲಿಲ್ಲ ಎಂಬುದೂ ಇಲ್ಲಿ ಗಮನಾರ್ಹ.

ಸಾರ್ವಜನಿಕ ಆರೋಗ್ಯದೊಂದಿಗೆ ಚೆಲ್ಲಾಟ ಆಡಿದವರ ವಿರುದ್ಧ ತಕ್ಷಣ ಕ್ರಮ ಜರುಗಿಸಬೇಕು. ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕು

ನೀರಿನ ಮೂಲವಾದ ತುಂಗಭದ್ರಾ ನದಿ ಸಹ ಮಲಿನಗೊಂಡಿದ್ದು ಜೊಂಡು, ಹೂಳಿನಿಂದ ಆವೃತವಾಗಿದೆ. ಕೆಲವೆಡೆ ಅಗತ್ಯ ರಾಸಾಯನಿಕಗಳಿಂದ ಶುದ್ಧೀಕರಿಸದೆ, ಆ ನೀರನ್ನೇ ನೇರವಾಗಿ ಸರಬರಾಜು ಮಾಡಲಾಗುತ್ತಿತ್ತು ಎಂಬುದಂತೂ ನಿರ್ಲಕ್ಷ್ಯದ ಪರಮಾವಧಿ ಮಾತ್ರವಲ್ಲ ಅಮಾನವೀಯ ಸಹ. ಶುದ್ಧೀಕರಣ ಘಟಕದಲ್ಲಿ ಹೊರಗುತ್ತಿಗೆ 'ಡಿ' ದರ್ಜೆ ಸಿಬ್ಬಂದಿ ಇದ್ದು, ಶುದ್ಧೀಕರಿಸುವ ಬಗ್ಗೆ ಅವರಿಗೆ ತರಬೇತಿಯೇ ಇಲ್ಲ. ಕಣ್ಣಳತೆ ಆಧರಿಸಿ ನೀರಿಗೆ ಬ್ಲೀಚಿಂಗ್ ಪೌಡರ್ ಮಿಶ್ರಣ ಮಾಡುವುದನ್ನು ತನಿಖಾ ಸಮಿತಿ ಎದುರು ಸಿಬ್ಬಂದಿ ಒಪ್ಪಿಕೊಂಡಿದ್ದಾರೆ ಎಂಬ ಮಾತಿದೆ. ಕೆಲವೆಡೆ ನೀರು ಸರಬರಾಜು ಪೈಪ್‌ಗಳಲ್ಲಿ ಸೋರಿಕೆ ಸಹ ಕಂಡುಬಂದಿದೆ. ಕುಡಿಯುವ ನೀರಿಗೆ ಒಳಚರಂಡಿ ಮತ್ತು ತೆರೆದ ಚರಂಡಿ ನೀರು ಮಿಶ್ರಣವಾಗುತ್ತಿತ್ತು, ಆರು ಕಡೆ ದೊಡ್ಡ ಪ್ರಮಾಣದಲ್ಲಿ ಹೀಗೆ ನೀರು ಸೋರಿಕೆಯಾಗುತ್ತಿದ್ದುದನ್ನು ದುರಂತ ನಡೆದ ಬಳಿಕ ಪತ್ತೆಹಚ್ಚಲಾಗಿದೆ. ವಿಪರ್ಯಾಸವೆಂದರೆ, ಕುಡಿಯುವ ನೀರನ್ನು ಶುದ್ಧೀಕರಿಸಿ ಸಾರ್ವಜನಿಕರಿಗೆ ಸರಬರಾಜು ಮಾಡುವ ಸಲುವಾಗಿ 6 ಕಾರ್ಮಿಕರನ್ನು 3 ಪಾಳಿಯಲ್ಲಿ ಹಗಲು ಮತ್ತು ರಾತ್ರಿ ನಿಯೋಜಿಸಲಾಗಿತ್ತು! ಹಾಗಿದ್ದರೆ ಅವರೆಲ್ಲರೂ ಮಾಡುತ್ತಿದ್ದ ಕಾರ್ಯವಾದರೂ ಏನು? ಘಟನೆ ಬಳಿಕ ಎಚ್ಚೆತ್ತುಕೊಂಡಿರುವ ಜಿಲ್ಲಾಡಳಿತವು ಸರ್ಕಾರಕ್ಕೆ ಸಲ್ಲಿಸಿರುವ ವರದಿಯಲ್ಲಿ ಈ ವಿಷಯಗಳು ಬಹಿರಂಗಗೊಂಡಿವೆ. ನಗರಕ್ಕೆ ಸರಬರಾಜು ಆಗುತ್ತಿರುವ ಕುಡಿಯುವ ನೀರಿನ ಮಾದರಿಗಳನ್ನು ಆರೋಗ್ಯ ಇಲಾಖೆಯ ಬಳ್ಳಾರಿ ಘಟಕದಿಂದ ಪರಿಶೀಲನೆಗೆ ಒಳಪಡಿಸಲಾಗಿದೆ. 110 ಮಾದರಿಗಳ ಪೈಕಿ 24 ಮಾದರಿಗಳಲ್ಲಿನ ನೀರು ಕುಡಿಯಲು ಯೋಗ್ಯವೇ ಅಲ್ಲ ಎಂಬುದನ್ನು ಈ ಸಂಬಂಧದ ವರದಿ ಸ್ಪಷ್ಟಪಡಿಸಿದೆ. ಇದು, ಭಾರತೀಯ ಮಾನಕ ಬ್ಯೂರೊ ಅನುಸಾರ ಇರಬೇಕಾದ ನೀರಿನ ಗುಣಮಟ್ಟದ ಮಾನದಂಡಕ್ಕೆ ಅತ್ಯಂತ ದೂರದಲ್ಲಿದೆ.

ನಗರಾಡಳಿತದ ನಿರ್ಲಕ್ಷ್ಯ, ಅಸಡ್ಡೆ ಬಯಲಾಗಲು ಐದು ಅಮೂಲ್ಯ ಜೀವಗಳು ಬಲಿಯಾಗಿ ನೂರಾರು ಮಂದಿ ಅನಾರೋಗ್ಯದಿಂದ ನರಳಬೇಕಾಯಿತು ಎಂಬುದು ಅತ್ಯಂತ ನೋವಿನ ಸಂಗತಿ. ಸಾರ್ವಜನಿಕರಲ್ಲಿ ಅನಾರೋಗ್ಯ ಭುಗಿಲೆದ್ದ ಬಳಿಕವಷ್ಟೇ ಗಡಬಡಿಸಿ ಎದ್ದಿರುವ ನಗರಾಡಳಿತವು ರಾಂಪೂರ ನೀರು ಶುದ್ಧೀಕರಣ ಘಟಕದ ಹೂಳನ್ನು ಈಗಷ್ಟೇ ತೆರವುಗೊಳಿಸಿದೆ. ಕೆಲವು ಸಿಬ್ಬಂದಿಯ ವಿರುದ್ಧ ಕ್ರಮ ಜರುಗಿಸಿದೆ. ಮನೆಗಳಲ್ಲಿ ಆರೋಗ್ಯ ಸಮೀಕ್ಷೆ ನಡೆಸಿ, ನೀರು ಶುದ್ಧೀಕರಣ ರಾಸಾಯನಿಕವನ್ನು ಉಚಿತವಾಗಿ ವಿತರಿಸಿದೆ. ಇವೆಲ್ಲವೂ ದುರಂತದ ತೀವ್ರತೆಯನ್ನು ತಣ್ಣಗಾಗಿಸುವ ಸಲುವಾಗಿ ನಡೆಸುವ ಕಣ್ಣೊರೆಸುವ ತಂತ್ರಗಳಂತೆ ಜನರಿಗೆ ಕಾಣಿಸಿದರೆ ಅದರಲ್ಲಿ ಅಚ್ಚರಿಯೇನಿಲ್ಲ. ಅತ್ಯಂತ ಗಂಭೀರವಾದ ಪ್ರಕರಣ ಇದಾಗಿದ್ದು, ಸಾರ್ವಜನಿಕ ಆರೋಗ್ಯದೊಂದಿಗೆ ಚೆಲ್ಲಾಟ ಆಡಿದವರ ವಿರುದ್ಧ ಜರೂರಾಗಿ ಕಠಿಣ ಕ್ರಮ ಜರುಗಿಸಬೇಕು. ಪ್ರಕರಣವನ್ನು ತಾರ್ಕಿಕ ಅಂತ್ಯಕ್ಕೆ ಕೊಂಡೊಯ್ಯಬೇಕು.

ದಿನದ ಟ್ವೀಟ್

ರಾಹುಲ್ ದ್ರಾವಿಡ್ ಜವಾಬ್ದಾರಿ

ಭಾರತ ಕ್ರಿಕೆಟ್ ತಂಡದ ನಾಯಕ ರಿಷಭ್ ಪಂತ್ ಸತತ ನಾಲ್ಕು ಪಂದ್ಯಗಳಲ್ಲಿ ನಿರ್ಲಕ್ಷ್ಯದ ಆಟವಾಡಿ ವಿಕೆಟ್ ಒಪ್ಪಿಸಿದ್ದಾರೆ. ಇದು ಪದೇ ಪದೇ ಆಗುತ್ತಿದೆ. ಅವರು ತಮ್ಮ ಹೊಣೆಗಾರಿಕೆಯನ್ನು ಅರಿತುಕೊಂಡಿಲ್ಲವೆನಿಸುತ್ತದೆ. ಇಂತಹ ಸಂದರ್ಭದಲ್ಲಿ ಅವರಿಗೆ ಅರಿವು ಮೂಡಿಸುವುದು ಮುಖ್ಯ ಕೋಚ್ ರಾಹುಲ್ ದ್ರಾವಿಡ್ ಜವಾಬ್ದಾರಿ. ದ್ರಾವಿಡ್ ಅವರು ಪಂತ್ ಜೊತೆ ಮಾತನಾಡಬೇಕು.

ಮಕರಂದ್ ವೈಂಗಣಕರ್, ಕ್ರೀಡಾ ಪತ್ರಕರ್ತ, ಕ್ರಿಕೆಟ್ ಲೇಖಕ

ಕಿಡಿನುಡಿ

ಅರ್ಧ ಡಜನ್ ರೈಲುಗಳಿಗೆ ಬೆಂಕಿ ಹಚ್ಚಲಾಗಿದೆ, ನಿಲ್ದಾಣಗಳನ್ನು ಧ್ವಂಸ ಮಾಡಲಾಗಿದೆ, ಬೀದಿಗಳಲ್ಲಿ ಕಲ್ಲು ತೂರಾಟ, ಬೆಂಕಿ ಹಚ್ಚುವಿಕೆ, ಹಾನಿಕಾರಕ ಕೃತ್ಯಗಳು ನಡೆದಿವೆ- ಸೇನೆಯು ಆದಷ್ಟು ಬೇಗ ದೇಶದಾದ್ಯಂತ ಪಥಸಂಚಲನ ನಡೆಸಬೇಕಾಗಿದೆ. ಈ ಅರಾಜಕತಾವಾದಿಗಳನ್ನು ನಿಗ್ರಹಿಸಲು ಕೇಂದ್ರ ಮತ್ತು ರಾಜ್ಯಗಳು ಅಸಮರ್ಥವಾಗಿವೆ.

ಆನಂದ್ ರಂಗನಾಥನ್, ಲೇಖಕ

25 ವರ್ಷಗಳ ಹಿಂದೆ

ಬುಧವಾರ, 18-6-1997

- **ಕೇಂದ್ರದ ತೆರಿಗೆಯಲ್ಲಿ ಶೇ 29ರಷ್ಟು ರಾಜ್ಯಗಳಿಗೆ**

ನವದೆಹಲಿ, ಜೂನ್ 17 (ಯುಎನ್ಐ, ಪಿಟಿಐ)– ಕೇಂದ್ರ ಸರ್ಕಾರದ ತೆರಿಗೆಯಲ್ಲಿ ಶೇ 29ರಷ್ಟನ್ನು ರಾಜ್ಯ ಸರ್ಕಾರಗಳಿಗೆ ನೀಡಲು ಅಂತರರಾಜ್ಯ ಮಂಡಳಿ ಇಂದು ಒಪ್ಪಿಗೆ ನೀಡಿದೆ.

ರಾಜ್ಯ ಸರ್ಕಾರಗಳಿಗೆ ಹೆಚ್ಚಿನ ಆರ್ಥಿಕ ಅಧಿಕಾರ ನೀಡುವ ನಿಟ್ಟಿನಲ್ಲಿ ಮೊದಲ ಹೆಜ್ಜೆಯಾಗಿ ಈ ಕ್ರಮವನ್ನು ಕೈಗೊಳ್ಳಲಾಗಿದೆ.

- **ವಿದೇಶ ಪ್ರವಾಸ: ಶ್ವೇತಪತ್ರಕ್ಕೆ ಆಗ್ರಹ**

ಬೆಂಗಳೂರು, ಜೂನ್ 17– ಜನತಾದಳ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಮುಖ್ಯಮಂತ್ರಿ ಸೇರಿದಂತೆ ಅವರ ಮಂತ್ರಿಮಂಡಲದ ಸದಸ್ಯರ ವಿದೇಶ ಪ್ರವಾಸಗಳು ಹೆಚ್ಚಾಗಿ, ಇಲ್ಲಿಯವರೆಗೆ ರಾಜ್ಯ ಬೊಕ್ಕಸಕ್ಕೆ ಒಟ್ಟಾರೆ ಸುಮಾರು 12 ಕೋಟಿ ರೂಪಾಯಿಗಳಷ್ಟು ವೆಚ್ಚವಾಗಿರುವ ಹಿನ್ನೆಲೆಯಲ್ಲಿ ಪ್ರವಾಸದಿಂದ ರಾಜ್ಯಕ್ಕೆ ಆಗಿರುವ ಪ್ರಯೋಜನಗಳ ಬಗ್ಗೆ ರಾಜ್ಯ ಸರ್ಕಾರ ಶ್ವೇತಪತ್ರವನ್ನು ಹೊರಡಿಸಬೇಕು ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಆಗ್ರಹಪಡಿಸಿದರು.

'ವಿದೇಶಿ ಬಂಡವಾಳದ ಹೆಸರಿನಲ್ಲಿ ಸಿಕ್ಕಾಪಟ್ಟೆ ಪ್ರವಾಸ ಮಾಡುತ್ತಿದ್ದಾರೆ. ಇದರಿಂದ ಕರ್ನಾಟಕಕ್ಕೆ ಪ್ರಯೋಜನ ಆಗಿಲ್ಲ' ಎಂದು ಅವರು ಪತ್ರಿಕಾಗೋಷ್ಠಿಯಲ್ಲಿ ಆರೋಪಿಸಿದರು.

50 ವರ್ಷಗಳ ಹಿಂದೆ

ಭಾನುವಾರ, 18-6-1972

- **ಗ್ರಾಮಾಂತರ ಸೇವೆಗೆ ವೈದ್ಯರ ನಿಯೋಜನೆ**

ಬೆಂಗಳೂರು, ಜೂನ್ 17– ರಾಜ್ಯದ ಗ್ರಾಮಾಂತರ ಪ್ರದೇಶದಲ್ಲಿ ಸೇವೆ ಸಲ್ಲಿಸಲು ವೈದ್ಯರಿಗೆ ಆಸಕ್ತಿ ಇಲ್ಲ.

ಗ್ರಾಮಾಂತರ ಪ್ರದೇಶದಲ್ಲಿ ಸೇವೆ ಸಲ್ಲಿಸಲು ಸಾಧ್ಯವಾಗುವಂತೆ ಈಚೆಗೆ ಸರ್ಕಾರ ನಿರೂಪಿಸಿದ ಆಕರ್ಷಕ ಯೋಜನೆ ರೀತ್ಯ ಪ್ರಕಟಿಸಲಾದ ಇನ್ನೂರ ಐವತ್ತು ಹುದ್ದೆಗಳಿಗೆ ಕೇವಲ 10 ಮಂದಿ ವೈದ್ಯರು ಅರ್ಜಿ ಹಾಕಿರುವುದೇ ಇದಕ್ಕೆ ನಿದರ್ಶನ.

ರಾಜ್ಯದ ಆರೋಗ್ಯ ಇಲಾಖೆಯ ಡೈರೆಕ್ಟರ್ ಡಾ. ಪಿ.ಆರ್. ದೇಸಾಯಿ ಅವರು ಇಂದು ವಿಷಯವನ್ನು 'ಪ್ರಜಾವಾಣಿ'ಗೆ ತಿಳಿಸಿ, ವೈದ್ಯರ ಒಲವು ನಗರದತ್ತ ಇದೆಯೇ ಹೊರತು ಗ್ರಾಮೀಣ ಪ್ರದೇಶದ ಕಡೆಗಲ್ಲ ಎಂದು ಹೇಳಿದರು.

ವೈದ್ಯರು ಗ್ರಾಮಾಂತರ ಪ್ರದೇಶದಲ್ಲಿ ಸೇವೆ ಸಲ್ಲಿಸಲು ಸಾಧ್ಯವಾಗಲು ಹಾಗೂ ಕ್ರಮೇಣ ಅವರು ಹಳ್ಳಿಗಳಲ್ಲಿ ಸ್ವತಂತ್ರವಾಗಿ ವೃತ್ತಿ ಆರಂಭಿಸಲು ಸಾಧ್ಯವಾಗುವಂತೆ ರಾಜ್ಯ ಸರ್ಕಾರ ಕೇಂದ್ರದ ಸಹಕಾರದೊಂದಿಗೆ ಯೋಜನೆಯೊಂದನ್ನು ನಿರೂಪಿಸಿತ್ತು. ಮಾಸಿಕ 250 ರೂಪಾಯಿ ವೇತನದ ಈ ಹುದ್ದೆಗಳಿಗೆ ನೇಮಕಗೊಳ್ಳುವ ವೈದ್ಯರು ಖಾಸಗಿ ವೃತ್ತಿ ನಡೆಸಲು ಸರ್ಕಾರ ಅನುಮತಿ ನೀಡಿದೆ.

ಬೆಳವಣಿಗೆ– ಉದ್ಯೋಗದ ನಡುವಿನ ಕೊಂಡಿ ಕಳಚಿರುವುದಕ್ಕೆ ಕಾರಣ ದೇಶದ ಅಸಮಾನ ಪ್ರಗತಿಯಲ್ಲಿ ಇದೆ

ಆರ್ಥಿಕತೆ ಬೆಳೆಯುತ್ತಿದೆ, ಉದ್ಯೋಗ ಸಿಗುತ್ತಿದೆಯೇ?

ವಿಶ್ಲೇಷಣೆ

ಎಮಿಲಿ ಶ್ಮಾಲ್, ಸಮೀರ್ ಯಾಸಿರ್

ಅಂಕಿ–ಅಂಶಗಳಲ್ಲಿ ದೇಶದ ಅರ್ಥ ವ್ಯವಸ್ಥೆಯು ಬಹಳ ಯಶಸ್ವಿ ವರ್ಷವನ್ನು ಪೂರೈಸಿದೆ. ರಫ್ತು ಪ್ರಮಾಣವು ದಾಖಲೆಯ ಮಟ್ಟದಲ್ಲಿದೆ. ಷೇರುಪೇಟೆಯಲ್ಲಿ ನೋಂದಾಯಿತ ಆಗಿರುವ ಕಂಪನಿಗಳ ಲಾಭವು ದುಪ್ಪಟ್ಟಾಗಿದೆ. ದೇಶದ ಚೈತನ್ಯಶಾಲಿ ಮಧ್ಯಮ ವರ್ಗವು ಸಿನಿಮಾ ವೀಕ್ಷಿಸಲು, ಕಾರು ಖರೀದಿಸಲು, ನಿವೇಶನ ಅಥವಾ ಫ್ಲ್ಯಾಟ್ ಕೊಳ್ಳಲು, ರಜಾ ದಿನಗಳನ್ನು ಕಳೆಯಲು ಹೆಚ್ಚು ಹೆಚ್ಚು ಹಣ ಖರ್ಚು ಮಾಡುತ್ತಿದೆ.

ಪ್ರಮುಖ ಅರ್ಥ ವ್ಯವಸ್ಥೆಗಳ ಪೈಕಿ ಅತ್ಯಂತ ವೇಗದ ಬೆಳವಣಿಗೆಯನ್ನು ಭಾರತ ಕಾಣಲಿದೆ ಎಂದು ಅಂದಾಜು ಮಾಡಲಾಗಿದೆ. ಅಂಕಿ–ಅಂಶಗಳು ಬಹಳ ಚೆನ್ನಾಗಿದ್ದರೂ, ಇವು ದೇಶದ ಕೋಟ್ಯಂತರ ಜನರ ವಾಸ್ತವವನ್ನು ಪ್ರತಿಫಲಿಸುತ್ತಿಲ್ಲ. ಆರ್ಥಿಕ ಬೆಳವಣಿಗೆಯು ಸುಶಿಕ್ಷಿತ ಯುವಕರಿಗೆ ಅಗತ್ಯವಿರುವ ಉದ್ಯೋಗಗಳಾಗಿ ಪರಿವರ್ತನೆ ಕಾಣುತ್ತಿಲ್ಲ. ದೇಶದ ಬಹುದೊಡ್ಡ ವರ್ಗವು ಅಸಂಘಟಿತ ವಲಯದಲ್ಲಿ ಜೀವನೋಪಾಯ ಕಂಡುಕೊಂಡಿದೆ. ಈ ವರ್ಗವು ಈಚಿನ ತಿಂಗಳುಗಳಲ್ಲಿ ಹೆಚ್ಚಿನ ಹಣದುಬ್ಬರ, ಅದರಲ್ಲೂ ಮುಖ್ಯವಾಗಿ ಆಹಾರ ವಸ್ತುಗಳ ಹಣದುಬ್ಬರದ ಬಿಸಿ ಅನುಭವಿಸುತ್ತಿದೆ.

ಬೆಳವಣಿಗೆ ಮತ್ತು ಉದ್ಯೋಗದ ನಡುವಿನ ಕೊಂಡಿ ಕಳಚಿರುವುದಕ್ಕೆ ಕಾರಣ ದೇಶದ ಅಸಮಾನ ಪ್ರಗತಿಯಲ್ಲಿ ಇದೆ. ಬೆಳವಣಿಗೆಯ ಪ್ರಯೋಜನವು ದೇಶದ ನಗರವಾಸಿ ಮಧ್ಯಮ ವರ್ಗಕ್ಕಿಂತ ಕೆಳಗಿನ ವರ್ಗಗಳತ್ತ ಹರಿದು ಬರುತ್ತಿಲ್ಲ. ಈ ಅಂತರವನ್ನು ಕೋವಿಡ್ ಸಾಂಕ್ರಾಮಿಕವು ಇನ್ನಷ್ಟು ಹೆಚ್ಚಿಸಿದೆ. ದೇಶದ ಕೋಟ್ಯಂತರ ಜನ ಬಡತನದ ಕೂಪಕ್ಕೆ ಬಿದ್ದಿದ್ದಾರೆ. ಆದರೆ, ಶತಕೋಟ್ಯಧೀಶರ ಸಂಖ್ಯೆ ಹೆಚ್ಚಾಗಿದೆ ಎಂದು ಆಕ್ಸ್‌ಫಾಮ್ ವರದಿಯು ಹೇಳಿದೆ.

ಹೇಗಾದರೂ ಮಾಡಿ ಬೆಳವಣಿಗೆ ಸಾಧಿಸಬೇಕು ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಹೊಂದಿರುವ ಮಹತ್ವಾಕಾಂಕ್ಷೆ ಕೂಡ ಸಂಪತ್ತು ಕೆಲವರಲ್ಲಿ ಮಾತ್ರ ಕ್ರೋಡೀಕೃತವಾಗಿರಲು ಕಾರಣ. ಮೋದಿ ಅವರು 2019ರಲ್ಲಿ ಮರುಆಯ್ಕೆ ಆದಾಗ, 2024ರೊಳಗೆ ದೇಶದ ಅರ್ಥ ವ್ಯವಸ್ಥೆಯ ಗಾತ್ರವನ್ನು ದುಪ್ಪಟ್ಟು ಮಾಡುವುದಾಗಿ ಭರವಸೆ ನೀಡಿದ್ದರು. ಮಾರ್ಚ್‌ಗೆ ಕೊನೆಗೊಂಡ ಆರ್ಥಿಕ ವರ್ಷದಲ್ಲಿ ದೇಶದ ಅರ್ಥ ವ್ಯವಸ್ಥೆಯು ಶೇಕಡ 8.7ರಷ್ಟು ಬೆಳವಣಿಗೆ ಸಾಧಿಸಿದೆ ಎಂದು ಕೇಂದ್ರ ಸರ್ಕಾರ ಈಚೆಗೆ ತಿಳಿಸಿದೆ. ಆದರೆ ದೇಶಿ ಹೂಡಿಕೆ ಮಂದಗತಿಯಲ್ಲಿದೆ, ಸರ್ಕಾರದ ಕಡೆಯಿಂದ ಆಗುವ ನೇಮಕಾತಿಗಳು ನಿಧಾನಗತಿಗೆ ತಿರುಗಿವೆ. ಹೀಗಾಗಿ, ನಿರುದ್ಯೋಗವನ್ನು ನಿಭಾಯಿಸಲು ದೇಶವು ಇಂಧನ, ಆಹಾರ ಮತ್ತು ವಸತಿಗೆ ಸಬ್ಸಿಡಿ ನೀಡುತ್ತಿದೆ. ದೇಶದ 130 ಕೋಟಿಗೂ ಹೆಚ್ಚಿನ ಜನಸಂಖ್ಯೆಯಲ್ಲಿ ಮೂರನೆಯ ಎರಡರಷ್ಟು ಜನರಿಗೆ ಉಚಿತ ಆಹಾರಧಾನ್ಯ ತಲುಪುತ್ತಿದೆ.

ಈ ಕ್ರಮಗಳಿಂದಾಗಿ ದೇಶದಲ್ಲಿನ ಅಸಮಾನತೆಯು ದಶಕಗಳ ಕನಿಷ್ಠ ಮಟ್ಟ ತಲುಪಿದೆ ಎಂದು ಕೆಲವು ಲೆಕ್ಕಾಚಾರಗಳು ಹೇಳುತ್ತಿವೆ. ಆದರೆ, ಉದ್ಯೋಗ ಸೃಷ್ಟಿ ಅಗತ್ಯ ಪ್ರಮಾಣದಲ್ಲಿ ಆಗುತ್ತಿಲ್ಲದಿರುವುದನ್ನು ಮರೆಮಾಚಲು ಸಬ್ಸಿಡಿಗಳನ್ನು ಶಾಶ್ವತವಾಗಿ ಬಳಸಿಕೊಳ್ಳಲು ಆಗುವುದಿಲ್ಲ ಎಂದು ಸರ್ಕಾರದ ಟೀಕಾಕಾರರು ಹೇಳುತ್ತಿದ್ದಾರೆ. ಕಾಲೇಜಿನಿಂದ ಪದವಿ ಪಡೆದು ಹೊರಬರುವ, ಕೃಷಿ ಜಮೀನಿನಿಂದ ಬರುವ ಲಕ್ಷಾಂತರ ಜನ ಕೃಷಿಯೇತರ ಉದ್ಯೋಗವನ್ನು ಮುಂದಿನ ವರ್ಷಗಳಲ್ಲಿ ಅರಸಲಿದ್ದಾರೆ ಎಂಬ ಕಾರಣಕ್ಕೆ ಟೀಕಾಕಾರರ ಮಾತುಗಳು ಸತ್ಯ ಅನಿಸುತ್ತವೆ.

'ಬೆಳವಣಿಗೆ ಪ್ರಮಾಣಕ್ಕೆ ಅನುಗುಣವಾಗಿ ಉದ್ಯೋಗ ಸೃಷ್ಟಿ ಆಗದಿರುವುದು ಭಾರತದ ಬೆಳವಣಿಗೆಯ ಕಥನದಲ್ಲಿ ಹಿಂದಿನಿಂದಲೂ ಕಾಣುವಂಥದ್ದು' ಎಂದು ಸೆಂಟರ್ ಫಾರ್ ಮಾನಿಟರಿಂಗ್ ಇಂಡಿಯನ್ ಎಕಾನಮಿ ಸಂಸ್ಥೆಯ ಮುಖ್ಯ ಕಾರ್ಯನಿರ್ವಾಹಕ ಮಹೇಶ್ ವ್ಯಾಸ್ ಹೇಳುತ್ತಾರೆ. ಹರಿಯಾಣದ ಸ್ವೀಟಿ ಸಿನ್ಹಾ ಅವರು ಖಾಸಗಿ ಶಾಲೆಯೊಂದರಲ್ಲಿ ಶಿಕ್ಷಕಿಯಾಗಿದ್ದರು. ಆದರೆ ಕೊರೊನಾ ವೈರಾಣುವಿನ ಕಾರಣದಿಂದಾಗಿ ದೇಶದ ಅರ್ಥ ವ್ಯವಸ್ಥೆಯು 2020–21ರಲ್ಲಿ ಕುಸಿತ ದಾಖಲಿಸಿತು. ವಿದ್ಯಾರ್ಥಿಗಳು ಶಾಲೆ ತೊರೆದರು, ಸ್ವೀಟಿ ಅವರು ಕೆಲಸ ಕಳೆದುಕೊಂಡರು. ಸ್ವೀಟಿ ಈಗ ಮತ್ತೆ ಕೆಲಸ ಅರಸುತ್ತಿದ್ದಾರೆ. ವೇತನ ಕಡಿಮೆ ಎಂದು ಕೆಲವು ಅವಕಾಶ ಕೈಬಿಟ್ಟಿದ್ದಾರೆ. 'ನನಗೆ ಕೆಲಸವೇ ಸಿಗದಿದ್ದರೆ ಹೇಗೆ ಎಂದು ಕೆಲವೊಮ್ಮೆ ಭಯವಾಗುತ್ತದೆ. ನಿರುದ್ಯೋಗದ ಕಾರಣದಿಂದಾಗಿ ನನ್ನ ಸ್ನೇಹಿತರೂ ಕಷ್ಟ ಅನುಭವಿಸುತ್ತಿದ್ದಾರೆ' ಎಂದು ಅವರು ಹೇಳುತ್ತಾರೆ.

ಆದರೆ, ಭಾರತದ ರಾಜಕಾರಣಿಗಳು ನಿರುದ್ಯೋಗಕ್ಕಿಂತಲೂ ಹೆಚ್ಚಿನ ಗಮನವನ್ನು ಹಣದುಬ್ಬರದ ಕಡೆ ನೀಡಿದ್ದಾರೆ ಎಂದು ವ್ಯಾಸ್ ಹೇಳುತ್ತಾರೆ. ಹಣದುಬ್ಬರ ನಿಯಂತ್ರಿಸಲು ಆರ್‌ಬಿಐ ಹಾಗೂ ಕೇಂದ್ರ ಹಣಕಾಸು ಸಚಿವಾಲಯ ಪ್ರಯತ್ನಿಸಿವೆ. ಗೋಧಿ, ಸಕ್ಕರೆ ರಫ್ತಿಗೆ ನಿರ್ಬಂಧ ಹೇರಿದ್ದಾರೆ, ಬಡ್ಡಿ ದರ ಹೆಚ್ಚಿಸಿದ್ದಾರೆ, ಇಂಧನದ ಮೇಲಿನ ಸುಂಕ ತಗ್ಗಿಸಿದ್ದಾರೆ.

ಬ್ಯಾಂಕ್ ಆಫ್ ಇಂಗ್ಲೆಂಡ್, ಅಮೆರಿಕದ ಫೆಡರಲ್ ರಿಸರ್ವ್ ತಮ್ಮ ದೇಶಗಳು ಬೆಲೆ ಏರಿಕೆಯ ಪರಿಣಾಮವಾಗಿ ಕಡಿಮೆ ಪ್ರಮಾಣದ ಬೆಳವಣಿಗೆ ದರವನ್ನು ಒಪ್ಪಿಕೊಳ್ಳಬೇಕು ಎಂದು ಹೇಳಿವೆ. ಆದರೆ, ಭಾರತೀಯ ರಿಸರ್ವ್ ಬ್ಯಾಂಕ್ ಈ ರೀತಿ ಹೇಳುತ್ತಿಲ್ಲ ಎಂದು ಆಕ್ಸ್‌ಫರ್ಡ್ ಎಕನಾಮಿಕ್ಸ್ ಸಂಸ್ಥೆಯಲ್ಲಿ ವಿಶ್ಲೇಷಕಿಯಾಗಿರುವ ಪ್ರಿಯಾಂಕಾ ಕಿಶೋರ್ ಹೇಳುತ್ತಾರೆ. 'ಭಾರತಕ್ಕೆ ಬೆಳವಣಿಗೆ ದರ ಮುಖ್ಯ. ಅದರ ಹಿಂದೆ ರಾಜಕೀಯ ಉದ್ದೇಶ ಇದೆ' ಎಂದು ಅವರು ವಿವರಿಸುತ್ತಾರೆ.

ಉಕ್ರೇನ್‌ನ ಬಂದರುಗಳ ಮೇಲೆ ರಷ್ಯಾ ದಿಗ್ಬಂಧನ ಹೇರಿದ ನಂತರದಲ್ಲಿ ಜಾಗತಿಕ ಮಟ್ಟದಲ್ಲಿ ಧಾನ್ಯಗಳ ಕೊರತೆಯಾಯಿತು. ಏಪ್ರಿಲ್‌ನಲ್ಲಿ ಮೋದಿ ಅವರು, ಜಗತ್ತಿಗೆ ಆಹಾರ ನೀಡಲು ಭಾರತದ ರೈತರು ನೆರವಾಗಬಹುದು ಎಂದು ಹೇಳಿದ್ದರು. ಆದರೆ, ಜಾಗತಿಕ ಮಟ್ಟದಲ್ಲಿ ಗೋಧಿಯ ಕೊರತೆಯು ಬೆಲೆ ಏರಿಕೆಗೆ ಕಾರಣವಾದಾಗ, ದೇಶಿ ಮಾರುಕಟ್ಟೆಯಲ್ಲಿ ಬೆಲೆಯನ್ನು ನಿಯಂತ್ರಣದಲ್ಲಿರಿಸಲು ಕೇಂದ್ರ ಸರ್ಕಾರವು ಗೋಧಿ ರಫ್ತು ನಿಷೇಧಿಸಿತು.

ಬೃಹತ್ ಪ್ರಮಾಣದ ನಿರುದ್ಯೋಗ ಸಮಸ್ಯೆಯನ್ನು ಪರಿಹರಿಸುವುದಕ್ಕಿಂತಲೂ ಇಂತಹ ತಾತ್ಕಾಲಿಕ ಕ್ರಮಗಳು ಹೆಚ್ಚು ಸುಲಭದವು. 'ಗೋದಾಮಿನಲ್ಲಿ ಗೋಧಿ ಇರುತ್ತದೆ. ಅದನ್ನು ಮನೆ ಬಾಗಿಲಿಗೆ ತಲುಪಿಸಿ ತಕ್ಷಣದ ಸಮಾಧಾನ ಹೊಂದಬಹುದು. ಆದರೆ, ಉದ್ಯೋಗದ ವಿಚಾರವಾಗಿ ಕೆಲವು ಕ್ರಮಗಳನ್ನು ಕೈಗೊಳ್ಳುವುದು ದೀರ್ಘಾವಧಿಯವು, ಅವುಗಳ ಪರಿಣಾಮ ಅನುಭವಕ್ಕೆ ಸಿಗುವುದೂ ಇಲ್ಲ' ಎಂದು ವ್ಯಾಸ್ ಹೇಳಿದರು. ಇನ್ನೂ ಅಭಿವೃದ್ಧಿ ಹೊಂದಿಲ್ಲದ ತಯಾರಿಕಾ ವಲಯವನ್ನು ಗಟ್ಟಿಗೊಳಿಸಲು ಕ್ರಮ ಕೈಗೊಳ್ಳಬಹುದು ಎಂದು ವಿಶ್ಲೇಷಕರು ಹೇಳುತ್ತಾರೆ. ವಾಣಿಜ್ಯೋದ್ಯಮ ನಡೆಸುವುದನ್ನು ಕಷ್ಟವಾಗಿಸುವ ನಿಯಮಗಳನ್ನು ಸಡಿಲಗೊಳಿಸುವ ಕೆಲಸವನ್ನೂ ಮಾಡಬೇಕು ಎಂದು ಅವರು ಹೇಳುತ್ತಾರೆ.

ರಫ್ತು ಭಾರತದ ಅರ್ಥ ವ್ಯವಸ್ಥೆಯ ಪಾಲಿಗೆ ಹಿಂದಿನಿಂದಲೂ ಶಕ್ತಿ ಇದ್ದಂತೆ. ಈಗ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಕುಸಿದಿದೆ. ಇದು ಸಾಮಾನ್ಯವಾಗಿ ರಫ್ತು ಹೆಚ್ಚಿಸಲು ನೆರವಾಗುತ್ತದೆ. ಆದರೆ, ಅಮೆರಿಕದಲ್ಲಿನ ಹಣದುಬ್ಬರ ಮತ್ತು ಯುರೋಪಿನಲ್ಲಿನ ಯುದ್ಧದ ಸಂದರ್ಭವು ಭಾರತದ ಬಟ್ಟೆಯ ರಫ್ತಿನ ಮೇಲೆ ದುಷ್ಪರಿಣಾಮ ಬೀರಲು ಆರಂಭಿಸಿವೆ ಎಂದು ತಮಿಳುನಾಡಿನ ವ್ಯಾಪಾರಿಗಳ ಸಂಘವೊಂದರ ಅಧ್ಯಕ್ಷ ರಾಜಾ ಎಂ. ಷಣ್ಮುಗಂ ಹೇಳುತ್ತಾರೆ. 'ಅಗತ್ಯ ವಸ್ತುಗಳ ಬೆಲೆ ಏರಿಕೆ ಆಗಿದೆ. ನಾವು ಮೊದಲು ಬಹಳ ಸಣ್ಣ ಪ್ರಮಾಣದ ಲಾಭ ಇಟ್ಟುಕೊಳ್ಳುತ್ತಿದ್ದೆವು. ಈಗ ನಷ್ಟ ಅನುಭವಿಸುತ್ತಿದ್ದೇವೆ. ಹೀಗಾಗಿ, ರಫ್ತು ಮಾಡುವವರಿಗೆ ಸಾಮಾನ್ಯವಾಗಿ ಖುಷಿ ಕೊಡುವ ಸಂದರ್ಭವು ಈಗ ಖುಷಿ ಕೊಡುತ್ತಿಲ್ಲ' ಎಂದು ಅವರು ಪರಿಸ್ಥಿತಿ ತೆರೆದಿಡುತ್ತಾರೆ.

ಭಾರತದ ಶ್ರಮಿಕ ವರ್ಗ ಹಾಗೂ ನಿರುದ್ಯೋಗಿಗಳ ಸಂಕಷ್ಟವು ಆರ್ಥಿಕ ಬೆಳವಣಿಗೆಗೆ ತೊಡಕಾಗಿ ಪರಿಣಮಿಸಬಹುದು ಎಂದು ಅರ್ಥಶಾಸ್ತ್ರಜ್ಞರು ಎಚ್ಚರಿಸಿದ್ದಾರೆ. ಸಾಂಕ್ರಾಮಿಕಕ್ಕೂ ಹಿಂದಿನ ಸ್ಥಿತಿಗೆ ಹೋಲಿಸಿದರೆ ಈಗಿನ ಆದಾಯ ಅರ್ಧದಷ್ಟು ಮಾತ್ರವಿದೆ ಎಂದು ತುಮಕೂರಿನ ಆಟೊ ಚಾಲಕ ಜಿಯಾ ಉಲ್ಲಾ ಹೇಳುತ್ತಾರೆ. ಅವರ ಮೂವರು ಮಕ್ಕಳು ಮೊದಲು ಶಾಲೆಗೆ ಹೋಗುತ್ತಿದ್ದರು. ಇಬ್ಬರನ್ನು ಶಾಲೆಯಿಂದ ಬಿಡಿಸಲಾಗಿದೆ. ಅವರು ಕೆಲಸ ಅರಸುತ್ತಾರೆ, ಒಬ್ಬಳು ಮಾತ್ರ ಶಾಲೆಗೆ ಹೋಗುತ್ತಾಳೆ.

ದಿ ನ್ಯೂಯಾರ್ಕ್ ಟೈಮ್ಸ್

ಚುರುಮುರಿ

ಇ.ಡಿ. ಲೇಡಿ!

• ಬಿ.ಎನ್.ಮಲ್ಲೇಶ್

'ಲೇ ತೆಪರ, ಈ ಇ.ಡಿ. ಅಂದ್ರೆ ಏನ್ಲೆ?'

'ಅದಾ... ಅರ್ಥ ಅದ್ರಾಗೇ ಐತಲ್ಲ, ಇ.ಡಿ. ಅಂದ್ರೆ ಹಿಡ್ಕಳಾದು ಅಂತ...'

'ಅಲ್ಲ ಪೇಪರ್‌ನಾಗೆ ಅದೇನೋ ಜಾರಿ ಗೀರಿ ಅಂತ ಇತ್ತಪ, ಅದ್ಕೆ ಕೇಳಿದೆ'.

'ಅದೇ ಕಣಲೆ, ಸೆಂಟ್ರಲ್‌ನೋರು ಯಾರನ್ನ ಹಿಡ್ಕಳಿ ಅಂತ ಆದೇಶ ಜಾರಿ ಮಾಡ್ತಾರೋ ಅವರನ್ನ ಬಿಗಿಯಾಗಿ ಹಿಡ್ಕಳೋದು'.

'ಓ... ಹಂಗಾ? ಅವ್ರು ನಮ್ ಪೊಲೀಸ್ರಿಗಿಂತ ಬಿಗಿನಾ?'

'ಬಿಗಿನಾ? ಅವ್ರು ಒಂದ್ಸಲ ಹಿಡ್ಕಂಡ್ರೆ ಮುಗೀತು, ಪತ್ರಗುಟ್ಟಿಸಿಬಿಡ್ತಾರೆ'.

'ಹೌದಾ? ಅಂದ್ರೆ ಬೆಂಡೆತ್ತಿ ಬಾಯಿ ಬಿಡಿಸ್ತಾರಾ? ಏರೋಪ್ಲೇನ್ ಹತ್ತಿಸ್ತಾರಾ?'

'ಅದೆಲ್ಲ ಇಲ್ಲ, ಆದ್ರೆ ಪ್ರಶ್ನೆ ಮೇಲೆ ಪ್ರಶ್ನೆ ಕೇಳಿ ಚಪಾಟೆಬ್ಬಿಸಿಬಿಡ್ತಾರೆ... ಮೆಂಟ್ಲು ಮಾಡಿಬಿಡ್ತಾರೆ. ಒಂದ್ಸಲ ಸಿಗಾಕ್ಕಂಡ್ರೆ ಲೈಫ್ ಮುಗೀತು ಅಂತ ಅರ್ಥ. ನೀನು ದುಡಿದಿದ್ದು, ಹೊಡೆದಿದ್ದು ಎಲ್ಲ ಕಿತ್ಕಂಡು ಬರ್ಬಾದ್ ಮಾಡಿ ಜೈಲಿಗೆ ಹಾಕಿಬಿಡ್ತಾರೆ...'

'ಅಲೆ ಇವ್ನ, ಅಷ್ಟೆಲ್ಲ ಪವರ್ ಐತಾ ಅವರಿಗೆ?'

'ಹ್ಞೂಂ ಮಾರಾಯ, ಯಾರಿಗೆ ಸಿಕ್ರೂ ಅವರ ಕೈಯಾಗೆ ಮಾತ್ರ ಸಿಗಾಕ್ಕಾಬಾರ್ದು'.

'ಅಲ್ಲ ನಿಂಗೆ ಇವೆಲ್ಲ ಹೆಂಗ್ ಗೊತ್ತಾಗ್ತವಲೆ?'

'ಹೆಂಗೆ ಅಂದ್ರೆ? ನಾನು ಅಂಥೋರ ಕೈಗೆ ಸಿಗಾಕ್ಕಂಡು ಇವತ್ತಿಗೆ ಇಪ್ಪತ್ತು ವರ್ಷಾತು, ಇನ್ನೂ ಬಿಡುಗಡೆ ಇಲ್ಲ...'

'ಅಂದ್ರೆ?'

'ಅಂದ್ರೇ ಮದುವೇಲಿ ಅರೆಸ್ಟಾಗಿ ಹೆಂಡ್ತಿ ಅನ್ನೋ ಇ.ಡಿ. ಲೇಡಿ ಕೈಯಲ್ಲಿ ಬೇಡಿ ಹಾಕಿಸ್ಕಂಡು ಇಪ್ಪತ್ತು ವರ್ಷಾತು ಅಂದೆ. ಆದ್ರೆ ಒಂದು ವ್ಯತ್ಯಾಸ...'

'ಏನು?'

'ಇ.ಡಿ.ಯೋರು ಮೊದ್ಲು ಪ್ರಶ್ನೆ ಕೇಳಿ ಆಮೇಲೆ ಜೈಲಿಗಾಕ್ತಾರೆ, ಆದ್ರೆ ಹೆಂಡ್ತೀರು ಮೊದ್ಲು ಸಂಸಾರ ಅನ್ನೋ ಜೈಲಿಗೆ ಹಾಕ್ಕಂಡು ಆಮೇಲೆ ಪ್ರಶ್ನೆ ಕೇಳೋಕೆ ಶುರು ಮಾಡ್ತಾರೆ...!'

ಸಂಗತ

ಭಾಷಾ ಕಲಿಕೆ: ಎತ್ತ ಸಾಗುತ್ತಿದ್ದೇವೆ?

ಕನ್ನಡ ತನ್ನ ತಾಯ್ನೆಲದಲ್ಲೇ ಬೇರುಮಟ್ಟದ ಕಲಿಸುವಿಕೆಯಲ್ಲಿ ರೋಗಗ್ರಸ್ತವಾಗುತ್ತಿರುವುದು ಕನ್ನಡ ಭಾಷೆಯ ದೌರ್ಭಾಗ್ಯವೇ?

• ಡಾ. ಶಾಂತಾ ನಾಗರಾಜ್

ಪಠ್ಯಪುಸ್ತಕ ಮರುಪರಿಷ್ಕರಣೆಗೆ ಸಂಬಂಧಿಸಿದಂತೆ ವಾದ ವಿವಾದಗಳು ನಡೆಯುತ್ತಿರುವ ಈ ಹೊತ್ತಿನಲ್ಲಿ, ಇದರ ಮತ್ತೊಂದು ಮಗ್ಗುಲನ್ನೂ ಗಮನಿಸಬೇಕಾದ ಅಗತ್ಯವಿದೆ. ಕೇಳುವುದು, ಗ್ರಹಿಸುವುದು, ನೆನಪಿಟ್ಟುಕೊಳ್ಳುವುದು ಮತ್ತು ಮರುಬಳಕೆ ಮಾಡುವುದು ವಿದ್ಯಾರ್ಥಿಯ ಧರ್ಮ. ಇಂದಿನ ಪರೀಕ್ಷಾ ಪದ್ಧತಿ ಮತ್ತು ಗಳಿಸುತ್ತಿರುವ ಹೊರೆಹೊರೆ ಅಂಕಗಳ ಆಧಾರದ ಮೇಲೆ ಅತ್ಯಂತ ಬುದ್ಧಿವಂತ ಪೀಳಿಗೆಗಳು ಸೃಷ್ಟಿಯಾಗುತ್ತಿರುವಂತೆ ತೋರುತ್ತಿದೆ.

ಮನಃಶಾಸ್ತ್ರದ ಅಧ್ಯಯನ ಸಹ 'ಪೀಳಿಗೆಯಿಂದ ಪೀಳಿಗೆಗೆ ಮೆದುಳು 'ನಿಶಿತಮತಿ' ಆಗುತ್ತಾ ಹೋಗುತ್ತದೆ' ಎನ್ನುತ್ತದೆ. ಆದರೆ 'ಭಾಷಾ ಕಲಿಕೆ' ಮಾತ್ರ ಸದ್ದಿಲ್ಲದೇ ಜಾರುತ್ತಿದೆ. ಭಾಷಾ ಕಲಿಕೆಗೆ ಸಂಬಂಧಿಸಿದ ಮೂರು ಪ್ರಸಂಗಗಳು ಇಲ್ಲಿ ಉಲ್ಲೇಖಾರ್ಹ:

1990ರ ಕಾಲ. ಆಗ ನಾನು ಮಹಿಳಾ ಪದವಿ ಕಾಲೇಜೊಂದರಲ್ಲಿ ಕನ್ನಡ ಉಪನ್ಯಾಸಕಿಯಾಗಿದ್ದೆ. ಐಚ್ಛಿಕ ಕನ್ನಡ ವಿಭಾಗದಲ್ಲಿ ವಿದ್ಯಾರ್ಥಿನಿಯರ ಸಂಖ್ಯೆ ಕಡಿಮೆ. 15- 20 ವಿದ್ಯಾರ್ಥಿಗಳಿದ್ದ ತರಗತಿಯಲ್ಲಿ ಒಬ್ಬರು ಬಾರದಿದ್ದರೂ ನಮಗೆ ತಿಳಿಯುತ್ತಿತ್ತು. ಮುಂದಿನ ತರಗತಿಯಲ್ಲಿ ಆ ವಿದ್ಯಾರ್ಥಿನಿಯನ್ನು ಕರೆದು, 'ನಿನ್ನೆ ನೀನು ಕ್ಲಾಸಿಗೆ ಬಂದಿರಲಿಲ್ಲ, ಚಿಂತೆಯಿಲ್ಲ, ನೀನೊಂದು ರಜೆ ಚೀಟಿ ಬರೆದುಕೊಡು. ನಿನಗೆ ಆಬ್ಸೆಂಟ್ ಮಾರ್ಕ್ ಹಾಕದೆ ಲೀವ್ ಎಂದು ರಿಜಿಸ್ಟರ್‌ನಲ್ಲಿ ನಮೂದಿಸುತ್ತೇನೆ. ಕನ್ನಡ ಅಥವಾ ಇಂಗ್ಲಿಷ್ ಯಾವುದು ಸರಾಗವೆನಿಸುತ್ತದೋ ಆ ಭಾಷೆಯಲ್ಲೇ ಬರೆದುಕೊಡು. ಇದೇನೂ ನಿಯಮವಲ್ಲ. ಆದರೆ ನನಗೆ ಶಿಸ್ತು ಬೇಕು' ಎನ್ನುತ್ತಿದ್ದೆ.

ಈ ಪ್ರಯೋಗವನ್ನು ಹಲವು ವಿದ್ಯಾರ್ಥಿನಿಯರ ಮೇಲೆ ನಡೆಸಿ, ಅವರ ರಜಾ ಚೀಟಿಗಳನ್ನು ಗಮನಿಸಿದಾಗ ಆಘಾತವಾಯಿತು. ಯಾರೊಬ್ಬರೂ ಇಂಗ್ಲಿಷಿನಲ್ಲಾಗಲೀ ಕನ್ನಡದಲ್ಲಾಗಲೀ ಒಂದೇ ಒಂದು ವಾಕ್ಯವನ್ನೂ ಸರಿಯಾಗಿ ಬರೆದಿರಲಿಲ್ಲ. ನಂತರ ಅವರಿಗೆ ವಾರಕ್ಕೊಮ್ಮೆ 30 ನಿಮಿಷ ಸಮಯ ಕೊಟ್ಟು, ಅವರಿಗಿಷ್ಟ ಬಂದ ವಿಷಯದ ಬಗ್ಗೆ ಪ್ರಬಂಧ ಬರವಣಿಗೆಯ ಪ್ರಯೋಗ ಮಾಡಲಾಯಿತು. ಅದರಿಂದ ಅವರಿಗೆ ಓದುವ ಹವ್ಯಾಸ ಬೆಳೆಯಿತು ಮತ್ತು ಹಲವರ ಭಾಷೆ ಸುಧಾರಿಸಿತು.

2000ದ ದಶಕದಲ್ಲಿ, ನನ್ನ ಗೆಳತಿ ಕನ್ನಡದ ಉಪನ್ಯಾಸಕಿಯೊಬ್ಬರು ಪದವಿ ತರಗತಿಯ ಪಠ್ಯಪುಸ್ತಕ ರಚನಾ ಸಮಿತಿಯಲ್ಲಿ ಸದಸ್ಯೆಯಾಗಿದ್ದರು. ಹೊಸ ಪಠ್ಯ ಆರಿಸುವಾಗ ರೂಢಿಯಂತೆ ಕನಕದಾಸರು ಮತ್ತು ಪುರಂದರದಾಸರ ಕೀರ್ತನೆಗಳನ್ನು ಆಯ್ದುಕೊಳ್ಳುವ ಬಗ್ಗೆ ಮಾತು ಪ್ರಾರಂಭವಾಯಿತು. ಇವರು 'ಬಹಳ ವರ್ಷಗಳಿಂದ ಈ ಇಬ್ಬರು ದಾಸಶ್ರೇಷ್ಠರ ಕೀರ್ತನೆಗಳನ್ನೇ ಆರಿಸಲಾಗುತ್ತಿದೆ. ಆದರೆ ಮಹಿಳೆಯರೂ ಸೇರಿದಂತೆ ಇನ್ನೂ ಅನೇಕ ಹರಿದಾಸರಿದ್ದಾರೆ. ಉದಾಹರಣೆಗೆ, ಅಂಬಾಬಾಯಿ ಎನ್ನುವ ಮಹಿಳೆ 'ಹಚ್ಚಡ ಒಗೆಯಬೇಕಮ್ಮ' ಎನ್ನುವ ಕೀರ್ತನೆಯಲ್ಲಿ, ದೇಹವನ್ನೇ ಬಟ್ಟೆಯನ್ನಾಗಿಸಿ ಮಹಿಳಾ ಸಂವೇದನೆಗಳನ್ನು ಮೂರ್ತಸ್ವರೂಪದಿಂದ ಅಮೂರ್ತದವರೆಗೆ ಬಹಳ ಚೆನ್ನಾಗಿ ವಿವರಿಸಿದ್ದಾರೆ' ಎಂದರಂತೆ. ತಕ್ಷಣ ಅಲ್ಲಿದ್ದ ಕನ್ನಡ ಉಪನ್ಯಾಸಕರೊಬ್ಬರು 'ಅಯ್ಯೋ ಈ ಮೂರ್ತ ಅಮೂರ್ತ ಎಲ್ಲಾ ಪಾಠ ಮಾಡಕ್ಕೆ ಯಾರಿಗೆ ಬೇಕು ಮೇಡಂ? ಸುಲಭವಾಗಿ ಇರೋದೊಂದು ಆಯ್ಕೆ ಮಾಡಾಣ' ಅಂದರಂತೆ! ಇದು ಪದವಿ ತರಗತಿಗೆ ಪಾಠ ಮಾಡುತ್ತಿದ್ದವರ ಹೇಳಿಕೆ! 2021ರಲ್ಲಿ ನಡೆದ ಘಟನೆಯೊಂದನ್ನು ಖಾಸಗಿ ಪಿಯು ಕಾಲೇಜಿನ ಪ್ರಾಂಶುಪಾಲರೊಬ್ಬರು ವಿವರಿಸಿದ್ದು ಹೀಗೆ: ಅವರ ಕಾಲೇಜಿನಲ್ಲಿ ನಿವೃತ್ತರಾದ ನಾಲ್ವರು ಉಪನ್ಯಾಸಕರ ಜಾಗಕ್ಕೆ ಹೊಸಬರನ್ನು ಆರಿಸುವ ಸಂದರ್ಭ. ನೂರಕ್ಕೂ ಹೆಚ್ಚು ಅರ್ಜಿಗಳು ಬಂದಿದ್ದವು. ಎಲ್ಲರಿಗೂ ಇ– ಮೇಲ್ ಮೂಲಕ 'ಇಂಥಾ ದಿನ ಲಿಖಿತ ಪರೀಕ್ಷೆಗೆ ಹಾಜರಾಗಬೇಕು' ಎಂದು ತಿಳಿಸಲಾಯಿತು. ಅರ್ಧಕ್ಕರ್ಧ ಜನ ಬರಲೇ ಇಲ್ಲ. ಬಂದವರಿಗೆ ಒಂದು ಗಂಟೆ ಅವಧಿಯಲ್ಲಿ ಅವರವರು ಪಡೆದ ಸ್ನಾತಕೋತ್ತರ ಪದವಿಯಲ್ಲಿ ಅಭ್ಯಾಸ ಮಾಡಿದ ವಿಷಯದ ಮಹತ್ವದ ಬಗ್ಗೆ ಅನಿಸಿಕೆ ಬರೆದುಕೊಡಲು ತಿಳಿಸಲಾಯಿತು. ಕೆಲವರು ಬರೆಯದೇ ಒಂದೆರಡು ನಿಮಿಷಗಳಲ್ಲಿ ಎದ್ದು



ಹೋದರು. ಉಳಿದ 15– 20 ಜನರು, ಎರಡು ಸಾಲು, ನಾಲ್ಕು ಸಾಲು, ಕಾಲು ಪುಟ ಮತ್ತು ಅರ್ಧ ಪುಟದ ಬರಹವನ್ನು ಕೊಟ್ಟು ಹೋದರು! ಇದು ಶಿಕ್ಷಕರ ಹುದ್ದೆಗೆ ಬರಲಿಚ್ಛಿಸಿದ್ದವರ ಮನಃಸ್ಥಿತಿ.

ಈ ಮೂರೂ ಪ್ರಸಂಗಗಳಲ್ಲಿನ ಏಕಮಾತ್ರ ದುರಂತವೆಂದರೆ, ಭಾಷೆ ಕಲಿಸುವ ಮತ್ತು ಬರೆಯುವ ಮಟ್ಟ ಹೇಗೆ ಕುಸಿಯುತ್ತಿದೆ ಎನ್ನುವುದು. ಕಲಿಸುವ ವ್ಯವಸ್ಥೆಯೇ ಕುಸಿಯುತ್ತಿರುವ ಈ ಕಾಲಘಟ್ಟದಲ್ಲಿ ಸಮಾಜ ಮತ್ತು ಸರ್ಕಾರದ ಗಮನ ಎತ್ತ ಸಾಗಬೇಕು ಎನ್ನುವುದನ್ನು ಯಾರು ಹೇಳಬಲ್ಲರು? ಒಂದು ಕಾಲದಲ್ಲಿ 'ಭಾಷೆಯೇ ಬದುಕಿನುಸಿರು' ಎಂದುಕೊಂಡು ಪ್ರಾಚೀನ ಕವಿಪುಂಗವರ ಸಾರಸತ್ವವನ್ನು ಬೆರಗುಗೊಳ್ಳುವಂತೆ ಪಾಠ ಮಾಡುತ್ತಿದ್ದ ಉಪನ್ಯಾಸಕರನ್ನು ಪಡೆದದ್ದು ನಮ್ಮ ಕಾಲದ ಪುಣ್ಯವಷ್ಟೇ. ಒಂದು ಕಡೆ ಅನಿವಾಸಿ ಭಾರತೀಯ ಕನ್ನಡಿಗರು ಮಾತೃಭಾಷೆಯನ್ನು ತಮ್ಮ ಮುಂದಿನ ಪೀಳಿಗೆಯಲ್ಲೂ ಉಳಿಸಲು ವಾರಾಂತ್ಯ ಕನ್ನಡ ಶಾಲೆಯನ್ನು ನಡೆಸುತ್ತಾ ಸಂಭ್ರಮಿಸುತ್ತಿದ್ದಾರೆ. ಮತ್ತೊಂದೆಡೆ, ವಿಶ್ವದ ಸಕಲೆಂಟು ಭಾಷೆಗಳಲ್ಲಿ, ಅತ್ಯಂತ ವೈಜ್ಞಾನಿಕವಾಗಿ ರೂಪುಗೊಂಡು ಮುನ್ನಡೆಯುತ್ತಿರುವ ಕೆಲವೇ ಭಾಷೆಗಳಲ್ಲಿ ಕನ್ನಡವೂ ಒಂದು ಎನ್ನುವ ಹೆಮ್ಮೆಯ ಸಂಗತಿಯನ್ನು ಪಾಶ್ಚಾತ್ಯ ಅಧ್ಯಯನ ತಿಳಿಸುತ್ತದೆ. ಇಲ್ಲಿ ಕನ್ನಡ ತನ್ನ ತಾಯ್ನೆಲದಲ್ಲೇ ಬೇರುಮಟ್ಟದ ಕಲಿಸುವಿಕೆಯಲ್ಲಿ ರೋಗಗ್ರಸ್ತವಾಗುತ್ತಿರುವುದು ಕನ್ನಡ ಭಾಷೆಯ ದೌರ್ಭಾಗ್ಯವೇ?

ವಾಚಕರ ವಾಣಿ

ಪ್ರಾಣಿಗಳಿಲ್ಲದ ಸರ್ಕಸ್...

ದಾವಣಗೆರೆಯಲ್ಲಿ ಆಯೋಜಿಸಿದ್ದ ಸರ್ಕಸ್ ಪ್ರದರ್ಶನ ನೋಡಲೆಂದು ಇತ್ತೀಚೆಗೆ ಕುಟುಂಬಸಮೇತ ಹೋಗಿದ್ದೆವು. ಅಲ್ಲಿ ನಡೆಸಿಕೊಡುತ್ತಿದ್ದ ಪ್ರತಿಯೊಬ್ಬರ ಪ್ರದರ್ಶನವೂ ಮೈ ಜುಂ ಎನಿಸುವಂತಿತ್ತು. ನಾನು ಕೊನೆಯದಾಗಿ ಸರ್ಕಸ್ ನೋಡಿದ್ದೇ ಪ್ರಾಥಮಿಕ ಶಾಲೆಯಲ್ಲಿದ್ದಾಗ. ಅಂದಿನ ಕಾಲದ ಸರ್ಕಸ್‌ಗೂ ಇಂದಿನ ಕಾಲಕ್ಕೂ ಅಜಗಜಾಂತರ ಇದೆ. ಸರ್ಕಸ್‌ನ ಪ್ರಮುಖ ಆಕರ್ಷಣೆಯೆಂದರೆ ಪ್ರಾಣಿಗಳು. ಪ್ರಾಣಿಗಳನ್ನು ನೋಡಲೆಂದೇ ಸರ್ಕಸ್ ನೋಡಲು ಹೆಚ್ಚು ಜನ ಮುಗಿಬೀಳುತ್ತಿದ್ದರು. ಅದರಲ್ಲೂ ಮಕ್ಕಳಿಗಂತೂ ಇನ್ನೂ ಅಚ್ಚುಮೆಚ್ಚು.

ಸರ್ಕಸ್ ಕಂಪನಿಗಳಲ್ಲಿ ಪ್ರಾಣಿಗಳ ಪ್ರದರ್ಶನವನ್ನು ಕೇಂದ್ರ ಸರ್ಕಾರ ನಿಷೇಧಿಸಿರುವುದರಿಂದ, ಇತ್ತೀಚಿನ ಸರ್ಕಸ್ ಪ್ರದರ್ಶನಗಳು ಮನುಷ್ಯರು ನಡೆಸಿಕೊಡುವ ಪ್ರದರ್ಶನಕ್ಕೆ ಮಾತ್ರ ಸೀಮಿತವಾಗಿವೆ. ಇದರಿಂದಾಗಿ ಸರ್ಕಸ್ ತುಂಬಾ ನೀರಸ ಎನಿಸಿತು. ಹಿಂದಿನ ಕಾಲದ ಸಂಗತಿಗಳನ್ನು ನೆನಪಿಸಿಕೊಂಡರೆ ನಮ್ಮ ಬಾಲ್ಯದ ದಿನಗಳು ನಿಜಕ್ಕೂ ಅವಿಸ್ಮರಣೀಯ. ಈಗಿನ ಮಕ್ಕಳ ಮೊಬೈಲ್, ಕಂಪ್ಯೂಟರ್‌ಗಳ ಮುಂದೆ, ನಮ್ಮ ಅಂದಿನ ಬಾಲ್ಯದ ದಿನಗಳಿಗೆ ಬೆಲೆ ಕಟ್ಟಲಾಗದು.

ಮುರುಗೇಶ ಡಿ., ದಾವಣಗೆರೆ

ಶೈಕ್ಷಣಿಕ ಪ್ರಯೋಗ ಸ್ವಾಗತಾರ್ಹ

ಪರಿಷ್ಕೃತ ಪಠ್ಯದ ಕುರಿತು ಸರ್ಕಾರವು ಸಾರ್ವಜನಿಕರಿಂದ ಆಕ್ಷೇಪ ಆಹ್ವಾನಿಸುವುದು ಜೇನುಗೂಡಿಗೆ ಕಲ್ಲೆಸೆದಂತೆ ಎಂದು ಹೇಳಿರುವ ಡಾ. ರಾಜಪ್ಪ ದಳವಾಯಿ ಅವರ ಲೇಖನ (ಪ್ರ.ವಾ., ಜೂನ್ 11) ಶೈಕ್ಷಣಿಕ ಪರಿಪೂರ್ಣತೆಯ ಒಳನೋಟವನ್ನು ಕಟ್ಟಿಕೊಡುವುದಿಲ್ಲ. ಬದಲಿಗೆ, ಜನರಿಗೆ ಸಿಗಬೇಕಾದ ಜ್ಞಾನ ವಿಸ್ತರಣೆಯನ್ನು ಕುಬ್ಜಗೊಳಿಸುತ್ತದೆ.

ಎಲ್ಲ ಬಗೆಯ ಭ್ರಷ್ಟಾಚಾರಕ್ಕೂ ಚುನಾವಣೆಯೇ ಮೂಲ ಎಂಬ ಕಾರಣಕ್ಕೆ ಚುನಾವಣಾ ಪ್ರಕ್ರಿಯೆಯನ್ನೇ ಸ್ಥಗಿತಗೊಳಿಸಿ, ಅಧಿಕಾರಿಗಳ ಕೈಗೆ ಆಡಳಿತ ನೀಡಿದರೆ ಪ್ರಜಾಪ್ರಭುತ್ವ ಉಳಿಯುತ್ತದೆಯೇ? ಹಾಗೆಯೇ ರಾಜ್ಯದಲ್ಲಿರುವ ಪ್ರತೀ ಜಾತಿಗೂ ತನ್ನದೇ ಅಸ್ಮಿತೆ ಕಂಡುಕೊಳ್ಳಬೇಕೆನ್ನುವ ಹಕ್ಕು ಇರುತ್ತದೆ. ಆದರೆ ಪಠ್ಯಪುಸ್ತಕದಲ್ಲಿನ ವಿಷಯಗಳು ಹೇಗಿರುತ್ತವೆ ಎಂದರೆ, ಹಿಂದುಳಿದ ಬಲಾಢ್ಯ ಗುಂಪಿನ ಚರಿತ್ರೆ ದೊಡ್ಡದಿರುತ್ತದೆ. ಶಕ್ತಿಯುತ ಸಾಧನೆ ಮಾಡಿದ, ವಿಶೇಷ ಹೆಗ್ಗಳಿಕೆಗೆ ಪಾತ್ರನಾದ ಮತ್ಯಾವುದೋ ಜಾತಿಯ ಪ್ರಮುಖ ನೇತಾರನದು ಸಾಸಿವೆ ಕಾಳಿನಷ್ಟಿರುತ್ತದೆ. ಇಂತಹ ತಾರತಮ್ಯ, ಅನ್ಯಾಯ ಸಾಮಾಜಿಕ ನ್ಯಾಯದ ಘೋಷಣೆ ಅಡಿಯಲ್ಲಿಯೇ ಕೆಲವೊಮ್ಮೆ ಜರುಗುತ್ತದೆ. ಈ ಹಿನ್ನೆಲೆಯಲ್ಲಿ ತಿಳಿವು ಮೂಡಿಸಲು ಸರ್ಕಾರ ಹೊಸ ಶೈಕ್ಷಣಿಕ ಪ್ರಯೋಗ ಮಾಡಿದರೆ ಅದನ್ನು ಸ್ವಾಗತಿಸಬೇಕು. ಬದಲಾಗಿ ವಿರೋಧಿಸಿದರೆ ಅದು ಅವರ ಚಿಂತನೆಯ ಮಿತಿ ಅಷ್ಟೇ.

ಆರ್.ವೆಂಕಟರಾಜು, ಬೆಂಗಳೂರು

ಬೇಕಾಗಿದೆ 'ಗ್ಯಾರಂಟಿ' ಪತ್ರ

ಕೇಂದ್ರ ಸರ್ಕಾರವು ಪ್ರಕಟಿಸಿರುವ 'ಅಗ್ನಿಪಥ' ಯೋಜನೆಯಿಂದ ಯುವಕರಿಗೆ ಪ್ರಯೋಜನ ಸಿಗಬಹುದು. ಆದರೆ 15-20 ವರ್ಷಗಳ ಸೇನಾ ಕರ್ತವ್ಯದ ಬಳಿಕ ಮರಳಿ ಬಂದಿರುವ ನಿವೃತ್ತ ಸೈನಿಕರು ರಾಜ್ಯ ಸರ್ಕಾರದಲ್ಲಿ ಅಥವಾ ಖಾಸಗಿ ಕಂಪನಿಗಳಲ್ಲಿ ಉದ್ಯೋಗ ಸಿಗದೆ ಅಲೆದಾಡುತ್ತಿರುವ ಬಹಳಷ್ಟು ನಿದರ್ಶನಗಳು ನಮ್ಮ ಮುಂದೆ ಇವೆ. ಪರಿಸ್ಥಿತಿ ಹೀಗಿರುವಾಗ, ಇನ್ನು ನಾಲ್ಕು ವರ್ಷ ಕರ್ತವ್ಯ ಮಾಡಿ ಬಂದವರಿಗೆ ಕೆಲಸ ಸಿಗುತ್ತದೆ ಎಂಬ ಖಾತರಿಯೇನು? ಖಾಸಗಿ ಕ್ಷೇತ್ರದಲ್ಲಿ ಉದ್ಯೋಗ ದೊರಕಿಸಿಕೊಡಲು ಕೇಂದ್ರ ಸರ್ಕಾರ 'ಗ್ಯಾರಂಟಿ' ಪತ್ರವನ್ನು ಲಿಖಿತ ರೂಪದಲ್ಲಿ ಬರೆದುಕೊಟ್ಟರೆ ಆಗ ಈ ಯೋಜನೆಯನ್ನು ಒಪ್ಪಬಹುದು.

ಇಂದಿರಾ ಶ್ರೀಧರ್, ಮಳಲಕೆರೆ

ಅನ್ಯಜಾತಿಯ ಕನ್ಯೆಗೆ ಸಮ್ಮತಿ: ಉತ್ತಮ ಬೆಳವಣಿಗೆ

ಮೊನ್ನೆ ಸಂಜೆ ನಮ್ಮ ಮನೆಯ ಹತ್ತಿರದ ಪಾರ್ಕಿನಲ್ಲಿ ಹವಾ ಸೇವನೆಗೆಂದು ಹೋಗಿದ್ದಾಗ, ನವವಿವಾಹಿತೆಯೊಬ್ಬರು ಮಾತಿಗೆ ಸಿಕ್ಕರು. ತಮ್ಮ ತವರು ಮನೆ ಹಾವೇರಿ ಎಂದು ಹೇಳಿದ ಆ ಮಹಿಳೆ, ತಮ್ಮದು ಅಂತರ್ಜಾತಿ ವಿವಾಹ ಎಂದರು. ಬಹುಶಃ ಅವರದು ಪ್ರೇಮವಿವಾಹ ಇರಬಹುದು ಎಂದು ಅರ್ಥೈಸಿಕೊಂಡ ನಾನು, ಅದನ್ನು ಅವರಲ್ಲಿ ಕೇಳಿದಾಗ, 'ಇಲ್ಲ ಮೇಡಂ, ನನ್ನ ಗಂಡನ ಮನೆಯವರು ಸುಮಾರು ಎರಡು ವರ್ಷಗಳಿಂದ ವಧುವಿನ ಅನ್ವೇಷಣೆಯಲ್ಲಿ ಇದ್ದರು. ತಮ್ಮ ಜಾತಿಯ ಹುಡುಗಿ ದೊರೆಯದೇ ಇದ್ದಾಗ ಅನ್ಯಜಾತಿಯ ಕನ್ಯೆಯನ್ನು ಮಗನಿಗೆ ತಂದುಕೊಳ್ಳಲು ನಿರ್ಧರಿಸಿದರಂತೆ. ಅದರಂತೆ ನಮ್ಮ ಮದುವೆ ನೆರವೇರಿತು' ಎಂದು ಹೇಳಿದಾಗ ಖುಷಿಯಾಯಿತು.

ದೇಶದಲ್ಲಿ ಗಂಡುಮಕ್ಕಳ ಅನುಪಾತವು ಹೆಣ್ಣುಮಕ್ಕಳ ಅನುಪಾತಕ್ಕಿಂತ ಹೆಚ್ಚಾಗಿರುವುದರಿಂದ ವಿವಾಹಕ್ಕೆ ಕನ್ಯೆಯರು ದೊರಕುವುದೇ ಕಷ್ಟವಾಗುತ್ತಿದೆ (ಸ್ವಜಾತಿ ಅನುಸಾರ). ಹಾಗಾಗಿ ತಮ್ಮ ಮಗನಿಗೆ ಅನ್ಯಜಾತಿಯ ಹುಡುಗಿಯಾದರೂ ಪರವಾಗಿಲ್ಲ ಎಂಬ ಧೋರಣೆ ಇತ್ತೀಚೆಗೆ ಪೋಷಕರಲ್ಲಿ ಬರುತ್ತಿದೆ. ಬೇರೂರಿರುವ ಜಾತಿ ವ್ಯವಸ್ಥೆಗೆ ಈ ಕಾರಣದಿಂದಲಾದರೂ ಸ್ವಲ್ಪಮಟ್ಟಿಗೆ ಕಡಿವಾಣ ಬೀಳಬಹುದೇನೊ!

ಟಿ.ಎಸ್.ಪ್ರತಿಭಾ, ಚಿತ್ರದುರ್ಗ

ಕಿಸಾನ್ ಯೋಜನೆ: ಅಲೆದಾಟ ತಪ್ಪಲಿ

ಪ್ರಧಾನ ಮಂತ್ರಿ ಕಿಸಾನ್ ಯೋಜನೆಯಲ್ಲಿ ಹೊಸದಾಗಿ ಸೇರ್ಪಡೆಯಾಗಬೇಕಾಗಿರುವ ರೈತರು ದಿನಾಲೂ ಸೈಬರ್ ಕೇಂದ್ರಗಳಿಗೆ ಅಲೆಯುವಂಥ ಪರಿಸ್ಥಿತಿ ಎದುರಾಗಿದೆ. ಯಾವತ್ತು ನೋಡಿದರೂ ಅಲ್ಲಿ ಸರ್ವರ್ ಸಮಸ್ಯೆಯಿಂದಾಗಿ ನೆಟ್‌ವರ್ಕ್ ಸಿಗುವುದಿಲ್ಲ. ಜನ ಬೆಳಗಿನಿಂದ ಸಂಜೆಯವರೆಗೂ ಕಾದು ಸುಸ್ತಾಗಿ ಮನೆಗೆ ಮರಳುವಂಥ ದುಃಸ್ಥಿತಿಯನ್ನು ಎಲ್ಲೆಡೆ ಕಾಣುತ್ತಿದ್ದೇವೆ. ಕೊನೆಯ ದಿನಾಂಕವನ್ನು ಈಗ ಜುಲೈ 31ರವರೆಗೆ ವಿಸ್ತರಿಸಲಾಗಿದೆ. ಆದರೆ ಈ ಸರ್ವರ್ ಸಮಸ್ಯೆಯಿಂದ ಇನ್ನೂ ಮುಕ್ತಿ ಸಿಕ್ಕಿಲ್ಲ. ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು ಜನರಿಗಾಗಿರುವ ತೊಂದರೆಯನ್ನು ನೀಗಿಸಬೇಕು.

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರ್, ಕೊಪ್ಪ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಸೇನೆಯಲ್ಲಿ ನಾಲ್ಕು ವರ್ಷಗಳ ಅಲ್ಪಾವಧಿ ಕರ್ತವ್ಯದ ಅಗ್ನಿಪಥ ಯೋಜನೆ ಕಾರ್ಯಸಾಧುವೇ?

ಗುತ್ತಿಗೆ ಕಾರ್ಮಿಕರಲ್ಲ, ಸೇನೆಗೆ ಯೋಧರು ಬೇಕು

'ಅಗ್ನಿಪಥ'ವು ಲೋಪಗಳೇ ಇರುವ ವ್ಯವಸ್ಥೆ. ಇದರ ಅನುಷ್ಠಾನದಿಂದ ಬೃಹತ್ತಾದ, ಮಾರ್ಪಡಿಸಲಾಗದ, ಖಚಿತ ಅನನುಕೂಲಗಳು ಉಂಟಾಗಲಿವೆ. ಯುದ್ಧಕ್ಕೆ ಸಂಬಂಧಿಸಿ ಕಾರ್ಯಾಚರಣಾ ದಕ್ಷತೆಯು ಚಿಂತೆಗೆ ಕಾರಣವಾಗುವ ಮಟ್ಟಿಗೆ ಇಳಿಕೆಯಾಗುತ್ತದೆ. ರಾಷ್ಟ್ರೀಯ ಭದ್ರತೆಯ ವಿಚಾರದಲ್ಲಿ ಭಾರಿ ರಾಜಿ ಮಾಡಿಕೊಂಡಂತೆ ಆಗುತ್ತದೆ. ಯೋಜನೆಯನ್ನು ಕೈಬಿಡಬೇಕು. ಹಣ ಉಳಿತಾಯವಾಗುತ್ತದೆ ಎಂಬ ಕಾರಣಕ್ಕೆ ದೇಶದ ಭದ್ರತೆಯನ್ನು ಕಡೆಗಣಿಸಬಹುದೇ?

• ಮೇಜರ್ ಜನರಲ್ (ನಿವೃತ್ತ) ಎಸ್.ಜಿ. ಒಂಬತ್ಕೆರೆ

ರಕ್ಷಣಾ ಪಡೆಗಳಲ್ಲಿ ನಾಲ್ಕು ವರ್ಷದ ಅಲ್ಪಾವಧಿ ಕರ್ತವ್ಯದ 'ಅಗ್ನಿಪಥ' ಎಂಬ ಯೋಜನೆಯನ್ನು ಕೇಂದ್ರ ಸರ್ಕಾರ ಪ್ರಕಟಿಸಿದೆ. ನೇಮಕಗೊಂಡವರಲ್ಲಿ ಶೇ 25ರಷ್ಟು ಸಿಬ್ಬಂದಿಗೆ ಮಾತ್ರ ನಾಲ್ಕು ವರ್ಷದ ಬಳಿಕ ಸೇನೆಯಲ್ಲಿ ಮುಂದುವರಿಯುವ ಅವಕಾಶ ದೊರಕಲಿದೆ. ಸೇನೆಯನ್ನು ತಾರುಣ್ಯಯುತವಾಗಿ ಇರಿಸುವುದು, ಸರ್ಕಾರದ ಮೇಲೆ ಇರುವ ಪಿಂಚಣಿ ಹೊರೆಯನ್ನು ತಗ್ಗಿಸುವುದು ಈ ಯೋಜನೆಯ ಉದ್ದೇಶ ಎಂದು ಸರ್ಕಾರ ಹೇಳಿಕೊಂಡಿದೆ.

'ಅಗ್ನಿಪಥ'ವು ಲೋಪಗಳೇ ಇರುವ ವ್ಯವಸ್ಥೆ. ಇದರ ಅನುಷ್ಠಾನದಿಂದ ಬೃಹತ್ತಾದ, ಮಾರ್ಪಡಿಸಲಾಗದ, ಖಚಿತ ಅನನುಕೂಲಗಳು ಉಂಟಾಗಲಿವೆ. ಯುದ್ಧಕ್ಕೆ ಸಂಬಂಧಿಸಿ ಕಾರ್ಯಾಚರಣಾ ದಕ್ಷತೆಯು ಚಿಂತೆಗೆ ಕಾರಣವಾಗುವ ಮಟ್ಟಿಗೆ ಇಳಿಕೆಯಾಗುತ್ತದೆ. ರಾಷ್ಟ್ರೀಯ ಭದ್ರತೆಯ ವಿಚಾರದಲ್ಲಿ ಭಾರಿ ರಾಜಿ ಮಾಡಿಕೊಂಡಂತೆ ಆಗುತ್ತದೆ. ಯೋಜನೆಯನ್ನು ಕೈಬಿಡಬೇಕು. ಹಣ ಉಳಿತಾಯವಾಗುತ್ತದೆ ಎಂಬ ಕಾರಣಕ್ಕೆ ದೇಶದ ಭದ್ರತೆಯನ್ನು ಕಡೆಗಣಿಸಬಹುದೇ?

ಜಾತ್ಯತೀತ ಪ್ರಜಾತಂತ್ರವು ಭಾರತದ ಆಡಳಿತ ವ್ಯವಸ್ಥೆ. ಭಾರತದ ಸೇನೆಯು ಜಾತ್ಯತೀತತೆ ಮತ್ತು ಪ್ರಜಾಸತ್ತೆ ಎರಡರ ಅತ್ಯುತ್ಕೃಷ್ಟ ಮಾದರಿ. ರಾಜಕೀಯೇತರವಾಗಿಯೇ ಇರುವುದು ನಮ್ಮ ಸೇನೆಯ ಅತ್ಯಂತ ದೊಡ್ಡ ಶಕ್ತಿ. ರಾಜಕೀಯ ಪಕ್ಷಗಳು ತಮ್ಮ ಮೌಲ್ಯ ವೃದ್ಧಿಸಿಕೊಳ್ಳುವುದಕ್ಕಾಗಿ ಸೇನೆಯನ್ನು ಬಳಸಿಕೊಳ್ಳದಂತೆ ಎಚ್ಚರ ವಹಿಸಬೇಕಾದ ಅಗತ್ಯ ಇದೆ.

ಹಾಗೆಯೇ, ರಾಜಕೀಯ ಗುರಿಗಳನ್ನು ಈಡೇರಿಸಿಕೊಳ್ಳಲು ಸೇನೆಯಲ್ಲಿ ಅನಗತ್ಯವಾದ ಮತ್ತು ಅಸಂಗತವಾದ ಬದಲಾವಣೆ ಮಾಡುವುದು ಕೂಡ ಸರಿಯಲ್ಲ. ದಶಕಗಳಿಂದ ಪೋಷಿಸಿಕೊಂಡು ಬಂದ ಸೇನೆಯ ಸ್ವರೂಪಕ್ಕೆ ಇಂತಹ ಬದಲಾವಣೆಗಳು ಧಕ್ಕೆ ತರುತ್ತವೆ, ರಕ್ಷಣಾ ಪಡೆಗಳ ಬಲವನ್ನು ಕುಂದಿಸುತ್ತವೆ. ಸೇನೆಯು ರಾಜಕೀಯದಿಂದ ಸದಾ ದೂರವೇ ಇದ್ದದ್ದು ಮತ್ತು ಜಾತ್ಯತೀತವಾಗಿ ಇದ್ದದ್ದರ ಫಲವು ದೇಶಕ್ಕೆ ದಕ್ಕಿದೆ ಎಂಬುದರಲ್ಲಿ ಯಾವ ಅನುಮಾನವೂ ಇಲ್ಲ.

ಸರ್ಕಾರವು ಈಗ ಪ್ರಕಟಿಸಿರುವ ಗುತ್ತಿಗೆ ನೇಮಕಾತಿ ಪದ್ಧತಿಯನ್ನು ಜಗತ್ತಿನ ದೊಡ್ಡ ದೊಡ್ಡ ಸೇನೆಗಳೆಲ್ಲವೂ ಪರಿಶೀಲಿಸಿ ಒಪ್ಪದಿರುವ ಮತ್ತು ಇಂತಹ ಯೋಜನೆಯು ಸೇನೆಯ ಬಲವನ್ನು ಕುಗ್ಗಿಸುತ್ತದೆ ಎಂಬ ನಿಲುವಿಗೆ ಬಂದಿವೆ. ನಮ್ಮ ನೆರೆಯಲ್ಲಿರುವ ಎರಡು ಪ್ರತಿಸ್ಪರ್ಧಿ ದೇಶಗಳು ಕೂಡ ಇದೇ ನಿಲುವಿಗೆ ಬಂದಿರುವುದನ್ನು ನಾವು ಗಮನದಲ್ಲಿ ಇರಿಸಿಕೊಳ್ಳಬೇಕು ಮತ್ತು ಇದರಲ್ಲಿಯೇ ನಮಗೆ ಹಲವು ಪಾಠಗಳು ಇರಬಹುದು. ಅಗ್ನಿಪಥ ಯೋಜನೆಯ ಬಗ್ಗೆ ಮೃದುವಾಗಿ ಹೇಳಬಹುದಾದ ಮಾತೆಂದರೆ, ಈ ಯೋಜನೆಯು ವಿವೇಚನಾರಹಿತವಾಗಿ ತೆಗೆದುಕೊಂಡ ನಿರ್ಧಾರದ ಫಲ. 'ಅಗ್ನಿಪಥ'ವು ರಕ್ಷಣಾ ಪಡೆಗಳ ಸ್ವರೂಪ, ಉತ್ಸಾಹ, ವೃತ್ತಿಪರತೆ

ಎಲ್ಲವನ್ನೂ ಕೊಲ್ಲಲಿದೆ.

ಅಗ್ನಿಪಥ ಯೋಜನೆಯು ಕೆಲವು ಸಾವಿರ ಜನರಿಗೆ ಉದ್ಯೋಗ ನೀಡಬಹುದು. ಸರ್ಕಾರವೇ ಹೇಳಿರುವಂತೆ, ಜನರಲ್ಲಿ ಶಿಸ್ತು, ದೇಶಪ್ರೇಮ, ರಾಷ್ಟ್ರೀಯತೆ ಬೆಳೆಸಬಹುದು. ಆದರೆ, ಆಡಳಿತ ಪಕ್ಷದ ಚುನಾವಣಾ ಗೆಲುವಿನ ಸಾಧ್ಯತೆಯನ್ನು ಹೆಚ್ಚಿಸುವುದು ನೇಪಥ್ಯದಲ್ಲಿ ಇರುವ ಉದ್ದೇಶ.

ರಕ್ಷಣಾ ಪಡೆಗಳ ಯುದ್ಧ ಸನ್ನದ್ಧತೆ ಮತ್ತು ಕಾರ್ಯದಕ್ಷತೆಯನ್ನು ಈ ಯೋಜನೆಯು ಕುಗ್ಗಿಸಲಿದೆ ಎಂಬುದು ಕಳವಳಕಾರಿಯಾದ ಅಂಶ.

ಮೊದಲನೆಯದಾಗಿ, ಆರು ತಿಂಗಳು ತರಬೇತಿಯ ಬಳಿಕ ಯುವ ಜನರು ಸೇನೆಗೆ ಸೇರ್ಪಡೆಯಾಗುತ್ತಾರೆ. ನಾಲ್ಕೇ ವರ್ಷಗಳಲ್ಲಿ ಅಲ್ಲಿಂದ ಹೊರಬೀಳುತ್ತಾರೆ. ಶಕ್ತ ಮತ್ತು ದಿಟ್ಟ ಯೋಧರಾಗಿ ಪರಿವರ್ತನೆಯಾಗುವ ಮುನ್ನವೇ ಅವರು ಸೇನೆಯಿಂದ ಹೊರಗೆ ಬಂದು ಆಗಿರುತ್ತದೆ. ಹೀಗಾಗಿ ಸೇನೆಯು ಹೆಚ್ಚು ತಾರುಣ್ಯದಿಂದ ಕೂಡಿರುತ್ತದೆ ಎಂಬುದು ರಮ್ಯ ಕಲ್ಪನೆಯೇ ಹೊರತು, ಅದರಿಂದ ದೇಶಕ್ಕೆ ಆಗುವ ಪ್ರಯೋಜನ ಪ್ರಶ್ನಾರ್ಹವಾಗಿದೆ.

ರಕ್ಷಣಾ ಪಡೆಗಳ ಸಿಬ್ಬಂದಿಯ ಒಟ್ಟು ಸಂಖ್ಯೆ ಸುಮಾರು 12 ಲಕ್ಷ. ಅವರಲ್ಲಿ ಶೇ 25ರಷ್ಟು ಮಂದಿ ಮಾತ್ರ ಕಾಯಂ ಸಿಬ್ಬಂದಿ ಎಂಬ ಸ್ಥಿತಿ ಒಂದು ಕಾಲದಲ್ಲಿ ಸೃಷ್ಟಿಯಾಗಬಹುದು. ಅಂದರೆ 12 ಲಕ್ಷ ಸಿಬ್ಬಂದಿಯಲ್ಲಿ 3 ಲಕ್ಷ ಮಾತ್ರ ಕಾಯಂ ಆಗಿರುವವರು.

ಸೇನೆಯಲ್ಲಿ ಸಿಬ್ಬಂದಿಯ ಎರಡು ವರ್ಗಗಳು ಇದರಿಂದಾಗಿ ಸೃಷ್ಟಿಯಾಗುತ್ತದೆ. ನಾಲ್ಕು ವರ್ಷ ಇರುವವರು ಮತ್ತು ಕಾಯಂ ಆಗಿರುವವರಿಗೆ ಎರಡು ರೀತಿಯ ತರಬೇತಿ ಮಾದರಿಗಳನ್ನು ರೂಪಿಸಬೇಕಾಗುತ್ತದೆ. ನಾಲ್ಕು ವರ್ಷದ ಅವಧಿಗೆ ನೇಮಕವಾಗುವವರಿಗೆ ಭಿನ್ನ ರೀತಿಯ ತರಬೇತಿ ಮತ್ತು ಕಾಯಂ ಆಗಿರುವವರಿಗೆ ಭಿನ್ನ ತರಬೇತಿ ಬೇಕಾಗುತ್ತದೆ. ನಾಲ್ಕು ವರ್ಷ ಅವಧಿಗೆ ಸೇನೆಯಲ್ಲಿ ಇರುವವರ ಸಂಖ್ಯೆಯೇ ಹೆಚ್ಚಾಗಿ ಇರುತ್ತದೆ. ಇದು ಸೇನೆಯ ಕಾರ್ಯದಕ್ಷತೆ, ಯುದ್ಧ ಚಾತುರ್ಯದ ಮೇಲೆ ಪ್ರತಿಕೂಲ ಪರಿಣಾಮ ಬೀರುತ್ತದೆ.

ನಾಲ್ಕು ವರ್ಷದ ಸೇವೆ ಮುಗಿಸಿ ಹೊರಬರುವ ಶಸ್ತ್ರ ತರಬೇತಿ ಪಡೆದ ಸದೃಢರಾದ ಹೆಚ್ಚು ವಿದ್ಯಾಭ್ಯಾಸ ಇಲ್ಲದ ಈ ಜನರು ಏನು ಮಾಡಬೇಕು? ಈ ವರ್ಷ 46 ಸಾವಿರ ಯುವ ಜನರನ್ನು ನೇಮಕ ಮಾಡಿಕೊಳ್ಳುವುದಾಗಿ ಸರ್ಕಾರ ಹೇಳಿದೆ. ಮುಂದಿನ ವರ್ಷಗಳಲ್ಲಿ ಇದನ್ನು ಮೂರು ಪಟ್ಟು ಹೆಚ್ಚಿಸಲಾಗುವುದು ಎಂದೂ ಹೇಳಿದೆ. ಅಂದರೆ, ನಾಲ್ಕು ವರ್ಷಗಳ ಬಳಿಕ, ಸುಮಾರು 31 ಸಾವಿರ ಜನರು ಸೇನೆಯ ಉದ್ಯೋಗ ಕಳೆದುಕೊಂಡು ನಿರುದ್ಯೋಗಿಗಳಾಗುತ್ತಾರೆ.

ನಂತರದ ಪ್ರತಿ ವರ್ಷ ಇದರ ಮೂರು ಪಟ್ಟು ಜನರು ನಿರುದ್ಯೋಗಿಗಳಾಗುತ್ತಾರೆ. ಈ ಜನರು ಸಮಾಜಕ್ಕೆ ಹೊರೆಯಾಗಿ ಪರಿಣಮಿಸಬಹುದು, ಅವರನ್ನು ನಿಭಾಯಿಸುವುದು ಕಷ್ಟವಾಗಬಹುದು, ಆಡಳಿತ ಪಕ್ಷವು ತನಗೆ ಬೇಕಾದ ರೀತಿಯಲ್ಲಿ ಅವರನ್ನು ಬಳಸಿಕೊಳ್ಳಬಹುದು ಎಂಬ ಆರೋಪಗಳು ಇವೆ. ಈ ಕುರಿತು ವಿಶ್ಲೇಷಣೆ ನಡೆಸುವ ಅಗತ್ಯ ಇದೆ.

ಗುತ್ತಿಗೆ ಆಧಾರದಲ್ಲಿ ಸೈನ್ಯಕ್ಕೆ ಸೇರುವವರ ಬಗ್ಗೆ ಯೋಚಿಸಿದರೂ ಇದು ಉತ್ತಮವಾದ ಯೋಜನೆ ಎಂಬ ಭಾವನೆ ಮೂಡುವುದಿಲ್ಲ. ಈ ಯುವಕರಿಗೆ ವಿಶೇಷ ವ್ಯವಸ್ಥೆಯ ಮೂಲಕ ಪಿಯುಸಿ ಅಥವಾ 12ನೇ ತರಗತಿ ಪೂರ್ಣಗೊಳಿಸುವ ಅವಕಾಶ ಒದಗಿಸುವ ಬಗ್ಗೆ ಚಿಂತನೆ ನಡೆದಿದೆ. ಆದರೆ, 12ನೇ ತರಗತಿಯ ಪ್ರಮಾಣಪತ್ರ ಹಿಡಿದುಕೊಂಡರೆ ಉದ್ಯೋಗ ಸಿಗಬಹುದೇ? ಅದಲ್ಲದೇ, ಈ ಉದ್ಯೋಗಗಳಿಗೆ ಸ್ಪರ್ಧೆಯಲ್ಲಿ ಇರುವ ಇತರರಿಗೆ ಇವರಿಗಿಂತ ಕಡಿಮೆ ವಯಸ್ಸು ಇರುತ್ತದೆ. ಖಾಸಗಿ ಸಂಸ್ಥೆಗಳು ಕಡಿಮೆ ವಯಸ್ಸಿನವರನ್ನೇ ಆಯ್ಕೆ ಮಾಡಿಕೊಳ್ಳುವ ಸಾಧ್ಯತೆ ಹೆಚ್ಚು. ಶಿಕ್ಷಣವೂ ಪೂರ್ಣಗೊಳ್ಳುವುದಿಲ್ಲ, ಉದ್ಯೋಗವೂ ದೊರೆಯುವುದಿಲ್ಲ ಎಂಬ ಹತಾಶ ಸ್ಥಿತಿಗೆ ಇವರು ತಳ್ಳಲ್ಪಡುತ್ತಾರೆ.

ಸೇನೆಯಲ್ಲಿ ಉಳಿಯುವ ಶೇ 25ರಷ್ಟು ಯುವ ಜನರಿಗೂ ಅನ್ಯಾಯವೇ ಆಗುತ್ತದೆ. ಇವರನ್ನು ಸೇವೆಯಲ್ಲಿ ಮುಂದುವರಿಸಲಾಗುವುದಿಲ್ಲ. ಬದಲಿಗೆ, ಸೇನೆಗೆ ಮರು ನೇಮಕ ಮಾಡಿಕೊಳ್ಳಲಾಗುತ್ತದೆ. ವೇತನ, ಸೇವಾ ಜ್ಯೇಷ್ಠತೆ, ಬಡ್ತಿ, ನಿವೃತ್ತಿ ಸೌಲಭ್ಯಗಳು ಈ ಯಾವುದಕ್ಕೂ ಮೊದಲ ನಾಲ್ಕು ವರ್ಷದ ಸೇವೆಯನ್ನು ಪರಿಗಣಿಸಲಾಗುವುದಿಲ್ಲ. ಇದು ಅನ್ಯಾಯ ಎಂದು ಅನಿಸುತ್ತದೆ.

ಸೇನೆಯು ಹೇಗೆ ಸುಸಂಬದ್ಧವಾಗಿ ಬೆಳೆದು ಬಂದಿದೆ, ಸಿಬ್ಬಂದಿಯು ದೇಶದ ರಕ್ಷಣೆ ಮತ್ತು ದೇಶಕ್ಕಾಗಿ ಸೇವೆ ಸಲ್ಲಿಸಲು ಹೇಗೆ ವೃತ್ತಿಪರ ಯೋಧರಾಗಿ ಪರಿವರ್ತನೆಗೊಂಡಿದ್ದಾರೆ ಎಂಬುದನ್ನೆಲ್ಲ ತಿಳಿದಿಲ್ಲದ, ರಕ್ಷಣಾ ಪಡೆಗಳ ಬಗ್ಗೆ ದಿವ್ಯ ನಿರ್ಲಕ್ಷ್ಯ ಇರುವವರೇ ಈ ಯೋಜನೆಯನ್ನು ರೂಪಿಸಿರಬೇಕು. ದೇಶಕ್ಕೆ ಬೇಕಿರುವುದು ಯೋಧರೇ ಹೊರತು ಗುತ್ತಿಗೆ ಕಾರ್ಮಿಕರಲ್ಲ. ಪಿಂಚಣಿ ಮತ್ತು ಸಂಬಳದ ಹೊರೆ ಹೆಚ್ಚುತ್ತದೆ ಎಂಬ ಕಾರಣಕ್ಕೆ ದೇಶದ ಸುರಕ್ಷತೆಯನ್ನು ಅಪಾಯಕ್ಕೆ ಒಡ್ಡುವುದು ಪ್ರಶ್ನಾರ್ಹ.

ಲೇಖಕ: ಸೇನೆಯ ನಿವೃತ್ತ ಅಧಿಕಾರಿ

ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ | 150

ಸತಿಯನ್ನು ವರಿಸಲು ಒಪ್ಪಿದ ರುದ್ರ

ಲೋಕಕಲ್ಯಾಣಕ್ಕಾಗಿ ವಿರಾಗದಿಂದ ಅನುರಾಗದತ್ತ ಸಾಗಲು ವಿವಾಹ ಮಾಡಿಕೊಳ್ಳುವಂತೆ ಬ್ರಹ್ಮ ಆಡಿದ ಮಾತುಗಳನ್ನು ಕೇಳಿದ ರುದ್ರ, ಮಂದಹಾಸವನ್ನು ಬೀರುತ್ತಾ ನುಡಿದ 'ಎಲೈ ಬ್ರಹ್ಮ, ವಿಷ್ಣು ಮತ್ತು ಮುನಿವರ್ಯರೇ, ಸಂಸಾರವಿರಕ್ತನೂ ತಪೋನಿಷ್ಠನೂ ಜ್ಞಾನಯೋಗಿಯೂ ಆದ ನಾನು ಮದುವೆಯನ್ನು ಮಾಡಿಕೊಳ್ಳುವುದು ನ್ಯಾಯವಲ್ಲ. ವೈರಾಗ್ಯಮಾರ್ಗದಲ್ಲಿ ಸಾಗುತ್ತಾ, ಸ್ವಸ್ವರೂಪದಲ್ಲಿ ವಿಹರಿಸುವವನೂ ಆದ ಜ್ಞಾನಿಯೋಗಿಗೆ ಕಾಮಿನಿಯಿಂದ ಯಾವ ಪ್ರಯೋಜನವಿಲ್ಲ. ಕೇವಲ ಜ್ಞಾನಯೋಗಿಯಾಗಿ ಆತ್ಮಸ್ವರೂಪದಲ್ಲಿ ವಿಹರಿಸುತ್ತಲಿರುವ ನನಗೆ ಸ್ವರೂಪಾನಂದವು ಸದಾ ಇದ್ದೇ ಇರುವುದು. ಸ್ವರೂಪಜ್ಞಾನವಿಲ್ಲದ ಪುರುಷನು ಮಾತ್ರ ಸಂಸಾರಸುಖದಲ್ಲಿ ಅಭಿಮಾನವುಳ್ಳವನಾಗುತ್ತಾನೆ. ಮದುವೆ ಮಾಡಿಕೊಳ್ಳುವುದು ದೊಡ್ಡ ಬಂಧನ. ಆದುದರಿಂದ ಮದುವೆಯಲ್ಲಿ ನನಗೆ ಇಷ್ಟವಿಲ್ಲ. ನನ್ನ ಸ್ವರೂಪವನ್ನೇ ನಾನು ತಿಳಿದಿರುವುದರಿಂದ ಸ್ವಾರ್ಥಕ್ಕಾಗಿ ನಾನು ಪ್ರವರ್ತಿಸುವುದಿಲ್ಲ. ಆದರೆ ಜಗತ್ತಿನ ಕ್ಷೇಮಕ್ಕಾಗಿ ಕಾರ್ಯವನ್ನು ಮಾಡುವೆ. ಆದಕಾರಣ ಹಿಂದೆ ಹೇಳಿದ ಮಾತಿನಂತೆ ಮದುವೆಯನ್ನು ಮಾಡಿಕೊಳ್ಳುವೆ. ಆದರೆ ನಾನು ಎಂತಹ ಕಾಮಿನಿಯನ್ನು ಮದುವೆಯಾಗುವೆನು ಎಂದು ಹೇಳುವೆನು ಕೇಳಿರಿ' ಎಂದು ರುದ್ರದೇವ ತನಗೆ ಅನುರೂಪಳಾದ ಪತ್ನಿ ಹೇಗಿರಬೇಕೆಂಬ ವರ್ಣನೆ ಮಾಡಿದ.

'ನಾನು ಪತ್ನಿಯಾಗಿ ಪರಿಗ್ರಹಿಸಬೇಕೆಂದಿರುವವಳು ಯೋಗಿನಿಯೂ ಸುಂದರಿಯೂ ಆಗಿರಬೇಕು. ನನ್ನ ವೀರ್ಯವನ್ನು ಭಾಗಶಃ ಧರಿಸಲು ಸಮರ್ಥಳಾಗಿರಬೇಕು. ಅಂತಹ ಕಾಮಿನಿಯನ್ನೇ ನಾನು ಮದುವೆಯಾಗುವುದು. ನಾನು ಯೋಗನಿಷ್ಠನಾದರೆ ಅವಳೂ ಯೋಗನಿಷ್ಠಳಾಗಬೇಕು. ಯಾವ ಪರಮಾತ್ಮನನ್ನು ವೇದಗಳು ನಾಶವಿಲ್ಲದ ಅಕ್ಷಯ ಸ್ವರೂಪನೆಂದು ವರ್ಣಿಸುವುವೋ ಅಂತಹ ಅನಾದಿಯಾದ ಜ್ಞಾನಜ್ಯೋತಿಸ್ವರೂಪನಾದ ಪರಶಿವನನ್ನು ನಾನು ಸದಾ ಚಿಂತಿಸುತ್ತಿರುತ್ತೇನೆ. ಆ ಪರಮಾತ್ಮನನ್ನು ನಾನು ಚಿಂತಿಸುತ್ತಿರುವಾಗ ನನ್ನ ಚಿಂತನೆಗೆ ಅಡ್ಡಿಯಾಗದಿರುವ ಕಾಮಿನಿಯನ್ನೇ ನಾನು ಮದುವೆಯಾಗುವೆ. ನಾನು ಪರಿಗ್ರಹಿಸಬೇಕೆಂದಿರುವವಳು ನನ್ನಲ್ಲಿ ಯಾವಾಗ ವಿಶ್ವಾಸವಿಲ್ಲದವಳಾಗುವಳೋ ಆಗ ಅವಳನ್ನು ತ್ಯಜಿಸಿಬಿಡುವೆ. ಅಂತಹವಳು ಎಲ್ಲಿರುವಳು ಎಂಬುದನ್ನು ತೋರಿಸಿ. ನಾನು ಮದುವೆಯಾಗಲು ಸಿದ್ಧ' ಎಂದ ರುದ್ರ.

ರುದ್ರದೇವ ಮದುವೆಯಾಗಲು ಒಪ್ಪಿದ್ದನ್ನು ಕೇಳಿ ಸಂತುಷ್ಟನಾದ ಬ್ರಹ್ಮ 'ಓ ಮಹೇಶ್ವರನೇ, ನೀನು ಹೇಳುವಂತಹ ಕನ್ಯೆಯೇ ಇರುವಳು. ಜಗನ್ಮಾತೆಯಾದ ಉಮಾದೇವಿಯು ಹಿಂದೆ ಸೃಷ್ಟಿ–ಸ್ಥಿತಿಗಳ ಸಾಧನೆಗಾಗಿ ಸರಸ್ವತೀ ಮತ್ತು ಲಕ್ಷ್ಮೀ ಎಂಬ ಎರಡು ರೂಪಳಾಗಿ ಜನಿಸಿದಳು. ಲಕ್ಷ್ಮೀಯು ಹರಿಯ ಕಾಂತೆಯಾದರೆ, ಸರಸ್ವತಿಯು ನನ್ನ ಪ್ರಿಯಭಾರ್ಯೆಯಾದಳು. ಉಮಾದೇವಿಯು ಮತ್ತೆ ಲೋಕಕ್ಷೇಮಕ್ಕಾಗಿ ದಕ್ಷನ ಪುತ್ರಿಯಾಗಿ ಸತೀದೇವಿ ಎಂಬ ಹೆಸರಿನಿಂದ ಜನಿಸಿರುವಳು. ಆ ಸತೀದೇವಿಯು ನಿನಗೆ ಪತ್ನಿಯಾಗಲು ಅರ್ಹಳಾಗಿದ್ದಾಳೆ. ತೇಜಸ್ವಿನಿಯಾದ ಅವಳು ನಿನ್ನನ್ನೇ ಪತಿಯಾಗಿ ಪಡೆಯಬೇಕೆಂದು ತಪಸ್ಸನ್ನಾಚರಿಸುತ್ತಲಿದ್ದಾಳೆ.

'ಓ ಪರಮೇಶ್ವರ! ಆ ಸತೀದೇವಿಗೆ ವರವನ್ನು ಅನುಗ್ರಹಿಸಲು ಅವಳ ಬಳಿಗೆ ತೆರಳಿ, ಅವಳನ್ನು ನೀನು ವರಿಸು. ನನಗೂ ಹರಿಗೂ ದೇವತೆಗಳಿಗೂ ಇದೇ ಅಭಿಲಾಷೆ ಇದೆ. ಆದಕಾರಣ ಅನುಗ್ರಹವಿಟ್ಟು ನಮ್ಮಾಸೆಯನ್ನು ಪೂರೈಸು. ನಿನ್ನ ವಿವಾಹದ ಉತ್ಸವವನ್ನು ನಾವೆಲ್ಲಾ ನೋಡಬೇಕೆಂದಿರುವೆವು. ಇದರಿಂದ ಮೂರು ಲೋಕಗಳಲ್ಲಿಯೂ ಮಂಗಳವಾಗುವುದು. ಎಲ್ಲರ ದುಃಖವೂ ನಾಶವಾಗುವುದು' ಎಂದ ಬ್ರಹ್ಮ.

ಬ್ರಹ್ಮನ ಮಾತನ್ನು ಅನುಮೋದಿಸಿದ ವಿಷ್ಣು 'ಕರುಣಾಮಯನೂ ಸುಖಪ್ರದನೂ, ದೇವದೇವನೂ ಆದ ಓ ಮಹಾದೇವನೆ, ಈಗ ಬ್ರಹ್ಮನು ಹೇಳಿದುದೆಲ್ಲವೂ ನಿಜವಾದುದು. ನನ್ನ ಅಭಿಪ್ರಾಯವೂ ಹಾಗೆಯೇ ಇರುವುದು. ಇದರಲ್ಲಿ ಸಂಶಯವಿಲ್ಲ. ಆದುದರಿಂದ ಓ ಮಹೇಶ್ವರನೇ! ನನ್ನಲ್ಲಿ ಅನುಗ್ರಹ ವನ್ನಿಟ್ಟು ಬ್ರಹ್ಮನು ಹೇಳಿದಂತೆ ಸತೀದೇವಿಯನ್ನು ಮದುವೆಯಾಗಿ ಮೂರು ಲೋಕಗಳಿಗೂ ಸುಖವನ್ನುಂಟು ಮಾಡು' ಎಂದ.

ವಿಷ್ಣುವಿನ ಮಾತನ್ನು ಕೇಳಿ ನಸುನಕ್ಕ ಭಕ್ತವತ್ಸಲನಾದ ರುದ್ರದೇವ. ಹಾಗೆಯೇ ಆಗಲೆಂದು ದೇವತೆಗಳ ಪ್ರಾರ್ಥನೆಯನ್ನು ಅಂಗೀಕರಿಸಿದ. ಸಂತೋಷಿತರಾದ ಬ್ರಹ್ಮ, ವಿಷ್ಣು, ಮತ್ತಿತರ ದೇವತೆಗಳು ಮತ್ತು ಮುನಿಗಳು ರುದ್ರದೇವನಿಗೆ ನಮಸ್ಕರಿಸಿ, ಅವನ ಅಪ್ಪಣೆಯನ್ನು ಪಡೆದು ತಮ್ಮ ತಮ್ಮ ಸ್ಥಾನಗಳಿಗೆ ತೆರಳಿದರು ಎಂಬಲ್ಲಿಗೆ ಶಿವಮಹಾಪುರಾಣದ ರುದ್ರಸಂಹಿತೆಯಲ್ಲಿನ ಸತೀಖಂಡದ ಹದಿನಾರನೆಯ ಅಧ್ಯಾಯ ಮುಗಿಯುತ್ತದೆ.

ಸೇನೆಗೆ ಯೌವನ ತುಂಬಲು ಅಗ್ನಿಪಥ

• ಸಿ.ಟಿ.ರವಿ

ಈ ಯೋಜನೆಯಿಂದ ಸೇನೆಯಲ್ಲಿ ಹೊಸತನ ಇರುತ್ತದೆ. ಕೆಲವೇ ವರ್ಷಗಳಲ್ಲಿ ಅರ್ಧದಷ್ಟು ಸೇನೆ ನವಯುವಕರಿಂದ ತುಂಬಿರುತ್ತದೆ. ಸೇನೆಯಲ್ಲಿ ಉತ್ಸಾಹ ಪುಟಿದೇಳುತ್ತಿರುತ್ತದೆ. ತರಬೇತಿ ನೀಡದೆಯೇ ಯುವಕರನ್ನು ಯುದ್ಧಕ್ಕೆ ಬಿಡುತ್ತಾರೆ ಎಂದು ಆರೋಪಿಸಲಾಗುತ್ತಿದೆ. ಆದರೆ ಅದು ನಿಜವಲ್ಲ

ಅಗ್ನಿಪಥವು ಸೇನೆಗೆ ಯುವಜನರನ್ನು ಭರ್ತಿ ಮಾಡಲು ಜಾರಿಗೆ ತಂದ ಯೋಜನೆ. ಹಲವು ದೇಶಗಳಲ್ಲಿ ಇಂತಹ ವ್ಯವಸ್ಥೆ ಈಗಾಗಲೇ ಇದ್ದು, ಯಶಸ್ವಿಯಾಗಿದೆ. ಸೇನೆಯ ಮೂರೂ ಪಡೆಗಳ ದಂಡನಾಯಕರು ಒಟ್ಟಾಗಿ ಕುಳಿತು ಇದರ ಸಾಧಕ ಬಾಧಕಗಳನ್ನು ಪರಿಶೀಲಿಸಿ ಈ ಯೋಜನೆಯನ್ನು ರೂಪಿಸಿದ್ದಾರೆ.

ಈ ಯೋಜನೆಯಿಂದ ಸೈನ್ಯ ದುರ್ಬಲವಾಗುತ್ತದೆ ಎಂಬ ಆರೋಪವಿದೆ. ಆದರೆ ಪರಿಸ್ಥಿತಿ ಹಾಗೆ ಇಲ್ಲ. ಅಮೆರಿಕ, ಸ್ವಿಡ್ಜರ್ಲೆಂಡ್, ಚೀನಾ, ರಷ್ಯಾ ಹೀಗೆ ಹಲವಾರು ದೇಶಗಳಲ್ಲಿ ಯುವಕರನ್ನು ಸೇನೆಗೆ ನೇಮಿಸುವ ವ್ಯವಸ್ಥೆ ಇದೆ. ಸೇನೆ ಯುವಕರಿಂದಲೇ ತುಂಬಿರಬೇಕು ಎಂಬುದು ಇದರ ಮುಖ್ಯ ಉದ್ದೇಶ.

ಅಗ್ನಿವೀರರ ಭವಿಷ್ಯ ಅಭದ್ರವಾಗಲಿದೆ ಎಂಬುದು ಯೋಜನೆಯ ಮೇಲಿನ ಬಹುದೊಡ್ಡ ಆರೋಪ. ಆದರೆ, ವಾಸ್ತವಿಕವಾಗಿ ಅಗ್ನಿವೀರರ ಭವಿಷ್ಯ ಅಭದ್ರವಾಗುವುದಿಲ್ಲ. ಈ ಯೋಜನೆ ಅಡಿ ತರಬೇತಿ ಪಡೆಯುವವರಲ್ಲಿ ಶೇ 25ರಷ್ಟು ಮಂದಿ ಕಾಯಂ ಆಗಿ ಸೇನೆಯಲ್ಲೇ ಉಳಿದುಕೊಳ್ಳಲಿದ್ದಾರೆ. ಉಳಿದವರು ಅಗ್ನಿವೀರರಾಗಿ ಸಮಾಜಕ್ಕೆ ವಾಪಸಾಗಲಿದ್ದಾರೆ. ನಾಲ್ಕು ವರ್ಷ ಸೇನೆಯಲ್ಲಿ ಕೆಲಸ ಮಾಡಿದಾಗ ಸಂಬಳ ನೀಡಲಾಗುತ್ತದೆ. ಜತೆಗೆ ಆ ಅವಧಿ ಮುಗಿದಾಗ ₹11 ಲಕ್ಷದಷ್ಟು ಬೃಹತ್ ಮೊತ್ತದ ಪ್ಯಾಕೇಜ್ ನೀಡಲಾಗುತ್ತದೆ. ಅಲ್ಲದೇ, ಕೌಶಲಾಧರಿತ ಉದ್ಯೋಗ, ಸ್ವಯಂ ಉದ್ಯೋಗ ಅಥವಾ ಉದ್ದಿಮೆ ಸ್ಥಾಪಿಸಲು ಸಾಲಸೌಲಭ್ಯವನ್ನು ಕೊಡಿಸಿ ಅವರಿಗೆ ಬದುಕಿನ ದಾರಿಯನ್ನೂ ಕಲ್ಪಿಸುವುದು ಈ ಯೋಜನೆಯ ಸದಾಶಯಗಳಲ್ಲೊಂದು.

ಇದಲ್ಲದೆ ಅಗ್ನಿವೀರರಿಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ನೇಮಕಾತಿಗಳಲ್ಲಿ ಆದ್ಯತೆ ನೀಡಲಾಗುತ್ತದೆ. ನೇಮಕಾತಿ ಪ್ರಕ್ರಿಯೆಯಲ್ಲಿ ಅವರಿಗೆ ಹೆಚ್ಚುವರಿ ಅಂಕಗಳು ದೊರೆಯುತ್ತವೆ. ನಾಲ್ಕು ವರ್ಷಗಳ ಅಗ್ನಿಪಥವನ್ನು ಪೂರ್ಣಗೊಳಿಸುವ ಅಗ್ನಿವೀರರಿಗೆ, ಪಿಯುಸಿಗೆ ಸಮಾನವಾದ ಶೈಕ್ಷಣಿಕ ಕೋರ್ಸ್‌ನ ಪ್ರಮಾಣಪತ್ರ ನೀಡಲಾಗುತ್ತದೆ. ನಾಲ್ಕು ವರ್ಷಗಳ ಅವಧಿಯಲ್ಲಿ ಅವರಿಗೆ ಕೌಶಲ ಅಭಿವೃದ್ಧಿ ತರಬೇತಿಯನ್ನೂ ನೀಡಲಾಗಿರುತ್ತದೆ. ನಾಲ್ಕು ವರ್ಷ ಸೈನ್ಯದಲ್ಲಿ ಕೆಲಸ ಮಾಡಿ, ಉತ್ತಮ ತರಬೇತಿ ಪಡೆದು ತಮ್ಮ ಕಾರ್ಯಕ್ಷಮತೆ ಮತ್ತು ದಕ್ಷತೆ ತೋರಿದರೆ ಸೇನೆಯಲ್ಲಿ ಕಾಯಂ ಉದ್ಯೋಗವೂ ಸಿಗಲಿದೆ. ಆಗ ತರಬೇತಿ ಅವಧಿಯನ್ನು ಪೂರೈಸುವ ಅವಶ್ಯವೂ ಇರುವುದಿಲ್ಲ. ಇದೊಂದು ಆದರ್ಶ ಯೋಜನೆ.

ತರಬೇತಿ ಪಡೆದು ಹೊರಗೆ ಬರುವ ಶೇ 75ರಷ್ಟು ಜನರು ಪೊಲೀಸ್ ಇಲಾಖೆಗೆ, ಬ್ಯಾಂಕ್‌ಗಳಿಗೆ, ರೈಲ್ವೆಗೆ ಹೋಗಬಹುದು. ಜತೆಗೆ ಬೇರೆ ಬೇರೆ ಇಲಾಖೆಗಳಿಗೆ ಹೋಗುವಂತಹ ಸ್ವಾಭಾವಿಕವಾದ ಅವಕಾಶಗಳ ಹೆಬ್ಬಾಗಿಲನ್ನೇ ಈ ಯೋಜನೆ ತೆರೆಯುತ್ತದೆ. ಅವರಿಗೆ ಸಾಮಾನ್ಯ ಶಿಕ್ಷಣದ ಜತೆಗೆ, ಸೈನಿಕ ತರಬೇತಿ ದೊರೆಯುತ್ತದೆ. ಸೇನೆಗೆ ಮರುಸೇರ್ಪಡೆಗೆ ಅವಕಾಶ ಸಿಗದೇ ಇರುವವರು ಅಗ್ನಿವೀರರಾಗಿ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತಮ್ಮದೇ ಕೊಡುಗೆ ನೀಡಲು ಸೇನೆಯ ಶಿಸ್ತು- ಅಲ್ಲಿನ ಆದರ್ಶಮಯ ಜೀವನವೂ ನೆರವಿಗೆ ಬರಲಿದೆ. ದೇಶದ ಕೆಲಸಕ್ಕೆ ತುರ್ತು ಕರೆ ಬಂದಾಗ ಅಗ್ನಿವೀರರ ಸೇವೆಯೂ ರಾಷ್ಟ್ರಕ್ಕೆ ಲಭ್ಯವಾಗಲಿದೆ.

ಅಗ್ನಿಪಥ ಯೋಜನೆಯಿಂದ ಸಶಸ್ತ್ರಪಡೆಗಳ ಬಲ ಕುಂದುತ್ತದೆ ಎಂದು ಆರೋಪ ಮಾಡಲಾಗುತ್ತಿದೆ. ಈ ಮಾದರಿ ಈಗಾಗಲೇ ಹಲವು ದೇಶಗಳಲ್ಲಿ ಇದೆ. ಈ ರೀತಿಯ ವ್ಯವಸ್ಥೆಯಿಂದ ಯುವಕರು ಮತ್ತು ತೀಕ್ಷ್ಣವಾಗಿ ಇರುವವರು ಸೇನೆಗೆ ಸೇರ್ಪಡೆಯಾಗುತ್ತಾರೆ ಎಂಬ ಅಭಿಪ್ರಾಯ ಆ ದೇಶಗಳಲ್ಲಿ ಇದೆ. ಹೀಗಾಗಿ ಇದರಿಂದ ಸೇನೆಯ ಬಲ ಕುಂದುವುದಿಲ್ಲ. ಇದರ ಜತೆಯಲ್ಲಿ, ಈ ಯೋಜನೆ ಆರಂಭಿಸುವ ಮುನ್ನ ಶಸಸ್ತ್ರ ಪಡೆಗಳ ಮಾಜಿ ಮತ್ತು ಹಾಲಿ ಅಧಿಕಾರಿಗಳ ಜತೆಗೆ ಸಮಾಲೋಚನೆ ನಡೆಸಿಲ್ಲ ಎಂದೂ ಆರೋಪಿಸಲಾಗುತ್ತಿದೆ. ಎರಡು ವರ್ಷಗಳಿಂದ ಸಶಸ್ತ್ರಪಡೆಗಳ ಅಧಿಕಾರಿಗಳೊಂದಿಗೆ ನಿಯಮಿತವಾಗಿ ಸಮಾಲೋಚನೆ ನಡೆಸಿ ಈ ತೀರ್ಮಾನಕ್ಕೆ ಬರಲಾಗಿದೆ.

ಯಾವುದಾದರೂ ಒಂದು ಪ್ರಯೋಗ ಬರುವುದಕ್ಕೂ ಮೊದಲೇ, ಅದರ ಬಗ್ಗೆ ಆರೋಪ ಹೊರಿಸುವುದು ಪೂರ್ವಗ್ರಹಪೀಡಿತ ಮನಸ್ಥಿತಿ. ಪ್ರಯೋಗಶೀಲತೆಯೇ ಇರಬಾರದು ಎಂಬುದೂ ಪೂರ್ವಗ್ರಹಪೀಡಿತ ಮನಸ್ಥಿತಿ. ಸೇನೆಗೆ ಸೇರುವುದು ಒಂದು ಉದ್ಯೋಗವಲ್ಲ, ಅದು ರಾಷ್ಟ್ರಭಕ್ತಿಯನ್ನು ಒಳಗೊಂಡ ಸೇವೆ. ಅದನ್ನು ಉದ್ಯೋಗ ಅನ್ನುವ ರೀತಿಯಲ್ಲಿ ನೋಡುವುದು ಅಪಾಯಕಾರಿ ಬೆಳವಣಿಗೆ. ಉದ್ಯೋಗ ಎಂದು ನೋಡಿದ ಕೂಡಲೇ, ಅದರ ಮೌಲ್ಯವೇ ಕಡಿಮೆಯಾಗಿಬಿಡುತ್ತದೆ. ನಮ್ಮಲ್ಲಿ ಸಾಮಾಜಿಕವಾಗಿ ಸೈನಿಕರಿಗೆ ಹೆಚ್ಚು ಗೌರವವಿದೆ. ಅವರು ದೇಶಸೇವೆ ಮಾಡುತ್ತಾರೆ ಎಂಬ ಕಾರಣದಿಂದಲೇ ಅವರಿಗೆ ಸಾಮಾಜಿಕ ಗೌರವ ಹೆಚ್ಚು ಇರುತ್ತದೆಯೇ ಹೊರತು, ಉದ್ಯೋಗ ಮಾಡುತ್ತಾರೆ ಎಂಬುದಕ್ಕಲ್ಲ. ದೇಶಭಕ್ತಿ ಹಾಗೂ ತ್ಯಾಗಮನೋಭಾವವನ್ನು ತಮ್ಮ ಹೃದಯಾಂತರಾಳದಲ್ಲಿ ನೆಟ್ಟುಕೊಂಡು, ದೇಶಕ್ಕೆ ದುಡಿಯುವ ಮನೋಸಂಕಲ್ಪ ಮಾಡಿಕೊಂಡವರು ಅವರು.

ಇದನ್ನು ಋಣಾತ್ಮಕವಾಗಿ ಬಿಂಬಿಸುತ್ತಿರುವುದು ತಿಳಿವಳಿಕೆಯ ಕೊರತೆಯಿಂದ, ಇಲ್ಲವೇ ದುರುದ್ದೇಶದಿಂದ ಎಂಬುದು ನನ್ನ ಅಭಿಪ್ರಾಯ. ಅಗ್ನಿಪಥ ಏನು ಎಂಬುದು ಅರ್ಥವಾಗುವುದರ ಮೊದಲೇ ಬೆಂಕಿ ಹಾಕಲಾಗುತ್ತಿದೆ. ದೇಶದ ರಕ್ಷಣೆಗೆ ತಯಾರಾಗುತ್ತಿರುವವರು, ದೇಶಕ್ಕೆ ಬೆಂಕಿ ಹಾಕುವ ಕೆಲಸ ಮಾಡುತ್ತಾರೆಯೇ? ಬೆಂಕಿ ಹಾಕದಂತೆ ನೋಡಿಕೊಳ್ಳಲು ಸೈನ್ಯಕ್ಕೆ ಸೇರಬೇಕಿದೆ. ಆದರೆ ಇವರೇ ಶತ್ರುಗಳ ರೀತಿ ವರ್ತಿಸಬೇಕಿಲ್ಲ.

ಈ ಯೋಜನೆಯಿಂದ ಸೇನೆಯಲ್ಲಿ ಹೊಸತನ ಇರುತ್ತದೆ. ಕೆಲವೇ ವರ್ಷಗಳಲ್ಲಿ ಅರ್ಧದಷ್ಟು ಸೇನೆ ನವಯುವಕರಿಂದ ತುಂಬಿರುತ್ತದೆ. ಸೇನೆಯಲ್ಲಿ ಉತ್ಸಾಹ ಪುಟಿದೇಳುತ್ತಿರುತ್ತದೆ. ತರಬೇತಿ ನೀಡದೆಯೇ ಯುವಕರನ್ನು ಯುದ್ಧಕ್ಕೆ ಬಿಡುತ್ತಾರೆ ಎಂದು ಆರೋಪಿಸಲಾಗುತ್ತಿದೆ. ಆದರೆ ಅದು ನಿಜವಲ್ಲ. ಮೊದಲ ಬ್ಯಾಚ್‌ನಲ್ಲಿ, ಒಟ್ಟು ಸೇನೆಯಲ್ಲಿ ಅಗ್ನಿವೀರರ ಪ್ರಮಾಣ ಶೇ 3ರಷ್ಟು ಮಾತ್ರ. ಉಳಿದ ಶೇ 97ರಷ್ಟು ಜನರು ಅನುಭವಿಗಳೇ ಇರುತ್ತಾರೆ. ಸ್ವಿಡ್ಜರ್ಲೆಂಡ್‌ನಂತಹ ದೇಶದಲ್ಲಿ ನಾಗರಿಕರೇ ಸೈನಿಕರಾಗಿರುತ್ತಾರೆ. ತುರ್ತುಸ್ಥಿತಿಬಂದಾಗ ಅವರೆಲ್ಲಾ ಸೇನೆಗೆ ಬರುತ್ತಾರೆ. ಬೇರೆ ದೇಶಗಳಲ್ಲಿ ಎಲ್ಲಾ ಯುವಕರಿಗೆ ತರಬೇತಿ ನೀಡುತ್ತಾರೆ. ನಮ್ಮದು ದೊಡ್ಡ ದೇಶ, 138-140 ಕೋಟಿ ಜನಸಂಖ್ಯೆ ಇರುವ ದೇಶದಲ್ಲಿ ಎಲ್ಲರಿಗೂ ತರಬೇತಿ ಕೊಡಲು ಸಾಧ್ಯವಿಲ್ಲ. ಆದರೆ, ಅಗ್ನಿಪಥದಿಂದ ತರಬೇತಿ ಪಡೆಯುವವರ ಪ್ರಮಾಣ ಹೆಚ್ಚಾಗುತ್ತದೆ.

ವಿರೋಧಿಗಳು ಹಳಿಯುತ್ತಿರುವಂತೆ, ಈ ಯೋಜನೆಯು ರಾಜಕೀಯ ನೀತಿಯಲ್ಲ. ಇದು ಸೇನಾ ನೀತಿಯ ಭಾಗ. ಅದಕ್ಕೆ ಪ್ರಧಾನಿ ನರೇಂದ್ರ ಮೋದಿಯವರ ಸರ್ಕಾರ ಅಂಗೀಕಾರದ ಮುದ್ರೆಯೊತ್ತಿದೆಯಷ್ಟೆ.

ಇಷ್ಟೆಲ್ಲ ಉತ್ತಮ ಆಶಯಗಳನ್ನು ಹೊಂದಿದ ಯೋಜನೆ ವಿರೋಧಿಸುವವರದ್ದು ಒಳಿತನ್ನು ಸದಾ ಟೀಕಿಸುವ ಮನೋಭಾವ. ಅವರಿಗೆ ದೇಶದ ಹಿತವಾಗಲಿ, ಜನರ ಹಿತವಾಗಲಿ ಮುಖ್ಯವಾಗಿಲ್ಲ; ತಮ್ಮ ರಾಜಕೀಯ ಹಿತಾಸಕ್ತಿಗೆ ತಕ್ಕನಾಗಿ ಮಾತನಾಡಿ, ಜನರನ್ನು ಎತ್ತಿಕಟ್ಟುವ ಕೆಲಸವನ್ನು ಮಾಡುತ್ತಲೇ ಇರುತ್ತಾರೆ. ಈ ಬಾರಿಯೂ ಇದು ನಡೆದಿದೆ. ಇಲ್ಲದಿದ್ದರೆ ದೇಶದ ಆಸ್ತಿ ರಕ್ಷಣೆಗೆ ಸಮರ್ಪಣಾ ಮನೋಭಾವದಿಂದ ಸೈನಿಕರಾಗಲು ಬಯಸುವವರು ಹಲವು ರಾಜ್ಯಗಳಲ್ಲಿ ಪ್ರತಿಭಟನೆಗೆ ಇಳಿದು ಆಸ್ತಿಗೆ ಬೆಂಕಿ ಹಚ್ಚುವ ಕೆಲಸ ಮಾಡುತ್ತಿದ್ದರೇ?

ಲೇಖಕ: ಬಿಜೆಪಿಯ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ

ಪದಬಂಧ 4992
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಗಡಕ್ಕನೆ ಬಂದೆರಗಿದ ಗಂಡು ಕೋತಿ (3)
4.ದ್ರವದಿಂದ ತುಂಬಿರುವುದು (4)
6.ಋಷಿಗಳು ಹಿಡಿದಿರುವ ನೀರಿನ ಪಾತ್ರೆ (4)
9.ತಿರುಗಿಸಿದರೂ ಇದು ಹೊಸತು! (3)
11.ಬಣ್ಣಬಣ್ಣದ ದಾರದಿಂದ ಬಟ್ಟೆಯ ಮೇಲೆ ಮಾಡಿರುವ ಹೆಣಿಗೆ (3)
13.ಇದಿನ್ನೂ ಎಳೆಯ ಮಗು (4)
16.ಕೊಬ್ಬಿದ ಆನೆ (4)
17.ಲೀಲಾಜಾಲವಾಗಿ ನಡೆದ ಏಲಂ! (3)

ಮೇಲಿಂದ ಕೆಳಕ್ಕೆ
2.ವನದಲ್ಲಿ ಬಂದಿರುವ ಆದಾಯ (4)
3.ವಿಷ್ಣುವಿನ ವಾಹನ (3)
5.ಕಿವಿಯಿಲ್ಲಿ ಉಲ್ಟಾ ಕಾಣುತ್ತಿದೆ (2)
7.ಮನವಿಯಿಲ್ಲಿ ತಿರುವುಮುರುವಾಗಿದೆ (3)
8.ಅತಿಯಾದ ಬಾಯಾರಿಕೆ (4)
10.ಸೊಂಟದಿಂದ ಶುರುವಾದ ಕಂಪನ (3)
12.ಎಳ್ಳು ನೀರು ಬಿಡುವಿಕೆ (4)
14.ಬಂಗಾರ ಇಲ್ಲಿದೆ (3)
15.ಸುಗಮವಾಗಿ ಕಿತ್ತಿರುವ ಹೂವು (2)



4991ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ವಾತಾವರಣ 3.ವಿಧಾತ
5.ವಿಧಾನಸಭೆ 7.ಸಲಗ
8.ಹೊಸಬದುಕು
11.ಕನಸು 12.ವನಪಾಲಕ
14.ಮೆಟ್ಟಿಲು
15.ಆಮ್ಲಜನಕ

ಮೇಲಿಂದ ಕೆಳಕ್ಕೆ:
1.ವಾಸ್ತವಿಕ 2.ವಸನ
4.ತರಂಗ 6.ಸರಸ
7.ಸರಕು 8.ಹೊಲಸು
9.ದುರ್ಜನ 10.ಅಕಳಂಕ
11.ಕಡಿಮೆ 13.ಪಾರಜ

ಸುಡೊಕು 5378

					7		1	
8		7	6		4			
	2	9		8			5	6
	4			1		9		
		1	8	4	5		7	
7	5			9		3		
	8			7		4		3
			4		8		9	
9		4			2		6	

5377 ಸುಡೊಕು

7	1	4	2	5	6	8	9	3
3	2	8	1	4	9	6	7	5
6	9	5	7	3	8	4	1	2
2	8	3	6	7	4	1	5	9
9	7	1	5	8	3	2	4	6
4	5	6	9	1	2	3	8	7
8	4	9	3	6	7	5	2	1
5	6	2	4	9	1	7	3	8
1	3	7	8	2	5	9	6	4

ಆಡುವುದು ಹೇಗೆ?
ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

ಗುಂಡಣ್ಣ

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ | ಶನಿವಾರ ಜೂನ್ 18, 2022

ಶ್ರೀ ಶುಭಕೃತ್ ನಾಮ ಸಂವತ್ಸರ ಉತ್ತರಾಯಣ ಗ್ರೀಷ್ಮ ಋತು ತಿಥಿ: ಜ್ಯೇಷ್ಠ ಕೃಷ್ಣ ಪಂಚಮಿ ಗಂ. 24-20 **ನಕ್ಷತ್ರ:** ಶ್ರವಣ ಗಂ. 07-39 **ಯೋಗ:** ವೈಧೃತಿ ಗಂ. 13-50, **ಕರಣ:** ಕೌಲವ ಗಂ. 13-36, ಮಿಥುನ ಮಾಸದ 03 ನೇ ದಿನ.
ರಾಹುಕಾಲ: ಬೆಳಿಗ್ಗೆ 09:00 – 10:30
ಸೂರ್ಯೋದಯ: 06-08 **ಸೂರ್ಯಾಸ್ತ:** 06-55
ಮುಸ್ಲಿಂ ದಿನಾಂಕ: 18 ಜುಲ್ಕಾಯದ್
ಅದೃಷ್ಟ ಸಂಖ್ಯೆ: 1, 8

ಮೇಷ: ಜೀವನೋಪಾಯಕ್ಕೆ ಹಲವಾರು ಅವಕಾಶಗಳು ನಿಮಗೆ ಎದುರಾಗುವುದರಿಂದ ಗೊಂದಲಕ್ಕೆ ಈಡಾಗುವಿರಿ. ವಾಹನಚಾಲನಾ ವೃತ್ತಿಯವರಿಗೆ ಶುಭವಿದೆ. ರಾಸಾಯನಿಕ ವಸ್ತುಗಳಲ್ಲಿ ಕೆಲಸ ಮಾಡುವವರು ಜಾಗ್ರತರಾಗಿರಿ.

ವೃಷಭ: ಎಲ್ಲವನ್ನು ಮಾಡಬಲ್ಲೆನೆಂಬ ಹುಮ್ಮಸ್ಸು ನಿಮ್ಮಲ್ಲಿದೆ. ಇದರಿಂದಾಗಿ ಸುಲಭವಾಗಿ ಕೆಲಸ ಪೂರೈಸುವಿರಿ. ತಂದೆಯ ಅಭಿಪ್ರಾಯಗಳಿಗೆ ಬೆಲೆ ಕೊಡಿ. ಏಜೆನ್ಸಿಯಂತಹ ಉದ್ಯೋಗ ತೆರೆಯಲು ಸೂಕ್ತ ಸ್ಥಳದ ಹುಡುಕಾಟ.

ಮಿಥುನ: ಮನೆಯ ಕಟ್ಟಡದ ದುರಸ್ತಿ ಕಾರ್ಯಗಳು ಅನಿವಾರ್ಯವಾಗುತ್ತದೆ. ತಂಗಿಗಾಗಿ ಹಣವನ್ನು ಮತ್ತು ಸಮಯವನ್ನು ಖರ್ಚು ಮಾಡಬೇಕಾದ ಸಂದರ್ಭ ಬರುವುದು. ಕಬ್ಬಿಣ, ಸಿಮೆಂಟ್ ವ್ಯಾಪಾರಿಗಳಿಗೆ ಸಾಧಾರಣ ಲಾಭ.

ಕರ್ಕಾಟಕ: ವೃತ್ತಿ ಜೀವನವನ್ನು ಗಂಭೀರವಾಗಿ ಪರಿಗಣಿಸುವಿರಿ. ಮಕ್ಕಳ ವಿದ್ಯಾಭ್ಯಾಸ ನಿರಾತಂಕವಾಗಿ ಸಾಗುವುದು. ನಿಮಗೆ ಹೂಡಿಕೆಯಿಂದ ಬಂದ ಅಧಿಕ ಲಾಭದ ಸುದ್ದಿ ತಿಳಿದು ಸಂತೋಷಗೊಳ್ಳುವಿರಿ.

ಸಿಂಹ: ಮೆಚ್ಚಿದವರ ಜೊತೆಗೆ ಮದುವೆಯಾಗಲು ಮನೆಯ ಹಿರಿಯರಿಂದ ಒಪ್ಪಿಗೆ ಸಿಗಲಿದೆ. ಮನೆ ಕಟ್ಟುವ ಸಲುವಾಗಿ ಹಣಕಾಸಿನ ವ್ಯವಸ್ಥೆಯಲ್ಲಿ ತಂದೆಯವರಿಗೆ ಸಹಕರಿಸುವಿರಿ.

ಕನ್ಯಾ: ಸ್ನೇಹಿತರ ಸಂಪರ್ಕದಿಂದ ಜೀವನ ನಡೆಸಲು ಬೇಕಾದ ಉಪಾಯವನ್ನು ಹೊಂದುವಿರಿ. ವಾಣಿಜ್ಯ ಸಂಸ್ಥೆಯೊಂದರಲ್ಲಿ ಕೆಲಸ ಕೊಡಿಸಲು ಅಣ್ಣನ ಸಹಾಯ ಕೇಳಿದರೆ ಶುಭವಾಗುತ್ತದೆ.

ತುಲಾ: ಮಗಳಿಂದ ಶುಭ ಸುದ್ದಿಯೊಂದನ್ನು ತಿಳಿಯುವಿರಿ. ನಿಮ್ಮ ಆಲಸ್ಯ ನಿಮ್ಮ ಕುಟುಂಬದ ಅಭಿವೃದ್ಧಿಯನ್ನು ಹಾಳು ಮಾಡುತ್ತದೆ. ಆದ್ದರಿಂದ ಉತ್ಸಾಹಭರಿತರಾಗಿರಿ. ನಿಮ್ಮ ರಾಜಕೀಯ ಭವಿಷ್ಯಕ್ಕೆ ಮೋಡಕವಿದಂತೆ ಆಗುತ್ತದೆ.

ವೃಶ್ಚಿಕ: ದಿನಚರಿಯನ್ನು ನಿಯಮಿತವಾಗಿ ಇಟ್ಟುಕೊಳ್ಳುವ ಪ್ರಯತ್ನ ಮಾಡಿ. ಅರಕ್ಕೇರದ ಮೂರಕ್ಕಿಳಿಯದ ನಿಮ್ಮ ಆರ್ಥಿಕ ಸ್ಥಿತಿಯು ನಿಮ್ಮ ಆಸೆ ಆಕಾಂಕ್ಷೆಗಳಿಗೆ ಅಡ್ಡಿಮಾಡಲಿದೆ.

ಧನು: ಮಹಿಳೆಯರಿಗೆ ಋಣಾತ್ಮಕ ಚಿಂತನೆಯು ಬಂದು ಆರೋಗ್ಯವನ್ನು ಹಾಳು ಮಾಡುತ್ತದೆ. ಮನೆಯಲ್ಲಿ ಶಾಂತಿ ಹೋಮ ನಡೆಸಲು ಖರ್ಚಿನ ವಿಷಯ ಚರ್ಚೆಗೆ ಬರುವುದು.

ಮಕರ: ಎದುರಾಳಿಯವನದ್ದೇ ತಪ್ಪುಗಳಿದ್ದರೂ ಸದಾ ತಾಳ್ಮೆಯಿಂದ ವ್ಯವಹರಿಸಿ. ವಿವಾದಗಳಿಂದ ದೂರ ಉಳಿಯುವುದು ನಿಮಗೆ ಶೋಭೆ ತರಲಿದೆ. ನಿಮ್ಮ ದೇಹ ಪ್ರಕೃತಿಗೆ ಅನುಗುಣವಾಗಿ ವೈದ್ಯರ ಸಲಹೆಯನ್ನು ತಪ್ಪದೆ ಪಾಲಿಸಿ.

ಕುಂಭ: ಪರಿಶ್ರಮಕ್ಕೆ ತಕ್ಕಂಥಹ ಆದಾಯವಿಲ್ಲದೆ ಸೊರಗಿರುವ ನಿಮಗೆ, ನಿಮ್ಮ ಹಲವಾರು ಕನಸುಗಳು ಈಡೇರುವ ಅವಕಾಶವನ್ನು ಅಪರಿಚಿತ ವ್ಯಕ್ತಿ ತೋರುವರು.

ಮೀನ: ವಿವಾಹ ವಿಚಾರದಲ್ಲಿ ಅಂತಿಮವಾಗಿ ತೀರ್ಮಾನಕ್ಕೆ ಬರುವುದು ಉತ್ತಮವೆಂದು ಕಾಣುತ್ತದೆ. ರಸಗೊಬ್ಬರ ಮತ್ತು ಕೀಟನಾಶಕಗಳನ್ನು ವ್ಯಾಪಾರ ಮಾಡುವವರಿಗೆ ಲಾಭದ ಜೊತೆ ಆಯಾಸವೂ ಕಾಡಲಿದೆ.

ಸಂಕ್ಷಿಪ್ತ ಸುದ್ದಿ

ಹವಾಮಾನ ಬದಲಾವಣೆ: ಭಾರತದಲ್ಲಿ 50 ಲಕ್ಷ ಜನ ಸ್ಥಳಾಂತರ

ವಿಶ್ವಸಂಸ್ಥೆ (ಪಿಟಿಐ): ಹವಾಮಾನ ಬದಲಾವಣೆ ಮತ್ತು ಇತರ ವಿಪತ್ತುಗಳಿಂದ 2021ರಲ್ಲಿ ಭಾರತದಲ್ಲಿ ಸುಮಾರು 50 ಲಕ್ಷ ಜನರು ಆಂತರಿಕವಾಗಿ ವಿವಿಧೆಡೆ ಸ್ಥಳಾಂತರಗೊಂಡಿದ್ದಾರೆ ಎಂದು ವಿಶ್ವಸಂಸ್ಥೆ ವರದಿ ತಿಳಿಸಿದೆ. ಯುಎನ್‌ಎಚ್‌ಸಿಆರ್ ವಾರ್ಷಿಕ ವರದಿ ಪ್ರಕಾರ, ಕಳೆದ ವರ್ಷ ಹಿಂಸಾಚಾರ, ಮಾನವ ಹಕ್ಕು ಉಲ್ಲಂಘನೆ, ಆಹಾರ ಅಭದ್ರತೆ, ಹವಾಮಾನ ಬಿಕ್ಕಟ್ಟು, ಉಕ್ರೇನ್‌ನಲ್ಲಿನ ಯುದ್ಧ ಮತ್ತು ಆಫ್ರಿಕಾ- ಅಫ್ಗಾನಿಸ್ತಾನದಲ್ಲಿ ಇತರೆ ತುರ್ತು ಪರಿಸ್ಥಿತಿಗಳಿಂದ ಜಾಗತಿಕವಾಗಿ 10 ಕೋಟಿ ಜನರು ತಮ್ಮ ಮನೆ ತೊರೆಯುವಂತಾಗಿದೆ ಎಂದು ಹೇಳಿದೆ.

2021ರಲ್ಲಿ ವಿಪತ್ತು ಸಂದರ್ಭದಲ್ಲಿ ಅತಿದೊಡ್ಡ ಸ್ಥಳಾಂತರ ಚೀನಾ (60 ಲಕ್ಷ), ಫಿಲಿಪ್ಪೀನ್ಸ್ (57 ಲಕ್ಷ) ಮತ್ತು ಭಾರತದಲ್ಲಿ (49 ಲಕ್ಷ) ಸಂಭವಿಸಿವೆ ಎಂದು ವರದಿ ಉಲ್ಲೇಖಿಸಿದೆ.

ಅಮೆರಿಕ: 1,500 ವಿಮಾನಗಳ ಸಂಚಾರ ರದ್ದು

ವಾಷಿಂಗ್ಟನ್ (ಎಪಿ): ಅಮೆರಿಕದಲ್ಲಿ ಗುರುವಾರ ಸುಮಾರು 1,500ಕ್ಕೂ ಹೆಚ್ಚು ವಿಮಾನಗಳ ಸಂಚಾರವನ್ನು ಅಲ್ಲಿನ ವಿಮಾನಯಾನ ಸಂಸ್ಥೆಗಳು ರದ್ದು ಮಾಡಿವೆ. ನ್ಯೂಯಾರ್ಕ್‌ನ ಲಾಗಾರ್ಡಿಯಾ ವಿಮಾನ ನಿಲ್ದಾಣದಲ್ಲಿ ಮೂರನೇ ಒಂದು ಭಾಗದಷ್ಟು ಹಾಗೂ ನ್ಯೂಜೆರ್ಸಿ ಬಳಿಯ ನೆವಾರ್ಕ್ ಲಿಬರ್ಟಿ ವಿಮಾನ ನಿಲ್ದಾಣದಲ್ಲಿ ನಾಲ್ಕನೇ ಒಂದು ಭಾಗದಷ್ಟು ವಿಮಾನಯಾನವನ್ನು ರದ್ದುಗೊಳಿಸಲಾಗಿದೆ.

ಬೇಸಿಗೆ ರಜೆ ಹಿನ್ನೆಲೆಯಲ್ಲಿ ವಿಮಾನದಲ್ಲಿ ಪ್ರಯಾಣಿಸುವವರ ಸಂಖ್ಯೆ ಅಧಿಕವಾಗಿದೆ. ಆದರೆ ವಿಮಾನಯಾನ ಸಂಸ್ಥೆಗಳು ಪೈಲಟ್‌ಗಳೂ ಸೇರಿದಂತೆ ಕಾರ್ಮಿಕರ ಕೊರತೆ ಎದುರಿಸುತ್ತಿವೆ. ಈ ಕಾರಣಗಳಿಂದ ವಿಮಾನಯಾನ ಸಂಸ್ಥೆಗಳು ತಮ್ಮ ಯೋಜಿತ ವಿಮಾನಗಳ ನಿರ್ವಹಣೆ ಮಾಡಲು ಸಾಧ್ಯವಾಗುತ್ತಿಲ್ಲ ಎಂದು ಮೂಲಗಳು ತಿಳಿಸಿವೆ.

ಉಕ್ರೇನ್‌ಗಾಗಿ ನೊಬೆಲ್ ಮಾರಲು ಮುಂದಾದ ರಷ್ಯಾ ಪತ್ರಕರ್ತ

ಮಾಸ್ಕೊ (ರಾಯಿಟರ್ಸ್/ ಎಎಫ್‌ಪಿ): ಉಕ್ರೇನ್ ನಿರಾಶ್ರಿತರಿಗೆ ನೆರವಾಗುವ ಉದ್ದೇಶದಿಂದ ರಷ್ಯಾದ ನೊಬೆಲ್ ಶಾಂತಿ ಪುರಸ್ಕೃತ, ಪತ್ರಕರ್ತ ಡಿಮಿಟ್ರಿ ಮುರಾಟೊವ್ ಅವರು ತಮ್ಮ ನೊಬೆಲ್ ಪಾರಿತೋಷಕವನ್ನೇ ಮಾರಲು ಮುಂದಾಗಿದ್ದಾರೆ. ಮುರಾಟೊವ್ ಅವರ ನೊಬೆಲ್ ಪದಕವನ್ನು ಇದೇ 20ರ ವಿಶ್ವ ನಿರಾಶ್ರಿತರ ದಿನದಂದು ಬಹುಮಾನ ಸಮಿತಿಯ ಒಪ್ಪಿಗೆಯೊಂದಿಗೆ ಹರಾಜು ಇಡಲಾಗುತ್ತದೆ.

ಉಕ್ರೇನ್‌ಗೆ ಯುಇ ಸದಸ್ಯತ್ವ (ಕೀವ್ ವರದಿ): ರಷ್ಯಾ ಆಕ್ರಮಣ ಆರಂಭಿಸಿದ ನಾಲ್ಕು ತಿಂಗಳ ನಂತರ ಉಕ್ರೇನ್‌ಗೆ ಯುರೋಪ್ ಒಕ್ಕೂಟದ (ಯುಇ) ಸದಸ್ಯತ್ವ ಪಡೆಯುವುದಕ್ಕೆ ಯುರೋಪಿಯನ್ ಕಮಿಷನ್ ಬೆಂಬಲಿಸಿರುವುದಕ್ಕೆ ಶ್ಲಾಘಿಸಿರುವ ಉಕ್ರೇನ್ ಅಧ್ಯಕ್ಷ ವೊಲೊಡಿಮಿರ್ ಝೆಲೆನ್‌ಸ್ಕಿ ಸಂತಸಪಟ್ಟಿದ್ದಾರೆ.

ಎಂಒಪಿ ರಸಗೊಬ್ಬರ ಹಗರಣ • ಸಿಬಿಐನಿಂದ ದಾಳಿ

ಗೆಹಲೋತ್ ಸಹೋದರನಿಗೆ ಸಂಕಷ್ಟ

ನವದೆಹಲಿ/ಜೈಪುರ (ಪಿಟಿಐ): ಎಂಒಪಿ ರಸಗೊಬ್ಬರ ಹಗರಣ ಪ್ರಕರಣ ಸಂಬಂಧ ರಾಜಸ್ಥಾನದ ಮುಖ್ಯಮಂತ್ರಿ ಅಶೋಕ್ ಗೆಹಲೋತ್ ಅವರ ಸಹೋದರ ಸೇರಿ 14 ಮಂದಿಯ ನಿವಾಸಗಳ ಮೇಲೆ ಸಿಬಿಐ ಶುಕ್ರವಾರ ದಾಳಿ ನಡೆಸಿ ಶೋಧ ನಡೆಸಿದೆ.

ರೈತರಿಗೆ ವಿತರಿಸಬೇಕಿದ್ದ ಎಂಒಪಿ (ಪೊಟ್ಯಾಸಿಯಂ ಕ್ಲೋರೈಡ್ ಅಥವಾ ಮ್ಯೂರಿಯೇಟ್ ಆಫ್ ಪೊಟ್ಯಾಶ್) ರಸಗೊಬ್ಬರವನ್ನು ಬೇರೆ ದೇಶಗಳಿಗೆ ರಫ್ತು ಮಾಡಿರುವ ಆರೋಪ ಸಂಬಂಧ ಅಶೋಕ್ ಗೆಹಲೋತ್ ಸಹೋದರ ಮತ್ತು ಕಾಂಗ್ರೆಸ್ ನಾಯಕ ಅಗ್ರಸೇನ್ ಗೆಹಲೋತ್ ಮತ್ತು ಇತರ 14 ಆರೋಪಿಗಳು ಹಾಗೂ ಇವರ ಒಡೆತನದ ಕಂಪನಿಗಳ ವಿರುದ್ಧ ಸಿಬಿಐ ಪ್ರಕರಣ ದಾಖಲಿಸಿಕೊಂಡಿದೆ. ಅಗ್ರಸೇನ್ ಅವರ ಜೋಧ್‌ಪುರದ ಮಂಡೋರ್ ನಲ್ಲಿರುವ ನಿವಾಸ ಮತ್ತು ಇವರಿಗೆ ಸಂಬಂಧಿಸಿದ ಮೂರು ರಾಜ್ಯಗಳಲ್ಲಿನ 16 ಸ್ಥಳಗಳಲ್ಲಿ ಸಿಬಿಐ ಅಧಿಕಾರಿಗಳು ಶೋಧ ಕಾರ್ಯಾಚರಣೆ ನಡೆಸಿದರು.

ಎಂಒಪಿ ರಸಗೊಬ್ಬರವನ್ನು ಸರ್ಕಾರ ಶೇ 80ರಷ್ಟು ಸಬ್ಸಿಡಿಯಲ್ಲಿ ರೈತರಿಗೆ ವಿತರಿಸುತ್ತಿದ್ದು, ಎಂಒಪಿ ಆಮದು ಮಾಡಿಕೊಳ್ಳುವಲ್ಲಿ ಭ್ರಷ್ಟಾಚಾರ ನಡೆದಿದೆ. ರೈತರಿಗೆ ವಿತರಿಸಲು ಆಮದು ಮಾಡಿಕೊಂಡ ಎಂಒಪಿಯನ್ನು ಕೈಗಾರಿಕಾ ಬಳಕೆಯ ಉಪ್ಪು (ಫ್ಲೋರ್ಸ್‌ಪಾರ್) ಆಗಿ ಮರು ಪ್ಯಾಕ್ ಮಾಡಲಾಗಿದೆ. ಆಗ್ನೇಯ ಏಷ್ಯಾದ ದೇಶಗಳು, ಸೌದಿ ಅರೇಬಿಯಾ ಮತ್ತು ಇತರ ದೇಶಗಳ ಮಾರುಕಟ್ಟೆಗಳಿಗೆ ರಫ್ತು ಮಾಡಲಾಗಿದೆ ಎಂದು ಸಿಬಿಐ ಆರೋಪಿಸಿದೆ.

ಇದು ಸೇಡಿನ ರಾಜಕಾರಣ: ಸಿಬಿಐ ದಾಳಿಗೆ ಕಟುವಾಗಿ ಪ್ರತಿಕ್ರಿಯಿಸಿರುವ ಕಾಂಗ್ರೆಸ್, 'ಇದು ಎಲ್ಲ ಮಿತಿಗಳನ್ನು ಮೀರಿದ ಸೇಡಿನ ರಾಜಕಾರಣ' ಎಂದು ಕಾಂಗ್ರೆಸ್ ಮುಖ್ಯ ವಕ್ತಾರ ಜೈರಾಮ್ ರಮೇಶ್ ಟ್ವಿಟರ್‌ನಲ್ಲಿ ಹರಿಹಾಯ್ದಿದ್ದಾರೆ.

ಅಂತಿಮವಾಗಿ ಬಿಜೆಪಿಗೆ ಹಾನಿ

'ನಾನು ದೆಹಲಿಯಲ್ಲಿ ಸಕ್ರಿಯವಾಗಿದ್ದರೆ ಅಥವಾ ರಾಹುಲ್ ಗಾಂಧಿಗಾಗಿ ಚಳವಳಿಯಲ್ಲಿ ಭಾಗವಹಿಸಿದ್ದರೆ, ನನ್ನ ಸಹೋದರನ ಮೇಲೆ ಏಕೆ ಸೇಡು ತೀರಿಸಿಕೊಳ್ಳಬೇಕು? ಇದು ನ್ಯಾಯೋಚಿತವಲ್ಲ. ಇದರಿಂದ ನಾವು ಹೆದರುವುದಿಲ್ಲ. ಆದರೆ, ಕೇಂದ್ರದ ಈ ಧೋರಣೆ ಅಂತಿಮವಾಗಿ ಬಿಜೆಪಿಗೆ ಮಾತ್ರ ಹಾನಿ ಮಾಡುತ್ತದೆ' ಎಂದು ಅಶೋಕ್ ಗೆಹಲೋತ್ ಹೇಳಿದರು.

ಉಗ್ರ ಮಕ್ಕಿಗೆ ಭಯೋತ್ಪಾದಕ ಪಟ್ಟ: ಚೀನಾ ಅಡ್ಡಿ

ನವದೆಹಲಿ (ಪಿಟಿಐ): ಪಾಕಿಸ್ತಾನ ಮೂಲದ ಅಬ್ದುಲ್ ರೆಹಮಾನ್ ಮಕ್ಕಿಯನ್ನು ಅಂತರರಾಷ್ಟ್ರೀಯ ಭಯೋತ್ಪಾದಕ ಎಂದು ಘೋಷಿಸಬೇಕೆಂಬ ಭಾರತ ಹಾಗೂ ಅಮೆರಿಕದ ಜಂಟಿ ಪ್ರಸ್ತಾವಕ್ಕೆ ತಡೆಯೊಡ್ಡಲು ಚೀನಾ ನಿರ್ಧರಿಸಿದೆ. ಈ ನಡೆ ಭಯೋತ್ಪಾದನೆಗೆ ಸಂಬಂಧಿಸಿ ಚೀನಾದ ದ್ವಂದ್ವ ನೀತಿಯನ್ನು ಬಹಿರಂಗಗೊಳಿಸಿದೆ ಎಂದು ಕೇಂದ್ರ ಸರ್ಕಾರ ಶುಕ್ರವಾರ ಹೇಳಿದೆ.

ವಿಶ್ವಸಂಸ್ಥೆಯ ಭಯೋತ್ಪಾದನಾ ನಿಗ್ರಹ ಸಮಿತಿಯ ಮುಂದೆ ಮಂಡಿಸಿರುವ ಈ ಪ್ರಸ್ತಾವವನ್ನು ವಿರೋಧಿಸುವ ನಿರ್ಧಾರವನ್ನು ಚೀನಾ ಕೈಗೊಂಡಿದೆ. ಹೀಗಾಗಿ, ಭಯೋತ್ಪಾದನೆ ನಿಗ್ರಹಕ್ಕಾಗಿ ತಾನು ಹೋರಾಡುತ್ತಿರುವುದಾಗಿ ಚೀನಾ ಹೇಳುತ್ತಿದ್ದರೂ, ತನ್ನ ಹೇಳಿಕೆಗೆ ವಿರುದ್ಧವಾಗಿಯೇ ಆ ರಾಷ್ಟ್ರ ನಡೆದುಕೊಳ್ಳುತ್ತಿದೆ ಎಂದು ಮೂಲಗಳು ಹೇಳಿವೆ.

ನಿರ್ಬಂಧ ಹೇರುವುದರಿಂದ ಭಯೋತ್ಪಾದಕರನ್ನು ರಕ್ಷಿಸುವ ಚೀನಾದ ಕ್ರಮವು ಅದರ ವಿಶ್ವಾಸಾರ್ಹತೆಗೇ ಧಕ್ಕೆ ತರುತ್ತದೆ. ಅಲ್ಲದೇ, ಹೆಚ್ಚುತ್ತಿರುವ ಭಯೋತ್ಪಾದನೆಯಿಂದ ಆ ದೇಶವೂ ಹೆಚ್ಚು ಅಪಾಯ ಎದುರಿಸಲಿದೆ ಎಂದು ಹೇಳಿವೆ.

ಸಮರ್ಥನೆ: ತನ್ನ ನಿರ್ಧಾರವನ್ನು ಸಮರ್ಥಿಸಿಕೊಂಡಿರುವ ಚೀನಾ, 'ಈಗಾಗಲೇ ಜಾರಿಯಲ್ಲಿರುವ ನಿಯಮಗಳ ಆಧಾರದಲ್ಲಿಯೇ ತಾನು ಈ ನಿರ್ಧಾರ ಕೈಗೊಂಡಿರುವುದಾಗಿ' ಹೇಳಿದೆ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧೆ: ತಡೆಗೆ ಚುನಾವಣಾ ಆಯೋಗ ಒತ್ತಾಯ

ನವದೆಹಲಿ (ಪಿಟಿಐ): ಒಬ್ಬ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಲ್ಲಿ ಸ್ಪರ್ಧಿಸುವುದನ್ನು ತಡೆಯುವುಕ್ಕಾಗಿ ಕಾನೂನಿಗೆ ತಿದ್ದುಪಡಿ ತರಬೇಕು ಎಂಬ ಪ್ರಸ್ತಾವವನ್ನು ಚುನಾವಣಾ ಆಯೋಗವು ಮುಂದಿಟ್ಟಿದೆ.

ಒಂದು ವೇಳೆ ತಿದ್ದುಪಡಿ ತರಲು ಸಾಧ್ಯವಾಗದಿದ್ದರೆ ಒಂದು ಕ್ಷೇತ್ರವನ್ನು ತೆರವು ಮಾಡುವವರಿಗೆ ಭಾರಿ ಮೊತ್ತದ ದಂಡವನ್ನು ವಿಧಿಸಬೇಕು ಎಂದೂ ಒತ್ತಾಯಿಸಿದೆ.

ಕಾನೂನು ಸಚಿವಾಲಯದ ಶಾಸಕಾಂಗ ಕಾರ್ಯದರ್ಶಿ ಜತೆಗೆ ಈಚೆಗೆ ನಡೆದ ಸಂವಾದದ ವೇಳೆ ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರು, 2004ರಲ್ಲಿಯೇ ಮುಂದಿಟ್ಟಿದ್ದ ಪ್ರಸ್ತಾವವನ್ನು ಮತ್ತೆ ನೆನಪಿಸಿ, ಅದನ್ನು ಜಾರಿಗೆ ತರಲು ಒತ್ತಾಯಿಸಿದ್ದಾರೆ ಎಂದು ಆಯೋಗದ ಮೂಲಗಳು ತಿಳಿಸಿವೆ.

ಚುನಾವಣಾ ಆಯೋಗಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ನಿಭಾಯಿಸಲು ಶಾಸಕಾಂಗ ಇಲಾಖೆಯು ಸರ್ಕಾರದಲ್ಲಿ ನೋಡಲ್ ಏಜೆನ್ಸಿಯಾಗಿದೆ.

ಈಗಿನ ಚುನಾವಣಾ ಕಾನೂನಿನ ಪ್ರಕಾರ ಒಬ್ಬ ಅಭ್ಯರ್ಥಿಯು ಸಾರ್ವತ್ರಿಕ ಚುನಾವಣೆ, ಉಪಚುನಾವಣೆ ಅಥವಾ ದ್ವೈವಾರ್ಷಿಕ ಚುನಾವಣೆಗಳಲ್ಲಿ ಎರಡು ಕ್ಷೇತ್ರಗಳಿಂದ ಸ್ಪರ್ಧಿಸಲು ಅವಕಾಶವಿದೆ. ಒಬ್ಬ ಅಭ್ಯರ್ಥಿಯು ಒಂದಕ್ಕಿಂತ ಹೆಚ್ಚು ಕ್ಷೇತ್ರಗಳಿಂದ ಆಯ್ಕೆಯಾದರೆ, ಆ ಅಭ್ಯರ್ಥಿಯು ಒಂದು ಕ್ಷೇತ್ರವನ್ನು ಮಾತ್ರ ಪ್ರತಿನಿಧಿಸಬಹುದಾಗಿದೆ.

1996ರಲ್ಲಿ ಪ್ರಜಾಪ್ರತಿನಿಧಿ ಕಾಯ್ದೆಗೆ ತಿದ್ದುಪಡಿ ಮಾಡಲಾಗಿದ್ದು, ಒಬ್ಬ ಅಭ್ಯರ್ಥಿಗೆ ಎರಡು ಸ್ಥಾನಗಳಿಗಿಂತ ಹೆಚ್ಚಿನ ಕ್ಷೇತ್ರಗಳಲ್ಲಿ ಸ್ಪರ್ಧಿಸದಂತೆ ನಿರ್ಬಂಧಿಸಲಾಗಿದೆ. ಈ ತಿದ್ದುಪಡಿಗೂ ಮುನ್ನ ಒಬ್ಬ ಅಭ್ಯರ್ಥಿಗೆ ಇಷ್ಟೇ ಕ್ಷೇತ್ರಗಳಿಂದ ಸ್ಪರ್ಧಿಸಬಹುದು ಎಂಬ ಮಿತಿ ಇರಲಿಲ್ಲ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ನಿಧನ

ಶ್ರೀ ಎಚ್. ಸಿ. ಹನುಮಯ್ಯ
ಹಿರಿಯ ವಕೀಲರು
ಇವರು ದಿನಾಂಕ 17-06-2022 ರಂದು ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಇವರ ಅಂತ್ಯಕ್ರಿಯೆಯನ್ನು ದಿನಾಂಕ 18-06-2022 ರಂದು ಸ್ವಗ್ರಾಮ ಹನುಮಂತೇಗೌಡನದೊಡ್ಡಿ, ಹರಿಸಂದ್ರ ಪೋಸ್ಟ್, ಮಂಚಿನಬೆಲೆ ರಸ್ತೆ, ರಾಮನಗರ.
ಸಮಯ: ಬೆಳಿಗ್ಗೆ 11:00 ಗಂಟೆಗೆ ನೆರವೇರಿಸಲಾಗುವುದು.
ಇಂತಿ ದುಃಖತಪ್ತ: ಕುಟುಂಬದವರು

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ಕ್ಲಾಸಿಫೈಡ್ಸ್ WEEKEND CORNER

ಇಡೀ ವಿಶ್ವದಲ್ಲಿ ನಂ.1 ಚಿಕಿತ್ಸೆ
ಶ್ರೀ ಶಕ್ತಿ ಹೆಲ್ತ್ ಕೇರ್ (ರಿ.)
ಕೀಲು ಮೂಳೆಗಳ ಚಿಕಿತ್ಸಾಲಯ ಉಚಿತವಾಗಿ ಕೊಡಲಾಗುವುದು.
ಮೊ: 9036316959 | ಪ್ರತಿದಿನ ಬೆಳಗ್ಗೆ 10ರಿಂದ ಸಂಜೆ 5ರವರೆಗೆ
ವಿಳಾಸ : ಸ್ವಸ್ತಿಕ್ ಕಾಂಪ್ಲೆಕ್ಸ್, ಪೊಲೀಸ್ ಠಾಣೆ ಎದುರು, ಶೇಷಾದ್ರಿಪುರಂ, ಬೆಂಗಳೂರು–560 020.

ಸ್ಪರ್ಧಾಮಿತ್ರ ACADEMY
IAS / KAS Prelims & Mains Exam
(By: Hyderabad Faculty)
PSI / PDO / FDA
RRB / IBPS / BNK-PO
ADMISSIONS OPEN
9535111166 / 9535111188

homefirst
ಆದಾಯದ ಪುರಾವೆ ಇಲ್ಲದಿದ್ದರೂ HOME LOAN!
740 6949 900

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ

Astrology

ಶ್ರೀ ಜೈಶಂಕರಿ ಜ್ಯೋತಿಷ್ಯ ಕೇಂದ್ರ. ವಿದ್ಯೆ, ಉದ್ಯೋಗ, ಸ್ತ್ರೀ-ಪುರುಷ ವಶೀಕರಣ, ಇಷ್ಟಪಟ್ಟವರು ನಿಮ್ಮಂತಾಗಲು, ಕೇವಲ ಮೂರು ದಿನಗಳಲ್ಲಿ ಶಾಶ್ವತವಾದ ಪರಿಹಾರ. PH:9980057857 (ಫೋನಿನ ಮುಖಾಂತರ ಪರಿಹಾರ ಮಾಡಿಕೊಡುತ್ತಾರೆ).

ಒಂದೇ ಕರೆಯಲ್ಲಿ100% ಗ್ಯಾರಂಟಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ ಪಂಡಿತ್. ಕೃಷ್ಣಪ್ರಸಾದ್:ಉಚಿತಭವಿಷ್ಯ ಖಚಿತಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು, ಶ್ರೀಕ್ಷೇತ್ರಹೊರನಾಡು: 7022443071

ಶ್ರೀರಾಘವೇಂದ್ರಸ್ವಾಮಿ ಜ್ಯೋತಿಷ್ಯಾಲಯ ವಶೀಕರಣ ಸ್ಪೆಷಲಿಸ್ಟ್ ಪಂಡಿತ್.ರಾಘವೇಂದ್ರ ಗುರೂಜಿ ನಿಮ್ಮ ಯಾವುದೇ ಸಮಸ್ಯೆಗಳಿದ್ದರೂ ಫೋನಿನ ಮೂಲಕ ಪರಿಹಾರ. ದೇವಸ್ಥಾನ ಪಕ್ಕ, ಮಂತ್ರಾಲಯ: 9880788899

"ಶ್ರೀಭಗವತಿ ಜ್ಯೋತಿಷ್ಯಾಲಯ" ಸ್ತ್ರೀಪುರುಷ ವಶೀಕರಣ, ಗಂಡ ಹೆಂಡತಿ ಕಲಹ, ಉದ್ಯೋಗ, ಪ್ರೇಮವಿಚಾರ, ಇನ್ನಿತರ ಸಮಸ್ಯೆಗಳಿಗೆ 100% ಪರಿಹಾರ. ಪಂಡಿತ್ ಪರಶುರಾಮಶಾಸ್ತ್ರೀ. 8618839027

ವಾಹನ

Four Wheelers Selling

TATA

ಉದ್ಯೋಗಾವಕಾಶ

Wanted

ಕರ್ನಾಟಕದಾದ್ಯಂತ ಕೆಲಸ ಮಾಡಲು ಡಿಪ್ಲೊಮ ಸಿವಿಲ್ ಇಂಜಿನಿಯರ್ ಬೇಕಾಗಿದ್ದಾರೆ. ಹೊಸಬರಿಗೆ ಆದ್ಯತೆ ನೀಡಲಾಗುವುದು. ವಸತಿ ಇರುತ್ತದೆ. ಆಸಕ್ತರು ಸಂಪರ್ಕಿಸಿ: 9341301490

Drivers

ಪ್ರಮುಖ ಟ್ಯಾಕ್ಸಿ ಕಂಪನಿಗೆ ಡ್ರೈವರ್ ಬೇಕಾಗಿದ್ದಾರೆ (ತಕ್ಷಣವೇ ಸೇರುವಿಕೆ) ಬೆಂಗಳೂರಿನಾದ್ಯಂತ ಮುಕ್ತ ಸ್ಥಾನ ಆಟೋಮ್ಯಾಟಿಕ್ ಕಾರ್: ಒತ್ತಡ ಮುಕ್ತ ಚಾಲನೆ ಸಂಬಳ: 18000- 20000 ಪ್ರತಿ ತಿಂಗಳು + ಕುಟುಂಬಕ್ಕೆ ಖಾಸಗಿ ವಿಮೆ + ಮಕ್ಕಳ ಶೈಕ್ಷಣಿಕ ಬೆಂಬಲ ನೀಡಲಾಗುವುದು ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ: 08047106868

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ, ಮನೆಯಲ್ಲೆ ಕುಳಿತು,ಬುಕ್ ಬರೆಯುವ ಮೂಲಕ ತಿಂಗಳಿಗೆ 14,000- 16,000/-ರ ವರೆಗೆ ಸಂಪಾದಿಸಿ.(ಕೊರಿಯರ್ ಇದೆ).8884686861, 8884686860.

ಕನ್ನಡ ಮತ್ತುಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000- 15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

General

ಕರ್ನಾಟಕದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80000. 7760014526, 7795199673

ವೈಯಕ್ತಿಕ

Change of Name

ನಾನು, ಶಶಿಧರ್ M S/O ತಿಮ್ಮಪ್ಪ ಚೌದ್ರಿ ಮುಮ್ಮನೀಡಿ, ಹುಟ್ಟಿದ ದಿನಂಕ 25031982, ವಿಳಾಸ 101 1st Flr, ನೈಬರ್ಹುಡ್ ಎಲ್ಲೈಟ್, ತೇಜ್‌ಪುಂಜ್ ರಸ್ತೆ, ವೆಂಕಟೇಶಪುರ, ಯಲಹಂಕ ಹೋಬಳಿ, ಬೆಂಗಳೂರು 77 ರಲ್ಲಿ ವಾಸಿಸುತ್ತಿದ್ದು, ನನ್ನ ಹೆಸರನ್ನು ದಿನಾಂಕ 16062022 ಶಶಿಧರ್ ಮುಮ್ಮನೀಡಿ ಎಂದು ಬದಲಾಯಿಸಿದ್ದೇನೆ.

ಬಿಲ್ಡರ್ ಎಸೆನ್ಷಿಯಲ್

Water Proofing

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಟ್ಟಡದ ಮೇಲ್ಛಾವಣಿ, ಸಂಪ್,ಟ್ಯಾಂಕ್, ಬಾತ್‌ರೂಂ ಹಾಗೂ ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಪ್ರವಾಸ

Travel

22.07.2022ರಿಂದ 12ದಿನಗಳು ವಿಮಾನ ಮತ್ತು ಎಸಿ ಬಸ್ಸು ಹಾಗೂ ಎಸಿ ರೂಂಸಹಿತ 45000/-...ಅಮರನಾಥ್, ವೈಷ್ಣೋದೇವಿ,ಕಾಶ್ಮೀರ,ದೆಹಲಿ, ಅಮೃತಸರ,ವಾಘಬಾರ್ಡರ್. ಏಷ್ಯನ್ ಟ್ರಾವೆಲ್ ಲೈನ್ಸ್,163/3 ಆರ್.ವಿ.ರಸ್ತೆ,ಬೆಂಗಳೂರು 8105657052, 9480182865.

Pilgrimage Tours

ಶ್ರೀಮಹಾಲಕ್ಷ್ಮೀ ಟ್ರಾವೆಲ್ಸ್. 09/07/22 ಪುರಿ ಜಗನ್ನಾಥ್, ಕೊನಾರ್ಕ್, ಭುವನೇಶ್ವರ. 12/07/22 ಮಧ್ಯಪ್ರದೇಶ 2 ಜ್ಯೋತಿರ್ಲಿಂಗ ಉಜ್ಜಯಿನ ಮಹಾಕಾಲೇಶ್ವರ್, ಓಂಕಾರೇಶ್ವರ. 9964527782

ಓದುಗರ ಗಮನಕ್ಕೆ

DH DECCAN HERALD ಪ್ರಜಾವಾಣಿ
Classifieds EDUCATION SPECIAL
SPECIAL RATES FOR
Admission Notice,
Education Success
Congratulation Ads
For More Details Contact:
Santhosh Kumar : 9880856233
Jerry Louis : 9731810277
Ravichandra : 9901641752
Vishal GM : 9845114560
Tanveer : 9886213331
Email : dhclassifieds@deccanherald.co.in

ಕರ್ನಾಟಕ ಸರ್ಕಾರ
ಕಾರ್ಯನಿರ್ವಾಹಕ ಇಂಜೀಯರರು, ಲೋಕೋಪಯೋಗಿ ಇಲಾಖೆ, ಕಲಬುರಗಿ ವಿಭಾಗ ಕಲಬುರಗಿ

ಸಂ.ಕಾನಿಅ/ಲೋಇ/ಕವಿ/ತಾಶಾ–3/.ಟೆಂಡರ್.ಅಧಿಸೂಚನೆ/2022–23/1577 ದಿನಾಂಕ: 13.06.2022

:: ಅಲ್ಪಾವಧಿ ಟೆಂಡರ್ ಅಧಿಸೂಚನೆ ::

1) ಕಾಮಗಾರಿ ವಿವರ : ಕಾರ್ಯನಿರ್ವಾಹಕ ಇಂಜೀಯರರು, ಲೋಕೋಪಯೋಗಿ, ಇಲಾಖೆ, ಕಲಬುರಗಿ ವಿಭಾಗ ಕಾರ್ಯಲಯದಿಂದ ಲೆಕ್ಕ ಶೀರ್ಷಿಕೆ 5054 ಅಪೆಂಡಿಕ್ಸ್–ಇ, 5054–ಎಸ್.ಸಿ.ಪಿ ಹಾಗೂ 8443 ಯೋಜನೆಯಡಿಯಲ್ಲಿ ಒಟ್ಟು (08) ಕಾಮಗಾರಿಗಳ ವರ್ಕ ಇಂಡೆಂಟ್ ಸಂಖ್ಯೆ: 152591, 152749, 152197, 152228, 152614, 152061, 152062 & 152063 ಗಳಿಗೆ e-procurement ಮುಖಾಂತರ ಟೆಂಡರ ಕರೆಯಲಾಗಿದೆ. 2) ಕಾಮಗಾರಿ ಅಂದಾಜು ಮೊತ್ತ: **ಕನಿಷ್ಠ ರೂ. 53.04 ಲಕ್ಷಗಳು ಗರಿಷ್ಠ ರೂ. 418.16 ಲಕ್ಷಗಳು,** 3) ಗುತ್ತಿಗೆದಾರರ ಅರ್ಹತೆ ವಿವರ: "ಈ ಕಾಮಗಾರಿಗೆ ಟೆಂಡರ ಸಲ್ಲಿಸುವವರು, "ಕ್ಲಾಸ್–I: ಯಾವುದೇ ಮೊತ್ತಕ್ಕೆ ಭಾಗವಹಿಸಬಹುದು, "ಕ್ಲಾಸ್–II: ಕಾಮಗಾರಿ ಮೊತ್ತ ರೂ. 5.00 ಕೋಟಿಯವರೆಗೆ, "ಕ್ಲಾಸ್–III: ಕಾಮಗಾರಿ ಮೊತ್ತ ರೂ. 2.00 ಕೋಟಿಯವರೆಗೆ "ಲೋಕೋಪಯೋಗಿ ಇಲಾಖೆಯಲ್ಲಿ ನೊಂದಾಯಿತ ಗುತ್ತಿಗೆದಾರರಾಗಿರಬೇಕು." 4) ಟೆಂಡರ ಅರ್ಜಿಯ ಬೆಲೆ ಹಾಗೂ ಇ.ಎಮ್.ಡಿ. ಮೊತ್ತದ ವಿವರ: ಅರ್ಜಿ ಬೆಲೆ e-procurement ನಂತೆ, ಇ.ಎಮ್.ಡಿ. ಕನಿಷ್ಠ ರೂ. 1,10,000.00 ಗರಿಷ್ಠ ರೂ. 6,27,000.00, 5) ಪ್ರೀ ಬಿಡ್ ಮಿಟಿಂಗ : **27/06/2022 (11.00 ಗಂಟೆ),** 6) ಟೆಂಡರ ಬಗ್ಗೆ ಮಾಹಿತಿ ಹಾಗು ಸ್ಪಷ್ಟೀಕರಣ ಕೋರುವ ಕೊನೆಯ ದಿನಾಂಕ: **29/06/2022 (17.30 ಗಂಟೆ),** 7) ಟೆಂಡರ ಸಲ್ಲಿಸುವ ಕೊನೆಯ ದಿನಾಂಕ: **30/06/2022 (16.00 ಗಂಟೆ),** 7) ತಾಂತ್ರಿಕ ಬಿಡ್ ತೆರವುಗೊಳಿಸಿವ ದಿನಾಂಕ: **01/07/2022 (16.30 ಗಂಟೆ),** 8) ಆರ್ಥಿಕ ಬಿಡ್ ತೆರೆವುಗೋಳಿಸುವ ದಿನಾಂಕ: **04/07/2022 (16.30 ಗಂಟೆ),** 9) ಹೆಚ್ಚಿನ ವಿವರಗಳಿಗೆ: ಕಾರ್ಯನಿರ್ವಾಹಕ ಇಂಜೀಯರರು, ಲೋಕೋಪಯೋಗಿ, ಇಲಾಖೆ, ವಿಭಾಗ ಕಲಬುರಗಿ ಕಚೇರಿ, 10) ಅಂತರ್ಜಾಲ ತಾಣದ ವಿಳಾಸ : www.e-proc.karnataka.gov.in

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರರು, ಲೋಕೋಪಯೋಗಿ ಇಲಾಖೆ ವಿಭಾಗ ಕಲಬುರಗಿ

ವಾ.ಸಾ.ಸಂ.ಇ/ಕಲಬುರಗಿ/269/ಎಂ.ಸಿ.&ಎ/2022–23

ಕರ್ನಾಟಕ ಸರ್ಕಾರ
ಪುರಸಭಾ ಕಾರ್ಯಾಲಯ, ಪಿರಿಯಾಪಟ್ಟಣ ಮೈಸೂರು ಜಿಲ್ಲೆ –571107
TOWN MUNICIPAL COUNCIL, PERIYAPATNA MYSORE DIST., – 571107
ಈ–ಮೇಲ್ :itstaff_ulb_periyapatna@yahoo.com Phone(O): 08223-273036
ಸಂ:ಪಿಪುಸ/ತಾಂತ್ರಿಕ/ಜೆಇ.2/ಟೆಂಡರ್–03/2022–23 ದಿನಾಂಕ: 13.06.2022

ಟೆಂಡರ್ ಪ್ರಕಟಣೆ – (ಕರ್ನಾಟಕ ಸರ್ಕಾರದ ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಮಾತ್ರ)

ಈ ಮೂಲಕ ಪ್ರಕಟಿಸುವುದೇನೆಂದರೆ ಪಿರಿಯಾಪಟ್ಟಣ ಪುರಸಭಾ ವ್ಯಾಪ್ತಿಯಲ್ಲಿ 2016–17ನೇ ಸಾಲಿನ ಎಸ್.ಎಫ್.ಸಿ. ವಿಶೇಷ (ಉಳಿಕೆ) ಅನುದಾನಲ್ಲಿ ಕಾಮಗಾರಿಗಳನ್ನು ನಿರ್ವಹಿಸಲು, ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿಸಲ್ಪಟ್ಟಿರುವ ಅರ್ಹ ಗುತ್ತಿಗೆದಾರರಿಂದ ಸ್ಟಾಂಡರ್ಡ್ ಟೆಂಡರ್ ಡಾಕ್ಯುಮೆಂಟ್ (ಕೆ.ಡಬ್ಲ್ಯೂ–3) ನಿಯಮಾವಳಿಯಂತೆ ಕನಿಷ್ಠ ದರಗಳನ್ನು ಆಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ತಮಗೆ ಬೇಕಾದ ಟೆಂಡರ್ ವಿವರಗಳನ್ನು **www.eproc.karnataka.gov.in** ವೆಬ್‌ಸೈಟ್ ಮೂಲಕ ಪಡೆದುಕೊಂಡು ನಂತರ ಭರ್ತಿ ಮಾಡಿದ ಟೆಂಡರ್‌ಗಳನ್ನು ಇ–ಪ್ರೊಕ್ಯುರ್‌ಮೆಂಟ್ ಪೋರ್ಟಲ್ ಮುಖಾಂತರ ಸಲ್ಲಿಸಬಹುದು.

ಟೆಂಡರ್ ಸಲ್ಲಿಸುವ ವಿವರ:– (1) ಟೆಂಡರ್ ಫಾರಂಗಳನ್ನು ಡೌನ್‌ಲೋಡ್ ಮಾಡಿಕೊಳ್ಳುವ ದಿನಾಂಕ : **15.06.2022 ರಿಂದ 30.06.2022 ರ ವರೆಗೆ.** (2) ಟೆಂಡರ್ ಸ್ವೀಕರಿಸುವ ಕೊನೆಯ ದಿನಾಂಕ : **30.06.2022 ರ ಸಾಯಂಕಾಲ 04.00 ಗಂಟೆ.** (3) ಟೆಂಡರ್‌ಗಳನ್ನು ತೆರೆಯುವ ದಿನಾಂಕ : **02.07.2022 ರ ಸಾಯಂಕಾಲ 04.00 ಗಂಟೆ.**

ಕ್ರ. ಸಂ	ಇಂಡೆಂಟ್ ನಂ.	ಅಂದಾಜು ಮೊತ್ತ ಲಕ್ಷಗಳಲ್ಲಿ	ವರ್ಗ
1	DMA/2021-22/RD/WORK_INDENT116019/CALL-2	62.35	ಇತರೆ

ಸೂಚನೆ : ಈ ಕಛೇರಿಯಿಂದ ನೀಡುವ ಇತರೆ ಎಲ್ಲಾ ಷರತ್ತುಗಳಿಗೆ ಬದ್ಧರಾಗಿರತಕ್ಕದ್ದು ಮತ್ತು ಹೆಚ್ಚಿನ ಮಾಹಿತಿ ಹಾಗೂ ಕಾಮಗಾರಿಗಳ ವಿವರಗಳಿಗೆ ಕಛೇರಿಯ ವೇಳೆಯಲ್ಲಿ ಈ ಕಛೇರಿಯ ತಾಂತ್ರಿಕ ಶಾಖೆಯನ್ನು ಸಂಪರ್ಕಿಸುವುದು.

ಸಹಿ/–	ಸಹಿ/–	ಸಹಿ/–	ಸಹಿ/–
(ಶ್ರೀ. ಕೆ. ಮಹೇಶ್) ಅಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ	(ಶ್ರೀಮತಿ ನಾಗರತ್ನ ಉಮೇಶ್) ಉಪಾಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ	(ಶ್ರೀ ಪಿ.ಸಿ. ಕೃಷ್ಣ) ಸ್ಥಾಯಿ ಸಮಿತಿ ಅಧ್ಯಕ್ಷರು, ಪುರಸಭೆ, ಪಿರಿಯಾಪಟ್ಟಣ	(ಶ್ರೀ ಪ್ರಸನ್ನ ಎ.ಟಿ.) ಮುಖ್ಯಾಧಿಕಾರಿ,ಪುರಸಭೆ, ಪಿರಿಯಾಪಟ್ಟಣ

DIPR/DD-MYS/MCA/113/2022-23

ಕರ್ನಾಟಕ ಸರ್ಕಾರ
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.
ಸಂ:ಕಾ.ಸಾ.ಚಿ/ಪಿ.ಬಿ–1/ಟೆಂಡರ್ ಪ್ರಕಟಣೆ–ಐ.ಎಫ್.ಟಿ–13/2022–23 ದಿನಾಂಕ: 16–06–2022

ಅಲ್ಪಾವಧಿ ಟೆಂಡರ್ ಪ್ರಕಟಣೆ

ಕರ್ನಾಟಕ ಸರ್ಕಾರ ಮಾನ್ಯ ರಾಜ್ಯಪಾಲರ ಆಜ್ಞಾನುಸಾರ ಮತ್ತು ಅವರ ಹೆಸರಿನಲ್ಲಿ ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ& ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ ಇವರು ಕೆಟಿಪಿಪಿ ಆಕ್ಟ್–2000 ನಿಯಮದಂತೆ, ಹಾಗೂ ಸ್ಟ್ಯಾಂಡರ್ಡ್ ಬಿಡ್ ಡಾಕ್ಯೂಮೆಂಟ್ ಕೆ.ಡಬ್ಲ್ಯೂ– 3 ನಿಬಂಧನೆಗಳಿಗೊಳಪಟ್ಟಂತೆ ಈ ಕೆಳಕಂಡ ಕಾಮಗಾರಿಗಳಿಗೆ ಕರ್ನಾಟಕ ಸರ್ಕಾರದ ಇ-ಪ್ರಕ್ಯೂರ್‌ಮೆಂಟ್ ಪೋರ್ಟಲ್ ಮೂಲಕ ದ್ವಿಲಕೋಟೆ ಪದ್ಧತಿಯಲ್ಲಿ ಐಟಂವಾರು ಟೆಂಡರ್‌ಗಳನ್ನು ಲೋಕೋಪಯೋಗಿ ಇಲಾಖೆಯಲ್ಲಿ ನೋಂದಾಯಿತ ಅರ್ಹ 1ನೇ ದರ್ಜೆ ಅರ್ಹ ಗುತ್ತಿಗೆದಾರರಿಂದ ಆಹ್ವಾನಿಸಲಾಗಿದೆ.

ಕಾಮಗಾರಿ ಹೆಸರು:– (1) ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ದ್ಯಾಮವ್ವನಹಳ್ಳಿ ಕೆರೆ ಹಾಗೂ ಬಲಭಾಗದ ಕೋಡಿ ದುರಸ್ಥಿ ಕಾಮಗಾರಿ. ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಲಕ್ಷಗಳಲ್ಲಿ:– 8922790.99 (2) ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕಲ್ಲಹಳ್ಳಿ ಕೆರೆ ಏರಿ ಹಾಗೂ ಎಡ ಭಾಗದ ಕೋಡಿ ದುರಸ್ಥಿ ಕಾಮಗಾರಿ. ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಲಕ್ಷಗಳಲ್ಲಿ:– 8928490.17 (3) ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಕಲ್ಲಹಳ್ಳಿ ಕೆರೆ ಎಡ ಭಾಗದ ಕೋಡಿ ಮುಂಭಾಗದ ಕಾಸ್‌ವೇ ದುರಸ್ಥಿ ಕಾಮಗಾರಿ. ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಲಕ್ಷಗಳಲ್ಲಿ:–8926066.35 (4) ಚಿತ್ರದುರ್ಗ ಜಿಲ್ಲೆ, ಚಿತ್ರದುರ್ಗ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯ ಹುಲ್ಲೂರು ಗ್ರಾಮದ ಹತ್ತಿರ ಸರ್ಕಾರಿ ಹಳ್ಳಕ್ಕೆ ಚೆಕ್‌ಡ್ಯಾಂ ಕಂ ಕಾಸ್‌ವೇ ನಿರ್ಮಾಣ ಕಾಮಗಾರಿ. ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಲಕ್ಷಗಳಲ್ಲಿ:–8926464.70 (5) ಚಿತ್ರದುರ್ಗ ಜಿಲ್ಲೆ ಚಿತ್ರದುರ್ಗ ತಾಲ್ಲೂಕು ದ್ಯಾಮವ್ವನಹಳ್ಳಿ ಗ್ರಾಮಪಂಚಾಯಿತಿ ವ್ಯಾಪ್ತಿಯ ಹೊಸಕಲ್ಲಹಳ್ಳಿ ಗ್ರಾಮದ ವೆಂಕಟೇಶ ಬಿನ್ ವಾಸುದೇವಪ್ಪ ರವರ ರಿ.ಸ.ನಂ 295/1 ಜಮೀನಿನ ಹತ್ತಿರ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ, ಇಂಗಳದಾಳ್ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಇಂಗಳದಾಳ್ ಲಂಬಾಣಿಹಟ್ಟಿ ಗ್ರಾಮದ ರಿ.ಸ.ನಂ 62/3ಪಿ/ಪಿ1 ರ ಜಮೀನಿನ ಹತ್ತಿರ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ, ಸೊಂಡೆಕೊಳ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಸೊಂಡೆಕೊಳ ಗ್ರಾಮದ ಹತ್ತಿರ ತಡಗೋಡೆ ನಿರ್ಮಾಣ & ಹುಲ್ಲೂರು ಗ್ರಾಮ ಪಂಚಾಯತಿ ವ್ಯಾಪ್ತಿಯ ಹುಲ್ಲೂರು ಗ್ರಾಮದ ರಿ.ಸ.ನಂ 133 ರ ಜಮೀನಿನ ಹತ್ತಿರ ಚೆಕ್‌ಡ್ಯಾಂ ನಿರ್ಮಾಣ ಕಾಮಗಾರಿ. ಟೆಂಡರ್‌ಗೆ ಇಟ್ಟಿರುವ ಮೊತ್ತ ರೂ.ಲಕ್ಷಗಳಲ್ಲಿ:– 6000000.00

ಸದರಿ ಟೆಂಡರ್ ಪ್ರಕ್ರಿಯೆಗಳನ್ನು ಈ ಕೆಳಗಿನಂತೆ ನಿಗದಿಪಡಿಸಿದೆ. ದಿನಾಂಕ: 23–06–2022 ರಿಂದ ಇ–ಪೋರ್ಟಲ್‌ನಲ್ಲಿ ಟೆಂಡರ್ ದಾಖಲೆಗಳನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ. ಟೆಂಡರ್ ಬಗ್ಗೆ ವಿಚಾರಿಸಲು/ಮಾಹಿತಿ ಪಡೆಯಲು ಕೊನೆಯ ದಿನಾಂಕ: 30–06–2022 ಸಾಯಂಕಾಲ 5.30 ರವರೆಗೆ ಟೆಂಡರ್ ಸಲ್ಲಿಸಲು ಅಂತಿಮ ದಿನಾಂಕ: 01–07–2022 ರ ಸಾಯಂಕಾಲ 4.00 ಗಂಟೆಯವರೆಗೆ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 02–07–2022 ಸಾಯಂಕಾಲ 04–30 ಗಂಟೆಯ ನಂತರ (ಸಾಧ್ಯವಾದಲ್ಲಿ), ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ವೇಳೆ ದಿನಾಂಕ: 04–07–2022 ಸಾಯಂಕಾಲ 04–30 ಗಂಟೆಯ ನಂತರ(ಸಾಧ್ಯವಾದಲ್ಲಿ) ಸದರಿ ಕಾಮಗಾರಿಯಲ್ಲಿ ಟೆಂಡರ್ ಮೊತ್ತ ಅಥವಾ ಇ.ಎಂ.ಡಿ.ಯಲ್ಲಿ ಯಾವುದೇ ಬದಲಾವಣೆ ಇದ್ದಲ್ಲಿ ಇ–ಪ್ರೊಕ್ಯೂರ್‌ಮೆಂಟ್‌ನ ಬಿಡ್ ಡಾಕ್ಯೂಮೆಂಟ್‌ನಲ್ಲಿ ನಮೂದಿಸಿರುವ ಮೊತ್ತ ಅಂತಿಮವಾಗಿರುತ್ತವೆ. ಹೆಚ್ಚಿನ ಮಾಹಿತಿಯನ್ನು ಈ ಕಛೇರಿಯಿಂದ (08194–231811) ಹಾಗೂ ಹೆಚ್.ಪಿ. ಕಂಪನಿಯ ಸಹಾಯಕ ದೂರವಾಣಿ ಸಂಖ್ಯೆ: 080–25501216/080–25501227 ರಿಂದ ಪಡೆಯಬಹುದು.

ಸಹಿ/–ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ, ಚಿತ್ರದುರ್ಗ.

DIPR/CTA/MCA/248/2022-23

ಅಸ್ಸಾಂಜೆ ಗಡಿಪಾರಿಗೆ ಬ್ರಿಟನ್ ಸರ್ಕಾರ ಸಮ್ಮತಿ

ಜೂಲಿಯನ್ ಅಸ್ಸಾಂಜೆ

ಲಂಡನ್ (ಎಪಿ): ಗೂಢಚಾರಿಕೆಆರೋಪಕ್ಕೆ ಸಂಬಂಧಿಸಿದಂತೆ ವಿಕಿಲೀಕ್ಸ್ ಸಂಸ್ಥಾಪಕ ಜೂಲಿಯನ್ ಅಸ್ಸಾಂಜೆ ಅವರನ್ನು ಅಮೆರಿಕಕ್ಕೆ ಗಡಿಪಾರು ಮಾಡಲು ಬ್ರಿಟನ್ ಸರ್ಕಾರ ಸಮ್ಮತಿಸಿದೆ. ಬ್ರಿಡನ್ ಸರ್ಕಾರದ ಈ ನಿರ್ಧಾರದ ವಿರುದ್ಧ ಮೇಲ್ಮನವಿ ಸಲ್ಲಿಸಲು ಅಸ್ಸಾಂಜೆಗೆ 14 ದಿನಗಳ ಕಾಲಾವಕಾಶವಿದೆ. ಈ ಕುರಿತು ಅಸ್ಸಾಂಜೆ ಮೇಲ್ಮನವಿ ಸಲ್ಲಿಸುವ ಸಾಧ್ಯತೆ ಇದೆ.

ಅಸ್ಸಾಂಜೆ ಅವರನ್ನು ಅಮೆರಿಕಕ್ಕೆ ಹಸ್ತಾಂತರಿಸಬಹುದೆಂದು ಏಪ್ರಿಲ್‌ನಲ್ಲಿ ಬ್ರಿಟನ್ ನ್ಯಾಯಾಲಯದ ತೀರ್ಪು ನೀಡಿತ್ತು. ಅದರಂತೆ ಬ್ರಿಟನ್‌ನ ಗೃಹ ಕಾರ್ಯದರ್ಶಿ ಪ್ರೀತಿ ಪಟೇಲ್ ಶುಕ್ರವಾರ ಹಸ್ತಾಂತರ ಆದೇಶಕ್ಕೆ ಸಹಿ ಹಾಕಿದ್ದಾರೆ ಎಂದು ಅವರ ಇಲಾಖೆ ತಿಳಿಸಿದೆ.

ಬೀಜಿಂಗ್‌ನಲ್ಲಿ ಇದೇ 23ರಂದು 'ಬ್ರಿಕ್ಸ್' ಶೃಂಗ

ಬೀಜಿಂಗ್ (ಪಿಟಿಐ): ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾ ಅನ್ನು ಒಳಗೊಂಡಿರುವ 'ಬ್ರಿಕ್ಸ್' ರಾಷ್ಟ್ರಗಳ 14ನೇ ಶೃಂಗಸಭೆ ಇದೇ 23 ರಂದು ಬೀಜಿಂಗ್‌ನಲ್ಲಿ ವಿಡಿಯೊ ಲಿಂಕ್ ಮೂಲಕ ನಡೆಯಲಿದೆ ಎಂದು ಚೀನಾ ವಿದೇಶಾಂಗ ಸಚಿವಾಲಯ ಶುಕ್ರವಾರ ಇಲ್ಲಿ ಪ್ರಕಟಿಸಿದೆ.

'ಬ್ರಿಕ್ಸ್'ನ ಈ ವರ್ಷದ ಅಧ್ಯಕ್ಷ ಚೀನಾ. ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಶೃಂಗಸಭೆಯ ಅಧ್ಯಕ್ಷತೆ ವಹಿಸಲಿದ್ದಾರೆ ಎಂದು ಚೀನಾ ವಿದೇಶಾಂಗ ಸಚಿವಾಲಯದ ವಕ್ತಾರ ಹುವಾ ಚುನ್ಯಿಂಗ್ ಹೇಳಿದ್ದಾರೆ.

ಜಾಗತಿಕ ಅಭಿವೃದ್ಧಿ ಮತ್ತು ಉತ್ತಮ, ಗುಣಮಟ್ಟದ ಬ್ರಿಕ್ಸ್ ಪಾಲುದಾರಿಕೆ ಸೇರಿದಂತೆ ಹಲವು ವಿಷಯಗಳ ಕುರಿತು ಈಶೃಂಗಸಭೆಯಲ್ಲಿಚರ್ಚೆಯಾಗಲಿದೆ.

ವರ್ಚುವಲ್ ಸಭೆಯಲ್ಲಿ ಪ್ರಧಾನಿ ನರೇಂದ್ರ ಮೋದಿ, ರಷ್ಯಾ ಅಧ್ಯಕ್ಷ ವ್ಲಾಡಿಮಿರ್ ಪುಟಿನ್, ಬ್ರೆಜಿಲ್ ಅಧ್ಯಕ್ಷ ಜೈರ್ ಬೋಲ್ಸನಾರೊ ಮತ್ತು ದಕ್ಷಿಣ ಆಫ್ರಿಕಾದ ಅಧ್ಯಕ್ಷ ಸಿರಿಲ್ ರಾಮಾಫೋಸಾ ಶೃಂಗಸಭೆಯಲ್ಲಿ ಭಾಗವಹಿಸುವ ನಿರೀಕ್ಷೆಯಿದೆ.

ಬಾಂಗ್ಲಾ ಪ್ರವಾಹ: ಸಂಕಷ್ಟದಲ್ಲಿ 20 ಲಕ್ಷ ಜನ

ಸಿಲ್ಹೆಟ್ (ಬಾಂಗ್ಲಾದೇಶ, ಎಎಫ್‌ಪಿ): ಸತತ ಸುರಿಯುತ್ತಿರುವ ಮುಂಗಾರು ಮಳೆಯಿಂದ ತತ್ತರಿಸಿರುವ ಬಾಂಗ್ಲಾದೇಶದಲ್ಲಿ 20 ಲಕ್ಷಕ್ಕೂ ಹೆಚ್ಚು ಜನರು ಪ್ರವಾಹದಿಂದ ಸಂಕಷ್ಟಕ್ಕೆ ಸಿಲುಕಿದ್ದಾರೆ. ಅವರ ರಕ್ಷಣೆಗೆ ಬಾಂಗ್ಲಾ ಸರ್ಕಾರ ಸೇನಾ ಪಡೆಗಳನ್ನು ರವಾನಿಸಿದೆ.

ದೇಶದ ಈಶಾನ್ಯ ಭಾಗವು ಬಹುತೇಕ ನೀರಿನಿಂದ ಆವೃತ್ತವಾಗಿದೆ. ವಾರಾಂತ್ಯದಲ್ಲಿ ಭಾರಿ ಮಳೆಯ ಮುನ್ಸೂಚನೆ ಇರುವುದರಿಂದ ಪರಿಸ್ಥಿತಿ ಇನ್ನಷ್ಟು ಹದಗೆಡುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿದ್ದಾರೆ.

ತೀವ್ರ ಮಳೆಯ ಕಾರಣ ಬಾಂಗ್ಲಾ ದೇಶದಾದ್ಯಂತ ಪ್ರೌಢಶಾಲಾ ಪರೀಕ್ಷೆಗಳನ್ನು ಮುಂದೂಡಲಾಗಿದೆ. ಶಾಲಾ ತರಗತಿ ಕೊಠಡಿಗಳಲ್ಲಿ ನಿರಾಶ್ರಿತರಿಗೆ ತಾತ್ಕಾಲಿಕ ಆಶ್ರಯವನ್ನು ಕಲ್ಪಿಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

2–2ರಲ್ಲಿ ಸರಣಿ ಸಮಬಲ ಸಾಧಿಸಿದ ಭಾರತ: ಬೆಂಗಳೂರು ಪಂದ್ಯದ ಮೇಲೆ ಕುತೂಹಲದ ಕಣ್ಣು

ಜಯ ತಂದುಕೊಟ್ಟ ದಿನೇಶ್–ಆವೇಶ್

ಭಾರತ ತಂಡದ ದಿನೇಶ್ ಕಾರ್ತಿಕ್ ಬ್ಯಾಟಿಂಗ್ ಸೊಬಗು –ಪಿಟಿಐ ಚಿತ್ರ

ರಾಜ್‌ಕೋಟ್ (ಪಿಟಿಐ): ಮಿಂಚಿನ ಅರ್ಧಶತಕ ಗಳಿಸಿದ ದಿನೇಶ್ ಕಾರ್ತಿಕ್ ಮತ್ತು ಶಿಸ್ತಿನ ದಾಳಿ ನಡೆಸಿದ ಆವೇಶ್ ಖಾನ್ ಶುಕ್ರವಾರ ಇಲ್ಲಿ ನಡೆದ ದಕ್ಷಿಣ ಆಫ್ರಿಕಾ ಎದುರಿನ ನಾಲ್ಕನೇ ಟಿ20 ಪಂದ್ಯದಲ್ಲಿ ಭಾರತಕ್ಕೆ 82 ರನ್‌ಗಳ ಜಯ ತಂದುಕೊಟ್ಟರು.

ಇದರೊಂದಿಗೆ ಐದು ಪಂದ್ಯಗಳ ಸರಣಿಯಲ್ಲಿ 2-2ರ ಸಮಬಲ ಸಾಧಿಸಿದ್ದು, ಭಾನುವಾರ ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ನಡೆಯಲಿರುವ ಕೊನೆಯ ಪಂದ್ಯದಲ್ಲಿ ಜಯಿಸುವವರಿಗೆ ಸರಣಿ ಕಿರೀಟ ಒಲಿಯಲಿದೆ. ಮೊದಲ ಎರಡು ಪಂದ್ಯಗಳಲ್ಲಿ ದಕ್ಷಿಣ ಆಫ್ರಿಕಾ ಅಮೋಘ ಜಯ ಸಾಧಿಸಿತ್ತು. ಮೂರನೇ ಪಂದ್ಯದಲ್ಲಿ ರಿಷಭ್ ಪಂತ್ ಬಳಗವು ಪುಟಿದೆದ್ದು ಗೆಲುವು ಪಡೆದಿತ್ತು.

ಸೌರಾಷ್ಟ್ರ ಕ್ರಿಕೆಟ್ ಸಂಸ್ಥೆ ಕ್ರೀಡಾಂಗಣದಲ್ಲಿ ನಡೆದ ನಾಲ್ಕನೇ ಪಂದ್ಯದಲ್ಲಿ ಟಾಸ್ ಗೆದ್ದ ಪ್ರವಾಸಿ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ದಿನೇಶ್ ಕಾರ್ತಿಕ್ (55; 27ಎ) ಮತ್ತು ಹಾರ್ದಿಕ್ ಪಾಂಡ್ಯ (46;31ಎ) ಅವರ ಜೊತೆಯಾಟದ ಬಲದಿಂದ ಆತಿಥೇಯ ತಂಡವು 20 ಓವರ್‌ಗಳಲ್ಲಿ 6ಕ್ಕೆ 169 ರನ್ ಗಳಿಸಿತು. ಈ ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡಕ್ಕೆ ಆವೇಶ್ ಖಾನ್ (18ಕ್ಕೆ4) ತಡೆಯೊಡ್ಡಿದರು. ತೆಂಬಾ ಬವುಮಾ ಬಳಗವು 16.5 ಓವರ್‌ಗಳಲ್ಲಿ 87 ರನ್ ಗಳಿಸಿ ಎಲ್ಲ ವಿಕೆಟ್ ಕಳೆದುಕೊಂಡಿತು.

ಶಕ್ತಿ ತುಂಬಿದ ದಿನೇಶ್: ಭಾರತ ತಂಡವು 81 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡು ಆತಂಕದಲ್ಲಿದ್ದ ಸಂದರ್ಭದಲ್ಲಿ ಕ್ರೀಸ್‌ಗೆ ಕಾಲಿಟ್ಟ ದಿನೇಶ್ ಇನಿಂಗ್ಸ್‌ನ ಚಿತ್ರಣವನ್ನೇ ಬದಲಿಸಿದರು. 203.70ರ ಸ್ಟ್ರೈಕ್‌ರೇಟ್‌ನಲ್ಲಿ ರನ್ ಗಳಿಸಿದರು. 26 ಎಸೆತಗಳಲ್ಲಿ ಅರ್ಧಶತಕದ ಗಡಿ ಮುಟ್ಟಿದರು. ಡ್ರೈವ್, ಸ್ಕೂಪ್ ಮತ್ತು ರಿವರ್ಸ್ ಸ್ವೀಪ್‌ಗಳ ಚೆಂದದ ಆಟವಾಡಿದರು. ಅವರೊಂದಿಗೆ ಹಾರ್ದಿಕ್ ಕೂಡ ಬೀಸಾಟವಾಡಿದರು.

ಇದರಿಂದಾಗಿ ಕೊನೆಯ ಐದು ಓವರ್‌ಗಳಲ್ಲಿ 69 ರನ್‌ಗಳು ತಂಡದ ಖಾತೆ ಸೇರಿದವು. 19ನೇ ಓವರ್‌ನಲ್ಲಿ ಲುಂಗಿ ಗಿಡಿ ಬೌಲಿಂಗ್‌ನಲ್ಲಿ ಹಾರ್ದಿಕ್ ಔಟಾದರು. ಜೊತೆಯಾಟವೂ ಮುರಿದುಬಿತ್ತು. ಕೊನೆಯ ಓವರ್‌ನಲ್ಲಿ ದಿನೇಶ್ ಕೂಡ ಔಟಾದರು.

ಆವೇಶ್ ಮಿಂಚು: ಗುರಿ ಬೆನ್ನಟ್ಟಿದ ದಕ್ಷಿಣ ಆಫ್ರಿಕಾ ತಂಡದ ಆರಂಭ ಚೆನ್ನಾಗಿರಲಿಲ್ಲ. ಐದನೇ ಓವರ್‌ನಲ್ಲಿ ಡಿಕಾಕ್ ರನೌಟ್ ಆದರು. ನಂತರ ಆವೇಶ್ ಆಟ ಆರಂಭವಾಯಿತು. ಡ್ವೇನ್ ಪ್ರಿಟೋರಿಯಸ್, ರಸಿ ವ್ಯಾನ್ ಡರ್ ಡಸೆ, ಮಾರ್ಕೊ ಜಾನ್ಸನ್ ಮತ್ತು ಕೇಶವ್ ಮಹಾರಾಜ್ ವಿಕೆಟ್‌ಗಳನ್ನು ಗಳಿಸಿ ಮಧ್ಯಮ ಕ್ರಮಾಂಕಕ್ಕೆ ಪೆಟ್ಟುಕೊಟ್ಟರು. ಸ್ಪಿನ್ನರ್ ಚಾಹಲ್ ಅವರ ಮೋಡಿಗೆ ಹೆನ್ರಿಚ್ ಕ್ಲಾಸೆನ್ ಮತ್ತು ಎನ್ರಿಚ್ ನಾಕಿಯಾ ವಿಕೆಟ್‌ಗಳನ್ನು ಕಬಳಿಸಿದರು. ಬವುಮಾಗೆ ಗಾಯ: ದಕ್ಷಿಣ ಆಫ್ರಿಕಾ ನಾಯಕ ತೆಂಬಾ ಬವುಮಾ ಅವರು ಗಾಯಗೊಂಡು ಹೊರನಡೆದರು.

ಸ್ಕೋರ್ ಕಾರ್ಡ್

ಭಾರತ 6ಕ್ಕೆ169 (20 ಓವರ್‌ಗಳಲ್ಲಿ)
ಋತುರಾಜ್ ಸಿ ಡಿಕಾಕ್ ಬಿ ಗಿಡಿ 5(7ಎ,4X1), ಇಶಾನ್ ಸಿ ಡಿಕಾಕ್ ಬಿ ಎನ್ರಿಚ್ 27 (26ಎ, 4X3, 6X1), ಶ್ರೇಯಸ್ ಎಲ್‌ಬಿಡಬ್ಲ್ಯು ಬಿ ಮಾರ್ಕೊ 4 (2ಎ, 4X1), ರಿಷಭ್ ಸಿ ಪ್ರಿಟೋರಿಯಸ್ ಬಿ ಮಹಾರಾಜ್ 17 (23ಎ, 4X2), ಹಾರ್ದಿಕ್ ಸಿ ಶಮ್ಸಿ ಬಿ ಗಿಡಿ 46 (31ಎ, 4X3, 6X3), ದಿನೇಶ್ ಸಿ ವ್ಯಾನ್ ಡರ್ ಬಿ ಪ್ರಿಟೋರಿಯಸ್ 55 (27ಎ, 4X9, 6X2), ಅಕ್ಷರ್ ಔಟಾಗದೆ 8 (4ಎ, 4X1), ಹರ್ಷಲ್ ಔಟಾಗದೆ 1 (1ಎ)
ಇತರೆ: 6 (ಲೆಗ್‌ಬೈ 2, ವೈಡ್ 3, ನೋಬಾಲ್ 1)
ವಿಕೆಟ್ ಪತನ: 1–13 (ಋತುರಾಜ್ ಗಾಯಕವಾಡ; 1.6), 2–24 (ಶ್ರೇಯಸ್ ಅಯ್ಯರ್;2.6), 3–40 (ಇಶಾನ್ ಕಿಶನ್; 6.1), 4–81 (ಪಂತ್;12.5), 5–146 (ಹಾರ್ದಿಕ್ ಪಾಂಡ್ಯ;18.2), 6–159 (ದಿನೇಶ್ ಕಾರ್ತಿಕ್; 19.2)
ಬೌಲಿಂಗ್: ಮಾರ್ಕೊ ಜಾನ್ಸೆನ್ 4–0–38–1, ಲುಂಗಿ ಗಿಡಿ 3–0–20–2, ಡ್ವೇನ್ ಪ್ರಿಟೋರಿಯಸ್ 4–0–41–1, ಎನ್ರಿಚ್ ನಾರ್ಕಿಯಾ 3–0–21–1, ತಬ್ರೇಜ್ ಶಮ್ಸಿ 2–0–18–0, ಕೇಶವ್ ಮಹಾರಾಜ್ 4–0–29–1

ದಕ್ಷಿಣ ಆಫ್ರಿಕಾ 87 (16.5 ಓವರ್‌ಗಳಲ್ಲಿ)
ಕ್ವಿಂಟನ್ ಡಿಕಾಕ್ ರನ್‌ಔಟ್/ ಹರ್ಷಲ್ 14 (13ಎ, 4X2), ತೆಂಬಾ ಗಾಯಗೊಂಡು ನಿವೃತ್ತಿ 8 (11ಎ, 4X1), ಪ್ರಿಟೋರಿಯಸ್ ಸಿ ಪಂತ್ ಬಿ ಆವೇಶ್ 0 (6ಎ), ರಸಿ ವ್ಯಾನ್ ಡರ್ ಸಿ ಋತುರಾಜ್ ಬಿ ಆವೇಶ್ 20 (20ಎ, 4X2), ಕ್ಲಾಸೆನ್ ಎಲ್‌ಬಿಡಬ್ಲ್ಯು ಬಿ ಚಾಹಲ್ 8 (8ಎ, 4X1), ಮಿಲ್ಲರ್ ಬಿ ಹರ್ಷಲ್ 9 (7ಎ, 6X1), ಮಾರ್ಕೊ ಸಿ ಋತುರಾಜ್ ಬಿ ಆವೇಶ್ 12 (17ಎ, 4X1, 6X1), ಮಹಾರಾಜ್ ಸಿ ಶ್ರೇಯಸ್ ಬಿ ಆವೇಶ್ 0 (2ಎ), ಎನ್ರಿಚ್ ಸಿ ಇಶಾನ್ ಬಿ ಚಾಹಲ್ 1 (4ಎ), ಲುಂಗಿ ಸಿ ಋತುರಾಜ್ ಬಿ ಅಕ್ಷರ್ 4 (10ಎ), ತಬ್ರೇಜ್ ಔಟಾಗದೆ 4 (3ಎ)
ಇತರೆ: 7 (ಬೈ 4, ಲೆಗ್‌ಬೈ 2, ವೈಡ್ 1)
ವಿಕೆಟ್ ಪತನ: 1–24 (ಕ್ವಿಂಟನ್ ಡಿಕಾಕ್; 4.5), 2–26 (ಡ್ವೇನ್ ಪ್ರಿಟೋರಿಯಸ್; 5.2), 3–45 (ಹೆನ್ರಿಚ್ ಕ್ಲಾಸೆನ್ 8.2), 4–59 (ಡೇವಿಡ್ ಮಿಲ್ಲರ್; 10.2), 5–74 (ರಸಿ ವ್ಯಾನ್ ಡರ್ ಡಸೆ; 13.2), 6–74 (ಮಾರ್ಕೊ ಜಾನ್ಸೆನ್; 13.4), 7–78 (ಕೇಶವ್ ಮಹಾರಾಜ್; 13.6), 8–80 (ಎನ್ರಿಚ್ ನಾಕಿಯಾ;14.6), 9–87 (ಲುಂಗಿ ಗಿಡಿ; 16.5)
ಬೌಲಿಂಗ್: ಭುವನೇಶ್ವರ್ ಕುಮಾರ್ 2–0–8–0, ಹಾರ್ದಿಕ್ ಪಾಂಡ್ಯ 1–0–12–0, ಆವೇಶ್ ಖಾನ್ 4–0–18–4, ಹರ್ಷಲ್ ಪಟೇಲ್ 2–0–3–1, ಯಜುವೇಂದ್ರ ಚಾಹಲ್ 4–0–21–2, ಅಕ್ಷರ್ ಪಟೇಲ್ 3.5–0–19–1.
ಮುಂದಿನ ಪಂದ್ಯ: ಜೂನ್ 19 (ಬೆಂಗಳೂರು)

ಫಲಿತಾಂಶ: ಭಾರತಕ್ಕೆ 82 ರನ್ ಗೆಲುವು

ಯಶಸ್ವಿ ಶತಕದ ಹ್ಯಾಟ್ರಿಕ್

ಮುಂಬೈ ಬೃಹತ್ ಮೊತ್ತ; ಅರ್ಮಾನ್ ಜಾಫರ್ ಶತಕ

ಪ್ರಜಾವಾಣಿ ವಾರ್ತೆ

ಯಶಸ್ವಿ ಜೈಸ್ವಾಲ್ ಮತ್ತು ಅರ್ಮಾನ್ ಜಾಫರ್ ಜೊತೆಯಾಟ –ಪ್ರಜಾವಾಣಿ ಚಿತ್ರ/ಬಿ.ಎಚ್. ಶಿವಕುಮಾರ್

ಬೆಂಗಳೂರು: ಎಡಗೈ ಬ್ಯಾಟರ್ ಯಶಸ್ವಿ ಜೈಸ್ವಾಲ್ ರಣಜಿ ಟ್ರೋಫಿ ಕ್ರಿಕೆಟ್ ಟೂರ್ನಿಯಲ್ಲಿ ಸತತ ಮೂರನೇ ಶತಕ ಗಳಿಸಿದ ದಾಖಲೆ ಮಾಡಿದರು.

ಜಸ್ಟ್ ಕ್ರಿಕೆಟ್ ಮೈದಾನದಲ್ಲಿ ಉತ್ತರಪ್ರದೇಶ ಎದುರು ನಡೆಯುತ್ತಿರುವ ಸೆಮಿಫೈನಲ್‌ನಲ್ಲಿ ಯಶಸ್ವಿ ಎರಡೂ ಇನಿಂಗ್ಸ್‌ಗಳಲ್ಲಿ ಶತಕ ಹೊಡೆದರು. ಮೊದಲ ಇನಿಂಗ್ಸ್‌ನಲ್ಲಿ 100 ರನ್ ಗಳಿಸಿದ್ದ ಅವರು, ಎರಡನೇ ಇನಿಂಗ್ಸ್‌ನಲ್ಲಿ 181 (372ಎ; 4X23, 6X1) ಗಳಿಸಿದರು. ಅಲ್ಲದೇ ಎರಡನೇ ವಿಕೆಟ್ ಜೊತೆಯಾಟದಲ್ಲಿ ಅರ್ಮಾನ್ ಜಾಫರ್ (127; 259ಎ, 4X15, 6X2) ಅವರೊಂದಿಗೆ 286 ರನ್‌ಗಳನ್ನು ಸೇರಿಸಿದರು. ಇದರಿಂದಾಗಿ ಮುಂಬೈ ತಂಡವು ನಾಲ್ಕನೇ ದಿನದಾಟದ ಮುಕ್ತಾಯಕ್ಕೆ 140 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 449 ರನ್ ಗಳಿಸಿದೆ. ಒಟ್ಟು 662 ರನ್‌ಗಳ ಬೃಹತ್ ಮುನ್ನಡೆ ಗಳಿಸಿದೆ.

ಮೊದಲ ಇನಿಂಗ್ಸ್‌ನಲ್ಲಿ ಮುಂಬೈ ತಂಡವು 393 ರನ್ ಗಳಿಸಿತ್ತು. ಅದಕ್ಕುತ್ತರವಾಗಿ ಉತ್ತರಪ್ರದೇಶವು 180 ರನ್ ಮಾತ್ರ ಗಳಿಸಿ ಆಲೌಟ್ ಆಗಿತ್ತು. ಪಂದ್ಯದಲ್ಲಿ ಇನ್ನೊಂದು ದಿನ ಬಾಕಿಯಿದ್ದು, ಉತ್ತರಪ್ರದೇಶಕ್ಕೆ ಜಯಿಸುವ ಯಾವುದೇ ಅವಕಾಶವನ್ನೂ ಮುಂಬೈ ಬಿಟ್ಟಿಲ್ಲ. ಪಂದ್ಯ ಡ್ರಾ ಆದರೂ ಮೊದಲ ಇನಿಂಗ್ಸ್ ಮುನ್ನಡೆಯ ಆಧಾರದಲ್ಲಿ ಮುಂಬೈ ಫೈನಲ್ ತಲುಪುವುದು.

ಜೈಸ್ವಾಲ್ ದಾಖಲೆ: ರಣಜಿ ಟೂರ್ನಿಯ ಒಂದೇ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿಯೂ ಶತಕ ಬಾರಿಸಿದ ಮುಂಬೈನ ಹತ್ತನೇ ಆಟಗಾರನೆಂಬ ಹೆಗ್ಗಳಿಕೆಗೆ ಯಶಸ್ವಿ ಪಾತ್ರರಾಗಿದ್ದಾರೆ.

ಇದರೊಂದಿಗೆ ಅವರು ಸಚಿನ್ ತೆಂಡೂಲ್ಕರ್, ವಿನೋದ್ ಕಾಂಬ್ಳಿ, ವಾಸೀಂ ಜಾಫರ್, ರೋಹಿತ್ ಶರ್ಮಾ ಮತ್ತು ಅಜಿಂಕ್ಯ ರಹಾನೆ ಅವರ ಸಾಲಿಗೆ ಸೇರಿದ್ದಾರೆ.

ಹೋದ ವಾರ ಕ್ವಾರ್ಟರ್‌ಫೈನಲ್‌ನಲ್ಲಿಯೂ ಅವರು ಶತಕ ಗಳಿಸಿದ್ದರು. 21 ವರ್ಷದ ಯಶಸ್ವಿಗೆ ಇದು ಮೂರನೇ ಪ್ರಥಮ ದರ್ಜೆ ಪಂದ್ಯ. ಅವರು ಈಇನಿಂಗ್ಸ್‌ನಲ್ಲಿ 54ನೇ ಎಸೆತದಲ್ಲಿ ತಮ್ಮ ಖಾತೆ ತೆರೆದಿದ್ದರು.

ಅರ್ಮಾನ್ ಮಿಂಚು: ತಮ್ಮ ವೃತ್ತಿಜೀವನದ ಎಂಟನೇ ಪ್ರಥಮ ದರ್ಜೆ ಪಂದ್ಯ ಆಡುತ್ತಿರುವ ಅರ್ಮಾನ್ ಜಾಫರ್ ಅವರು ಎರಡನೇ ಶತಕ ದಾಖಲಿಸಿದರು. ದೇಶಿ ಕ್ರಿಕೆಟ್ ದಂತಕಥೆ ವಾಸೀಂ ಜಾಫರ್ ಅವರ ಸಹೋದರ ಸಂಬಂಧಿಯಾಗಿರುವ ಅರ್ಮಾನ್ ಚೆಂದದ ಬ್ಯಾಟಿಂಗ್ ಮಾಡಿದರು. ಸ್ವೀಪ್, ಡ್ರೈವ್ ಮತ್ತು ಲೇಟ್ ಕಟ್‌ಗಳಿಂದ ರನ್‌ಗಳನ್ನು ಗಳಿಸಿದರು.

ಸಂಕ್ಷಿಪ್ತ ಸ್ಕೋರು: ಜಸ್ಟ್ ಕ್ರಿಕೆಟ್ ಮೈದಾನ: ಮೊದಲ ಇನಿಂಗ್ಸ್: ಮುಂಬೈ–393, ಉತ್ತರಪ್ರದೇಶ: 180, ಎರಡನೇ ಇನಿಂಗ್ಸ್– ಮುಂಬೈ:140 ಓವರ್‌ಗಳಲ್ಲಿ 4ಕ್ಕೆ 449 (ಯಶಸ್ವಿ ಜೈಸ್ವಾಲ್ 181, ಅರ್ಮಾನ್ ಜಾಫರ್ 127, ಸರ್ಫರಾಜ್ ಖಾನ್ ಬ್ಯಾಟಿಂಗ್ 23, ಶಮ್ಸ್ ಮುಲಾನಿ ಬ್ಯಾಟಿಂಗ್ 10, ಪ್ರಿನ್ಸ್ ಯಾದವ್ 69ಕ್ಕೆ2).

ರೆಬೆಲ್ಸ್, ಸೌತ್ ಇಂಡಿಯಾ ಚಾಂಪಿಯನ್ಸ್

ಪ್ರಜಾವಾಣಿ ವಾರ್ತೆ

ಬಿಡಿಎಫ್‌ಎ 'ಎ' ಡಿವಿಷನ್ ಫುಟ್‌ಬಾಲ್ ಟೂರ್ನಿಯಲ್ಲಿ ಚಾಂಪಿಯನ್ ಆದ ರೆಬೆಲ್ಸ್ ಎಫ್‌ಸಿ ತಂಡಕ್ಕೆ ಕೆಎಸ್‌ಎಫ್‌ಎ ಗೌರವ ಕಾರ್ಯದರ್ಶಿ ಎಂ.ಸತ್ಯನಾರಾಯಣ ಟ್ರೋಫಿ ವಿತರಿಸಿದರು. ಡಾ.ಎಸ್‌ಎಲ್‌ಆಂಥೋಣಿ ಪಾಲ್ಗೊಂಡಿದ್ದರು

ಬೆಂಗಳೂರು: ರೆಬೆಲ್ಸ್ ಎಫ್‌ಸಿ ಮತ್ತು ಸೌತ್ ಇಂಡಿಯಾ ಎಫ್‌ಸಿ ತಂಡಗಳು ಬೆಂಗಳೂರು ಜಿಲ್ಲಾ ಫುಟ್‌ಬಾಲ್ ಸಂಸ್ಥೆ (ಬಿಡಿಎಫ್‌ಎ) ಆಯೋಜಿಸಿದ ಫುಟ್‌ಬಾಲ್ ಟೂರ್ನಿಯಲ್ಲಿ ಕ್ರಮವಾಗಿ 'ಎ' ಡಿವಿಷನ್ ಮತ್ತು 'ಬಿ' ಡಿವಿಷನ್ ಲೀಗ್‌ನಲ್ಲಿ ಪ್ರಶಸ್ತಿ ಗೆದ್ದುಕೊಂಡವು.

ರೆಬೆಲ್ಸ್ ಎಫ್‌ಸಿ ತಂಡ ಒಟ್ಟು 30 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನ ಪಡೆದುಕೊಂಡರೆ, 27 ಪಾಯಿಂಟ್‌ಗಳನ್ನು ಗಳಿಸಿದ ಫ್ರೆಂಡ್ಸ್ ಯೂನಿಯನ್ ಎಫ್‌ಸಿ 'ರನ್ನರ್ ಅಪ್' ಪ್ರಶಸ್ತಿ ಜಯಿಸಿತು. ಎರಡೂ ತಂಡಗಳು ಮುಂದಿನ ಋತುವಿನಲ್ಲಿ ಸೂಪರ್ ಡಿವಿಷನ್ ಲೀಗ್‌ನಲ್ಲಿ ಆಡಲು ಅರ್ಹತೆ ಪಡೆದುಕೊಂಡವು.

'ಬಿ' ಡಿವಿಷನ್ ಚಾಂಪಿಯನ್ ಸೌತ್ ಇಂಡಿಯಾ ಎಫ್‌ಸಿ 24 ಪಾಯಿಂಟ್ಸ್ ಗಳಿಸಿತು. ಶ್ರೀಗಜಾನನ ಎಫ್‌ಸಿ 21 ಪಾಯಿಂಟ್‌ಗಳೊಂದಿಗೆ 'ರನ್ನರ್ ಅಪ್' ಆಯಿತು. ಇವೆರಡು ತಂಡಗಳ ಜತೆ ಡಿವೈಇಎಸ್ ಎಫ್‌ಸಿ ಮತ್ತು ತಿಲಕ್ ಮೆಮೋರಿಯಲ್ ಎಫ್‌ಸಿ (19) ತಂಡಗಳು 'ಎ' ಡಿವಿಷನ್‌ಗೆ ಬಡ್ತಿ ಪಡೆದುಕೊಂಡವು.

ಪಂದ್ಯ ಡ್ರಾ: ಶುಕ್ರವಾರ ನಡೆದ 'ಬಿ' ಡಿವಿಷನ್ ಲೀಗ್‌ನ ಕೊನೆಯ ಪಂದ್ಯದಲ್ಲಿ ಆರ್‌ಎಸ್ ಸ್ಪೋರ್ಟ್ಸ್ ಎಫ್‌ಸಿ- ವೆಹಿಕಲ್ಸ್ ಎಫ್‌ಸಿ 1-1 ಗೋಲಿನಿಂದ ಡ್ರಾ ಸಾಧಿಸಿದವು. ಆರ್‌ಎಸ್ ಪರ ಸಂದೀಪ್ ಕೃಷ್ಣನ್ (6ನೇ ನಿ.) ಹಾಗೂ ವೆಹಿಕಲ್ಸ್ ಪರ ಡಿ.ನಿತೀಶ್ (1ನೇ ನಿ.) ಗೋಲು ಗಳಿಸಿದರು.

ಪ್ರಶಸ್ತಿ ಪ್ರದಾನ: ವಿಜೇತ ತಂಡಗಳಿಗೆ ಶುಕ್ರವಾರ ಪ್ರಶಸ್ತಿ ನೀಡಲಾಯಿತು. 'ಎ' ಡಿವಿಷನ್ ಚಾಂಪಿಯನ್ ತಂಡಕ್ಕೆ ಮಿರ್ಜಾ ಶೇರ್ ಅಲಿ ಬೇಗ್ ರೋಲಿಂಗ್ ಟ್ರೋಫಿ ಹಾಗೂ 'ಬಿ' ಡಿವಿಷನ್ ಚಾಂಪಿಯನ್‌ಗೆ ಬೆಂಗಳೂರು ಬ್ಲೂಸ್ ಕಪ್ ಟ್ರೋಫಿ ಪ್ರದಾನ ಮಾಡಲಾಯಿತು.

ಸೆಮಿಗೆ ಪ್ರಣಯ್

ಜಕಾರ್ತ (ಪಿಟಿಐ): ಭಾರತದ ಎಚ್.ಎಸ್. ಪ್ರಣಯ್ ಇಂಡೊನೇಷ್ಯಾ ಓಪನ್ ಸೂಪರ್ ಬ್ಯಾಡ್ಮಿಂಟನ್ ಟೂರ್ನಿಯ ನಾಲ್ಕರ ಘಟ್ಟ ಪ್ರವೇಶಿಸಿದರು.

ಶುಕ್ರವಾರ ನಡೆದ ಕ್ವಾರ್ಟರ್‌ಫೈನಲ್‌ನಲ್ಲಿ ಪ್ರಣಯ್ 21-14, 21-12 ನೇರ ಗೇಮ್‌ಗಳಿಂದ ಡೆನ್ಮಾರ್ಕ್‌ನ ರೆಸಮಸ್ ಗೆಮ್ಕೆ ವಿರುದ್ಧ ಜಯಿಸಿದರು.

40 ನಿಮಿಷಗಳ ಹಣಾಹಣಿಯಲ್ಲಿ ಪ್ರಣಯ್ ಚುರುಕಾದ ಆಟವಾಡಿದರು. ವಿಶ್ವ ರ‍್ಯಾಂಕಿಂಗ್‌ನಲ್ಲಿ 23ನೇ ಸ್ಥಾನದಲ್ಲಿರುವ ಪ್ರಣಯ್ ಎರಡೂ ಗೇಮ್‌ಗಳಲ್ಲಿ ಪಾರಮ್ಯ ಮೆರೆದರು.

ಇಂಡೊನೇಷ್ಯಾ ಓಪನ್‌ನಲ್ಲಿ ಪ್ರಣಯ್ ಎರಡನೇ ಬಾರಿ ಸೆಮಿಫೈನಲ್ ಪ್ರವೇಶಿಸಿದ ಸಾಧನೆ ಮಾಡಿದರು. ಅವರು ನಾಲ್ಕರ ಘಟ್ಟದಲ್ಲಿ ಚೀನಾದ ಝೂವೊ ಜುನ್ ಪೆಂಗ್ ವಿರುದ್ಧ ಸೆಣಸುವರು.

ಬಂಗಾಳ ತಂಡಕ್ಕೆ ಅಭಿಮನ್ಯು ಆಸರೆ

ಆಲೂರಿನ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಇನ್ನೊಂದು ಸೆಮಿಫೈನಲ್‌ನಲ್ಲಿ ಮಧ್ಯಪ್ರದೇಶ ಬೌಲಿಂಗ್ ದಾಳಿಗೆ ಆರಂಭಿಕ ಆಘಾತ ಅನುಭವಿಸಿರುವ ಬಂಗಾಳ ತಂಡದ ನಾಯಕ ಅಭಿಮನ್ಯು ಈಶ್ವರನ್ (ಬ್ಯಾಟಿಂಗ್ 52; 104ಎ) ಮತ್ತು ಅನುಸ್ಟುಪ್ ಮಜುಂದಾರ್ (ಬ್ಯಾಟಿಂಗ್ 8, 25ಎ) ಆಸರೆಯಾಗಿದ್ದಾರೆ.

351 ರನ್‌ಗಳ ಗೆಲುವಿನ ಗುರಿಯನ್ನು ಬೆನ್ನಟ್ಟಿರುವ ಬಂಗಾಳ ತಂಡವು ಶುಕ್ರವಾರ ದಿನದಾಟದ ಮುಕ್ತಾಯಕ್ಕೆ 37 ಓವರ್‌ಗಳಲ್ಲಿ 4ಕ್ಕೆ96 ರನ್ ಗಳಿಸಿದೆ. ಪಂದ್ಯದ ಕೊನೆಯ ದಿನವಾದ ಶನಿವಾರ ಗೆಲುವಿಗಾಗಿ ಬಂಗಾಳ ತಂಡವು 255 ರನ್‌ಗಳನ್ನು ಗಳಿಸಬೇಕಿದೆ.

ಮಧ್ಯಪ್ರದೇಶ ತಂಡದ ಕುಮಾರ ಕಾರ್ತಿಕೇಯ (35ಕ್ಕೆ3) ದಾಳಿಯ ಮುಂದೆ ಬಂಗಾಳದ ಪ್ರಮುಖ ಬ್ಯಾಟರ್‌ಗಳು ಕುಸಿದರು. ಮೊದಲ ಇನಿಂಗ್ಸ್‌ನಲ್ಲಿ ಶತಕ ದಾಖಲಿಸಿದ್ದ 'ಕ್ರೀಡಾ ಸಚಿವ' ಮನೋಜ್ ತಿವಾರಿ ಸೇರಿದಂತೆ ನಾಲ್ವರು ಬ್ಯಾಟರ್‌ಗಳೂ ಬೇಗನೆ ಔಟಾದರು. ಇದರಿಂದಾಗಿ ಬಂಗಾಳ ತಂಡವು ಆತಂಕದಲ್ಲಿದೆ.

ಸಂಕ್ಷಿಪ್ತ ಸ್ಕೋರ್: ಮೊದಲ ಇನಿಂಗ್ಸ್: ಮಧ್ಯಪ್ರದೇಶ: 341, ಬಂಗಾಳ; 273, ಎರಡನೇ ಇನಿಂಗ್ಸ್: ಮಧ್ಯಪ್ರದೇಶ:114.2 ಓವರ್‌ಗಳಲ್ಲಿ 281 (ರಜತ್ ಪಾಟೀದಾರ್ 79, ಆದಿತ್ಯ ಶ್ರೀವಾಸ್ತವ 82, ಶಾಬಾಜ್ ಅಹಮದ್ 79ಕ್ಕೆ5, ಪ್ರದೀಪ್ತ ಪ್ರಾಮಾಣಿಕ್ 65ಕ್ಕೆ4) ಬಂಗಾಳ: 37 ಓವರ್‌ಗಳಲ್ಲಿ 4ಕ್ಕೆ96 (ಅಭಿಮನ್ಯು ಈಶ್ವರನ್ ಬ್ಯಾಟಿಂಗ್ 52, ಅನುಸ್ಟುಪ್ ಮಜುಂದಾರ್ ಬ್ಯಾಟಿಂಗ್ 8, ಕುಮಾರ್ ಕಾರ್ತಿಕೇಯ 35ಕ್ಕೆ3)

ಷೇರುಪೇಟೆ ವಹಿವಾಟು



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	15360
ಇಂದಿನ ಅಂತ್ಯ	15293
▼	67
ದಿನದ ಗರಿಷ್ಠ	15400

ವಿನಿಮಯ ದರ

$ ಡಾಲರ್	78.05
£ ಪೌಂಡ್	96.05
€ ಯುರೊ	82.12
¥ ಯೆನ್ (100ಕ್ಕೆ)	57.9

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹525

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1590 (1590)
ಸೋಯಾ (ರಿಫೈನ್ಡ್)	₹1445 (1465)
ಸೂರ್ಯಕಾಂತಿ (ರಿಫೈನ್ಡ್)	₹1740 (1745)
ಪಾಮೋಲಿನ್	₹1387 (1407)

ತೆಂಗು ಧಾರಣೆ (ಸಾವಿರಕ್ಕೆ)

ಮಂಗಳೂರು	
1ನೇ ದರ್ಜೆ	18000-20000
2ನೇ ದರ್ಜೆ	₹12000-15000

ಕೊಬ್ಬರಿ ಧಾರಣೆ

ಅರಸೀಕೆರೆ	₹12000-14040
ಬೆಂಗಳೂರು	₹16000-16500

ಬೆಂಗಳೂರು ಈರುಳ್ಳಿ ಧಾರಣೆ (ಕ್ವಿಂಟಲ್‌ಗೆ)

ದೊಡ್ಡ	₹1500-1700
ಮಧ್ಯಮ	₹1000-1400
ಸಣ್ಣ	₹400-800

ಇಳಿಯುತ್ತಿದೆ ಅಡುಗೆ ಎಣ್ಣೆ ಬೆಲೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸಗಟು ಮಾರುಕಟ್ಟೆಯಲ್ಲಿ ತಾಳೆ ಎಣ್ಣೆ ಬೆಲೆಯು ಲೀಟರಿಗೆ ₹ 10ರವರೆಗೆ ಇಳಿಕೆ ಆಗಿದೆ. ಅಲ್ಲದೆ, ಸೋಯಾ ಎಣ್ಣೆ ಹಾಗೂ ಸೂರ್ಯಕಾಂತಿ ಎಣ್ಣೆ ಬೆಲೆಯು ಸಗಟು ಮಾರುಕಟ್ಟೆಯಲ್ಲಿ ಲೀಟರಿಗೆ ₹ 6ರಿಂದ ₹ 8ರವರೆಗೆ ಇಳಿಕೆ ಆಗಿದೆ. ಇದು ಹದಿನೈದು ದಿನಗಳಲ್ಲಿ ಆಗಿರುವ ಇಳಿಕೆ.

ಇಂಡೊನೇಷ್ಯಾ ಸರ್ಕಾರವು ತಾಳೆ ಎಣ್ಣೆ ರಫ್ತು ನಿರ್ಬಂಧ ಹಿಂದಕ್ಕೆ ಪಡೆದಿರುವುದು, ಕಚ್ಚಾ ಸೋಯಾ ಎಣ್ಣೆ ಮತ್ತು ಸೂರ್ಯಕಾಂತಿ ಎಣ್ಣೆಯ ಆಮದಿಗೆ ಸೀಮಾ ಸುಂಕ ಹಾಗೂ ಕೃಷಿ ಮೂಲಸೌಕರ್ಯ ಅಭಿವೃದ್ಧಿ ಸೆಸ್‌ನಿಂದ ಕೇಂದ್ರ ಸರ್ಕಾರ ವಿನಾಯಿತಿ ನೀಡಿರುವುದೂ ಬೆಲೆ ತಗ್ಗಲು ಕಾರಣವಾಗಿದೆ ಎಂದು ಉದ್ಯಮದ ಮೂಲಗಳು ಹೇಳಿವೆ.

'ಕಚ್ಚಾ ಸೂರ್ಯಕಾಂತಿ ಎಣ್ಣೆಯ ಆಮದು ಸುಗಮವಾಗುತ್ತಿರುವ ಕಾರಣ ಗರಿಷ್ಠ ಮಾರಾಟ ದರವನ್ನು (ಎಂಆರ್‌ಪಿ) ಪ್ರತಿ ಲೀಟರಿಗೆ ₹ 35ರಷ್ಟು ಕಡಿಮೆ ಮಾಡಲಾಗಿದೆ' ಎಂದು ಜೆಮಿನಿ ಎಡಿಬಲ್ಸ್ ಆ್ಯಂಡ್ ಫ್ಯಾಟ್ಸ್ ಇಂಡಿಯಾ ಲಿಮಿಟೆಡ್ ಕಂಪನಿ ತಿಳಿಸಿದೆ. ಕಂಪನಿಯು ಫ್ರೀಡಂ ರಿಫೈನ್ಡ್ ಸೂರ್ಯಕಾಂತಿ ಎಣ್ಣೆಯನ್ನು ಮಾರಾಟ ಮಾಡುತ್ತಿದೆ.

'ಉಕ್ರೇನ್–ರಷ್ಯಾ ಯುದ್ಧದ ಕಾರಣದಿಂದಾಗಿ ಕಚ್ಚಾ ಸೂರ್ಯಕಾಂತಿ ಎಣ್ಣೆ ಆಮದಿಗೆ ತೊಡಕು ಎದುರಾಗಿತ್ತು. ಇದರಿಂದಾಗಿ ಸೂರ್ಯಕಾಂತಿ ಎಣ್ಣೆಯ ಬೆಲೆಯು ಹೆಚ್ಚಾಗಿತ್ತು. ಈಗ ಪರಿಸ್ಥಿತಿ ತಿಳಿಯಾಗುತ್ತಿದ್ದು, ಕೆಲವು ವಾರಗಳಿಂದ ಸೂರ್ಯಕಾಂತಿ ಎಣ್ಣೆ ಪೂರೈಕೆ ಮತ್ತೆ ಆರಂಭವಾಗಿದೆ' ಎಂದು ಕಂಪನಿ ಹೇಳಿದೆ.

ಸೂರ್ಯಕಾಂತಿ ಎಣ್ಣೆಯ ಬೆಲೆಯು ಎರಡು ತಿಂಗಳ ಹಿಂದೆ ಸಗಟು ಮಾರುಕಟ್ಟೆಯಲ್ಲಿ ಲೀಟರಿಗೆ ₹ 190ಕ್ಕೆ (ತೆರಿಗೆ ಹೊರತುಪಡಿಸಿ) ತಲುಪಿತ್ತು. ಅದಕ್ಕೆ ಹೋಲಿಸಿದರೆ ಈಗ ಬೆಲೆ ₹ 18ರಷ್ಟು ಕಡಿಮೆ ಆಗಿದೆ ಎಂದು ಉದ್ಯಮದ ಮೂಲಗಳು ಹೇಳಿವೆ.

ರಷ್ಯಾ ಮತ್ತು ಅರ್ಜೆಂಟೀನಾ ದೇಶಗಳು ಹೆಚ್ಚಿನ ಪ್ರಮಾಣದಲ್ಲಿ ಸೂರ್ಯಕಾಂತಿ ಎಣ್ಣೆ ರಫ್ತಿಗೆ ಒತ್ತು ನೀಡುತ್ತಿವೆ. ಉಕ್ರೇನ್‌ನ ಕೆಲವು ಪ್ರದೇಶಗಳಿಂದಲೂ ಸೂರ್ಯಕಾಂತಿ ಎಣ್ಣೆ ರಫ್ತು ಮತ್ತೆ ಶುರುವಾಗಿರುವ ಮಾಹಿತಿ ಇದೆ. ಈ ಕಾರಣಗಳಿಂದಾಗಿ ಅಡುಗೆ ಎಣ್ಣೆ ಬೆಲೆ ಇಳಿಕೆ ಆಗುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಇನ್ನು ಎರಡರಿಂದ ಮೂರು ತಿಂಗಳ ಅವಧಿಯಲ್ಲಿ ಅಡುಗೆ ಎಣ್ಣೆಗಳ ಬೆಲೆಯು ರಷ್ಯಾ–ಉಕ್ರೇನ್ ಯುದ್ಧ ಶುರುವಾಗುವುದಕ್ಕೂ ಮೊದಲು ಇದ್ದ ಮಟ್ಟಕ್ಕೆ ಬರುವ ಅಂದಾಜು ಇದೆ ಎಂದು ಬೆಂಗಳೂರಿನ ಸಗಟು ವರ್ತಕರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ
ಸಕಲೇಶಪುರ
ಕೂಳೆ 400-420
ನಡುಗೋಲು 450-480
ರಾಶಿ 500- 520
ರಾಶಿ ಉತ್ತಮ 550-600
ಜರಡಿ 600 - 650
ಹೆರಕಿದ್ದು 1,000-1,100
ಹಸಿರು ಸಾಧಾರಣ 600-700
ಹಸಿರು ಉತ್ತಮ 900-1,000
ಹಸಿರು ಅತಿ ಉತ್ತಮ 1,150-1,250
ಕಾಳು ಮೆಣಸು 470
ಅಡಿಕೆ
ಬಂಟ್ವಾಳ
ಕೋಕ 12500-25000
ಹೊಸತು 27500-45000
ಹಳತು 46000-54500
ಭದ್ರಾವತಿ
ರಾಶಿ 47899-49399
ಹೊಸನಗರ
ಬಿಳಿಗೋಟು 26599-27099
ಚಾಲಿ 34699-36699
ಕೆಂಪುಗೋಟು 30899-36899
ರಾಶಿ 44009-49899
ಕಾರ್ಕಳ
ಹೊಸತು 40000-45000
ಕುಮಟಾ
ಚಿಪ್ಪು 26089-31199
ಕೋಕ 18089-29999
ಫ್ಯಾಕ್ಟರಿ 10109-19549
ಹಳೆಚಾಲಿ 43899-46429
ಹೊಸಚಾಲಿ 36809-39519
ಪುತ್ತೂರು
ಕೋಕ 11000-26000
ಹೊಸತು 28500-42500
ಶಿವಮೊಗ್ಗ
ಬೆಟ್ಟೆ 49090-53486
ಗೊರಬಲು 17500-37299
ರಾಶಿ 47009-49459
ಸರಕು 57669-79596
ಸಿದ್ದಾಪುರ
ಬಿಳಿಗೋಟು 25149-30899
ಚಾಲಿ 35099-39239
ಕೋಕ 20889-30989
ಕೆಂಪುಗೋಟು 30569-30889
ರಾಶಿ 43699-48799
ತಟ್ಟಿಬೆಟ್ಟೆ 37409-46639
ಶಿರಸಿ
ಬೆಟ್ಟೆ 35196-46518
ಬಿಳಿಗೋಟು 21199-32289
ಚಾಲಿ 33699-39699
ರಾಶಿ 40799-49899
ತುಮಕೂರು
ರಾಶಿ 48000-49500
ಯಲ್ಲಾಪುರ
ಬಿಳಿಗೋಟು 28919-34009
ಚಾಲಿ 34399-39869
ಕೋಕ 18899-30899
ಕೆಂಪುಗೋಟು 28919-34009
ರಾಶಿ 45619-51899
ತಟ್ಟಿಬೆಟ್ಟೆ 36919-43869
ರಬ್ಬರ್ ಧಾರಣೆ
ನರಸಿಂಹರಾಜಪುರ ಮಾರುಕಟ್ಟೆ
ಆರ್‌ಎಸ್‌ಎಸ್ 4 ₹173
ಆರ್ ಎಸ್‌ಎಸ್ 5 ₹165
ಗುಡ್ ಲಾಟ್ ₹157

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	---	15,900	16,200	228.16ಸೆಂಟ್ಸ್
ಎಸಿ	---	8,600	8,950	
ಆರ್‌ಪಿ	---	9,800	9,975	
ಆರ್‌ಸಿ	--	4,500	4,600	2046 ಡಾಲರ್ಸ್

ಚಿನ್ನದ ಬೆಲೆ ₹ 416ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ದೆಹಲಿಯಲ್ಲಿ ಚಿನ್ನದ ಬೆಲೆಯು 10 ಗ್ರಾಂಗೆ ₹ 416 ರಷ್ಟು ಜಾಸ್ತಿ ಆಗಿ, ₹ 50,802ಕ್ಕೆ ತಲುಪಿದೆ. ಬೆಳ್ಳಿಯ ಬೆಲೆಯು ಕೆ.ಜಿ.ಗೆ ₹ 1,014ರಷ್ಟು ಜಾಸ್ತಿ ಆಗಿದ್ದು ₹ 61,343ಕ್ಕೆ ತಲುಪಿದೆ.

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹300-645
ದ್ವಿತಳಿ (ಬಿ.ವಿ)	₹412-786

ಹಣದುಬ್ಬರ ನಿಯಂತ್ರಣಕ್ಕೆ ಅಂಟಿಕೊಂಡಿದ್ದರೆ ತೊಂದರೆಯಾಗುತ್ತಿತ್ತು: ಶಕ್ತಿಕಾಂತ ದಾಸ್

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ತನ್ನ ನೀತಿಗಳ ವಿಚಾರದಲ್ಲಿ ಹಿಂದುಳಿದಿಲ್ಲ ಎಂದು ಹೇಳಿರುವ ಗವರ್ನರ್ ಶಕ್ತಿಕಾಂತ ದಾಸ್, ಹಣದುಬ್ಬರ ದರವನ್ನು ಶೇಕಡಾ 4ಕ್ಕೆ ನಿಗದಿ ಮಾಡಬೇಕು ಎಂಬ ಗುರಿಗೇ ಅಂಟಿಕೊಳ್ಳುವುದು 'ಸಾಂಕ್ರಾಮಿಕದಿಂದ ತತ್ತರಿಸಿದ್ದ ಅರ್ಥ ವ್ಯವಸ್ಥೆ ಪಾಲಿಗೆ ವಿನಾಶಕಾರಿ' ಆಗುತ್ತಿತ್ತು ಎಂದು ಹೇಳಿದ್ದಾರೆ.

'ಸಾಂಕ್ರಾಮಿಕದ ಸಂದರ್ಭದಲ್ಲಿ ಹೆಚ್ಚಿನ ಹಣದುಬ್ಬರವನ್ನು ಸಹಿಸಿಕೊಳ್ಳುವುದು ಅಗತ್ಯವಾಗಿತ್ತು. ಆ ತೀರ್ಮಾನಕ್ಕೆ ನಾವು ಈಗಲೂ ಬದ್ಧ' ಎಂದು ಅವರು ಕಾರ್ಯಕ್ರಮವೊಂದರಲ್ಲಿ ಹೇಳಿದ್ದಾರೆ.

ಒಟ್ಟು ಆಂತರಿಕ ಉತ್ಪಾದನೆಯ ಮಟ್ಟವು ಕೋವಿಡ್ ಪೂರ್ವದ ಮಟ್ಟವನ್ನು ದಾಟಿದೆ ಎಂಬುದನ್ನು ಕಂಡುಕೊಂಡ ನಂತರವೇ ಆರ್‌ಬಿಐ ಹಣದುಬ್ಬರ ನಿಯಂತ್ರಣದ ಕಡೆ ಗಮನ ನೀಡಿತು ಎಂದು ಅವರು ಹೇಳಿದ್ದಾರೆ.

'ನಾವು ಸಮಯದ ಅಗತ್ಯ ಏನಿತ್ತೋ ಅದನ್ನು ಮಾಡಿದ್ದೇವೆ. ನಾವು ಹಿಂದೆ ಬಿದ್ದಿದ್ದೆವು ಎಂಬ ಮಾತನ್ನು ಒಪ್ಪುವುದಿಲ್ಲ' ಎಂದು ದಾಸ್ ಪ್ರತಿಪಾದಿಸಿದ್ದಾರೆ.

'ಸಾಂಕ್ರಾಮಿಕದ ಸಂದರ್ಭದಲ್ಲಿ ಹಣಕಾಸಿನ ನೀತಿಯನ್ನು ಬಿಗಿಯಾಗಿ ಇರಿಸಿದ್ದಿದ್ದರೆ, ದೇಶದ ಅರ್ಥ ವ್ಯವಸ್ಥೆ ಹಾಗೂ ಹಣಕಾಸು ಮಾರುಕಟ್ಟೆಗಳ ಮೇಲೆ ಆಗಬಹುದಾಗಿದ್ದ ಹಾನಿಯು ಭಾರಿ ಪ್ರಮಾಣದ್ದಾಗಿರುತ್ತಿತ್ತು. ಸುಧಾರಿಸಿಕೊಳ್ಳಲು ಭಾರತಕ್ಕೆ ವರ್ಷಗಳೇ ಬೇಕಾಗುತ್ತಿತ್ತು' ಎಂದೂ ಅವರು ವಿವರಿಸಿದ್ದಾರೆ.

ವರ್ಷದಲ್ಲಿ ಇ.ವಿ., ಪೆಟ್ರೋಲ್ ವಾಹನ ಬೆಲೆ ಸರಿಸಮ: ಸಚಿವ ನಿತಿನ್ ಗಡ್ಕರಿ

ನವದೆಹಲಿ (ಪಿಟಿಐ): ವಿದ್ಯುತ್ ಚಾಲಿತ ವಾಹನಗಳ (ಇ.ವಿ.) ಬೆಲೆಯು ಇನ್ನು ಒಂದು ವರ್ಷದಲ್ಲಿ ಪೆಟ್ರೋಲ್ ವಾಹನಗಳ ಬೆಲೆಗೆ ಸರಿಸಮ ಆಗಲಿದೆ ಎಂದು ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಸಚಿವ ನಿತಿನ್ ಗಡ್ಕರಿ ಹೇಳಿದ್ದಾರೆ.

ಪೆಟ್ರೋಲ್, ಡೀಸೆಲ್ ಬದಲಾಗಿ ಬೆಳೆ ತ್ಯಾಜ್ಯದಿಂದ ತಯಾರಿಸಿದ ಎಥೆನಾಲ್ ಅನ್ನು ಕೇಂದ್ರ ಸರ್ಕಾರ ಉತ್ತೇಜಿಸುತ್ತಿದೆ ಎಂದು ಅವರು ಕಾರ್ಯಕ್ರಮವೊಂದರಲ್ಲಿ ತಿಳಿಸಿದ್ದಾರೆ.

ಚೆನ್ನೈಯಿನ್‌ಗೆ ರಫೀಕ್

ಚೆನ್ನೈ (ಪಿಟಿಐ): ಇಂಡಿಯನ್ ಸೂಪರ್ ಲೀಗ್ (ಐಎಸ್‌ಎಲ್) ತಂಡ ಚೆನ್ನೈಯಿನ್ ಎಫ್‌ಸಿ, ಅನುಭವಿ ಮಿಡ್‌ಫೀಲ್ಡರ್ ಮೊಹಮ್ಮದ್ ರಫೀಕ್ ಅವರೊಂದಿಗೆ ಎರಡು ವರ್ಷಗಳ ಅವಧಿಗೆ ಒಪ್ಪಂದ ಮಾಡಿಕೊಂಡಿದೆ.

ಮುಂಬೈ ಧಾರಣೆ

ಶೇಂಗಾ

17-6-2022

ಜಾವಾ 70/80(ಹೊಸ)	10550-10600
ಜಾವಾ 80/90(ಹೊಸ)	10250-10300
ದಪ್ಪ ಮಧ್ಯಪ್ರದೇಶ(ಹೊಸ)	10250-10300
ದಪ್ಪ ಗುಜರಾತ್(ಹೊಸ)	11050-11100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1600 (1600)
ಒಂದು ವಾರದ ಡೆಲಿವರಿ	1595 (1595)
ಸೋಯಾ ಕಚ್ಚಾ	1360 (1395)
ಪಾಮ್ ವಾರದ ಡೆಲಿವರಿ	1385 (1405)
ಸೂರ್ಯಕಾಂತಿ ಎಣ್ಣೆ ಕಚ್ಚಾ	1715 (1715)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
51,050 (50,400)
ಬೆಳ್ಳಿ ಕೆ.ಜಿ 61,550 (60,575)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಹೂಡಿಕೆದಾರರಿಗೆ 6 ದಿನಗಳಲ್ಲಿ ₹ 18 ಲಕ್ಷ ಕೋಟಿ ನಷ್ಟ

ನವದೆಹಲಿ (ಪಿಟಿಐ): ದೇಶದ ಷೇರುಪೇಟೆ ಸೂಚ್ಯಂಕಗಳು ಕುಸಿದ ಪರಿಣಾಮವಾಗಿ, 6 ದಿನಗಳ ಅವಧಿಯಲ್ಲಿ ಹೂಡಿಕೆದಾರರು ₹ 18.17 ಲಕ್ಷ ಕೋಟಿ ಕಳೆದುಕೊಂಡಿದ್ದಾರೆ. ವಿವಿಧ ದೇಶಗಳ ಕೇಂದ್ರೀಯ ಬ್ಯಾಂಕ್‌ಗಳು ಬಡ್ಡಿ ದರ ಹೆಚ್ಚಿಸುತ್ತಿರುವ ಕಾರಣ, ಜಾಗತಿಕ ಮಟ್ಟದಲ್ಲಿ ಷೇರುಪೇಟೆಗಳಲ್ಲಿ ನಕಾರಾತ್ಮಕ ವಹಿವಾಟು ನಡೆದಿದೆ.

6 ದಿನಗಳ ಅವಧಿಯಲ್ಲಿ ಬಿಎಸ್‌ಇ ಸೆನ್ಸೆಕ್ಸ್ 3,959 ಅಂಶ ಇಳಿದಿದೆ. 'ಜಾಗತಿಕವಾಗಿ ಮತ್ತು ದೇಶಿ ಮಾರುಕಟ್ಟೆಗಳಲ್ಲಿ ಕಳೆದ ಕೆಲವು ವಹಿವಾಟು ದಿನಗಳಲ್ಲಿ ಭಾರಿ ಕುಸಿತ ದಾಖಲಾಗಿದೆ. ವಿದೇಶಿ ಹೂಡಿಕೆ ಹೊರಹೋಗುತ್ತಿರುವುದು ಕೂಡ ಹೂಡಿಕೆದಾರರ ವಿಶ್ವಾಸವನ್ನು ಕುಂದಿಸಿದೆ' ಎಂದು ಮೋತಿಲಾಲ್ ಓಸ್ವಾಲ್ ಫೈನಾನ್ಶಿಯಲ್ ಸರ್ವಿಸಸ್‌ನ ಸಣ್ಣ ಹೂಡಿಕೆಗಳ ಸಂಶೋಧನಾ ಮುಖ್ಯಸ್ಥ ಸಿದ್ಧಾರ್ಥ ಖೇಮ್ಕ ಹೇಳಿದ್ದಾರೆ.

'ಜಾಗತಿಕವಾಗಿ ಹಣಕಾಸಿನ ನೀತಿ ಬಿಗಿಗೊಳ್ಳುತ್ತಿರುವುದು ಮತ್ತು ಇದರಿಂದಾಗಿ ಆರ್ಥಿಕ ಬೆಳವಣಿಗೆ ಕಡಿಮೆ ಆಗಬಹುದು ಎಂಬ ಭೀತಿಯು ಜಗತ್ತಿನ ಎಲ್ಲೆಡೆ ಷೇರು ಮಾರುಕಟ್ಟೆಗಳಲ್ಲಿ ಇದೆ' ಎಂದು ಜಿಯೋಜಿತ್ ಫೈನಾನ್ಶಿಯಲ್ ಸರ್ವಿಸಸ್‌ನ ಮುಖ್ಯ ಹೂಡಿಕೆ ತಜ್ಞ ವಿ.ಕೆ. ವಿಜಯಕುಮಾರ್ ಹೇಳಿದ್ದಾರೆ.

'ವಿದೇಶಿ ಹೂಡಿಕೆ ಹೊರ ಹೋಗುವುದು ಕಡಿಮೆ ಆಗುವ ಲಕ್ಷಣಗಳೇ ಕಾಣಿಸುತ್ತಿಲ್ಲ. ಇದು ಮಾರುಕಟ್ಟೆಯ ಮೇಲೆ ಪರಿಣಾಮ ಬೀರುತ್ತಿದೆ' ಎಂದು ಕೋಟಕ್ ಸೆಕ್ಯುರಿಟೀಸ್‌ನ ತಾಂತ್ರಿಕ ಸಂಶೋಧನಾ ವಿಭಾಗದ ಡೆಪ್ಯುಟಿ ಉಪಾಧ್ಯಕ್ಷ ಅಮೋಲ್ ಅಠವಳೆ ಹೇಳಿದ್ದಾರೆ.

498 ರನ್‌ಗಳ ಮೊತ್ತ: ಬಟ್ಲರ್, ಫಿಲ್ ಸಾಲ್ಟ್, ಡೇವಿಡ್ ಮಲಾನ್ ಶತಕ

ಏಕದಿನ ಕ್ರಿಕೆಟ್: ಇಂಗ್ಲೆಂಡ್ ವಿಶ್ವದಾಖಲೆ

ಆಮ್‌ಸ್ಟೆಲ್ವೀನ್, ನೆದರ್ಲೆಂಡ್ಸ್ (ಎಪಿ): ಇಂಗ್ಲೆಂಡ್ ತಂಡ ಏಕದಿನ ಕ್ರಿಕೆಟ್ ಇತಿಹಾಸದಲ್ಲಿ ಅತಿದೊಡ್ಡ ಮೊತ್ತ ಪೇರಿಸಿ ವಿಶ್ವದಾಖಲೆ ಮಾಡಿದೆ.

ನೆದರ್ಲೆಂಡ್ಸ್ ವಿರುದ್ಧ ಆಮ್‌ಸ್ಟೆಲ್ವೀನ್‌ನಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ಎಯೊನ್ ಮಾರ್ಗನ್ ನೇತೃತ್ವದ ತಂಡ 50 ಓವರ್‌ಗಳಲ್ಲಿ 4 ವಿಕೆಟ್‌ಗೆ 498 ರನ್ ಕಲೆಹಾಕಿತು. ಈ ಮೂಲಕ ತನ್ನದೇ ಹೆಸರಿನಲ್ಲಿದ್ದ ವಿಶ್ವದಾಖಲೆ ಉತ್ತಮಪಡಿಸಿಕೊಂಡಿತು.

2018ರಲ್ಲಿ ಟ್ರೆಂಟ್‌ಬ್ರಿಜ್‌ನಲ್ಲಿ ಆಸ್ಟ್ರೇಲಿಯಾ ವಿರುದ್ಧದ ಪಂದ್ಯದಲ್ಲಿ ಇಂಗ್ಲೆಂಡ್ 6 ವಿಕೆಟ್‌ಗೆ 481 ರನ್ ಪೇರಿಸಿದ್ದು ಇದುವರೆಗಿನ ದಾಖಲೆಯಾಗಿತ್ತು. 500 ರನ್ ಗಳಿಸುವ ಅವಕಾಶವನ್ನು ಇಂಗ್ಲೆಂಡ್ ಅಲ್ಪ ಅಂತರದಲ್ಲಿ ಕಳೆದುಕೊಂಡಿತು.

ಜೋಸ್ ಬಟ್ಲರ್ (ಅಜೇಯ 162, 70 ಎ., 4X7, 6X14), ಫಿಲ್ ಸಾಲ್ಟ್ (122 ರನ್, 93 ಎ, 4X14, 6X3) ಮತ್ತು ಡೇವಿಡ್ ಮಲಾನ್ (125 ರನ್, 109 ಎ, 4X9, 6X3) ಅವರ ಅಬ್ಬರದ ಶತಕ ಹಾಗೂ ಲಿಯಾಮ್ ಲಿವಿಂಗ್‌ಸ್ಟೋನ್ (ಅಜೇಯ 66, 22 ಎ, 4X6, 6X6) ಬಿರುಸಿನ ಆಟ ಇಂಗ್ಲೆಂಡ್ ತಂಡದ ದಾಖಲೆಯ ಮೊತ್ತಕ್ಕೆ ಕಾರಣವಾಯಿತು.

ಏಕದಿನ ಕ್ರಿಕೆಟ್: ಅತ್ಯಧಿಕ ಮೊತ್ತ

ತಂಡ	ಸ್ಕೋರ್	ಓವರ್	ಎದುರಾಳಿ
ಇಂಗ್ಲೆಂಡ್	498/4	50	ನೆದರ್ಲೆಂಡ್ಸ್
ಇಂಗ್ಲೆಂಡ್	481/6	50	ಆಸ್ಟ್ರೇಲಿಯಾ
ಇಂಗ್ಲೆಂಡ್	444/3	50	ಪಾಕಿಸ್ತಾನ
ಶ್ರೀಲಂಕಾ	443/9	50	ನೆದರ್ಲೆಂಡ್ಸ್
ದಕ್ಷಿಣ ಆಫ್ರಿಕಾ	439/2	50	ವೆಸ್ಟ್ ಇಂಡೀಸ್

ಬಟ್ಲರ್ ಅವರು 47 ಎಸೆತಗಳಲ್ಲಿ ಶತಕ ಸಿಡಿಸಿ, ಇಂಗ್ಲೆಂಡ್ ಪರ ಎರಡನೇ ಅತಿವೇಗದ ಶತಕ ಗಳಿಸಿದ ಸಾಧನೆ ಮಾಡಿದರು. ಏಕದಿನ ಕ್ರಿಕೆಟ್‌ನಲ್ಲಿ ಮೊದಲ ಮೂರು ಅತ್ಯಧಿಕ ಮೊತ್ತಗಳು ಕೂಡಾ ಇಂಗ್ಲೆಂಡ್ ತಂಡದ ಹೆಸರಲ್ಲಿರುವುದು ವಿಶೇಷ.

232 ರನ್ ಗೆಲುವು: ಇಂಗ್ಲೆಂಡ್ ತಂಡ ಈ ಪಂದ್ಯವನ್ನು 232 ರನ್‌ಗಳಿಂದ ಗೆದ್ದುಕೊಂಡಿತು. ನೆದರ್ಲೆಂಡ್ಸ್ 49.4 ಓವರ್‌ಗಳಲ್ಲಿ 266 ರನ್‌ಗಳಿಗೆ ಆಲೌಟಾಯಿತು. ಸ್ಕಾಟ್ ಎಡ್ವರ್ಡ್ಸ್ 72 ರನ್ ಗಳಿಸಿದರೆ, ಮೊಯೀನ್ ಅಲಿ 3 ವಿಕೆಟ್ ಪಡೆದರು.

ಜೋಸ್ ಬಟ್ಲರ್

ಫುಟ್‌ಬಾಲ್: ದಕ್ಷಿಣ ಕನ್ನಡಕ್ಕೆ ಗೆಲುವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಕ್ಷಿಣ ಕನ್ನಡ ಜಿಲ್ಲಾ ಫುಟ್‌ಬಾಲ್ ಸಂಸ್ಥೆ ತಂಡ, ಕರ್ನಾಟಕ ರಾಜ್ಯ ಫುಟ್‌ಬಾಲ್ ಸಂಸ್ಥೆ (ಕೆಎಸ್‌ಎಫ್‌ಎ) ಆಶ್ರಯದಲ್ಲಿ ನಡೆಯುತ್ತಿರುವ ಅಂತರ ಜಿಲ್ಲಾ ಫುಟ್‌ಬಾಲ್ ಟೂರ್ನಿಯಲ್ಲಿ ಶುಭಾರಂಭ ಮಾಡಿತು.

ಕೆಎಸ್‌ಎಫ್‌ಎ ಕ್ರೀಡಾಂಗಣದಲ್ಲಿ ಶುಕ್ರವಾರ ನಡೆದ ಪಂದ್ಯದಲ್ಲಿ ದಕ್ಷಿಣ ಕನ್ನಡ 2–0 ಗೋಲುಗಳಿಂದ ಮಂಡ್ಯ ಜಿಲ್ಲಾ ಫುಟ್‌ಬಾಲ್ ಸಂಸ್ಥೆ ತಂಡವನ್ನು ಮಣಿಸಿತು.

ಮೊಹಮ್ಮದ್ ಆಶಿಕ್ (19ನೇ ನಿ.) ಮತ್ತು ವಿಜೀತ್ (51) ಅವರು ಗೋಲು ಗಳಿಸಿ ತಮ್ಮ ತಂಡದ ಗೆಲುವಿಗೆ ಕಾರಣರಾದರು.

ಶನಿವಾರದ ಪಂದ್ಯದಲ್ಲಿ ಮಂಡ್ಯ–ಬೆಳಗಾವಿ ಪೈಪೋಟಿ ನಡೆಸಲಿವೆ. ಒಟ್ಟು ಆರು ತಂಡಗಳು ಅಂತರ ಜಿಲ್ಲಾ ಟೂರ್ನಿಯ ಅಂತಿಮ ಸುತ್ತಿನಲ್ಲಿ ಪಾಲ್ಗೊಂಡಿವೆ.

ಗಾಲ್ಫ್: ರಿಧಿಮಾ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವದೆಹಲಿಯ ರಿಧಿಮಾ ದಿಲಾವರಿ ಅವರು ಶುಕ್ರವಾರ ಇಲ್ಲಿ ಕೊನೆಗೊಂಡ ಹೀರೊ ಮಹಿಳಾ ಪ್ರೊ ಗಾಲ್ಫ್ ಟೂರ್‌ನ ಎಂಟನೇ ಲೆಗ್‌ನ ಟೂರ್ನಿಯಲ್ಲಿ ಚಾಂಪಿಯನ್ ಆದರು. ಈ ಮೂಲಕ ಸುದೀರ್ಘ ಅವಧಿಯ ಪ್ರಶಸ್ತಿ ಬರ ನೀಗಿಸಿಕೊಂಡರು.

ಅಂತಿಮ ಸುತ್ತಿನಲ್ಲಿ 72 ಅವಕಾಶ-ಗಳಲ್ಲಿ ಸ್ಪರ್ಧೆ ಕೊನೆಗೊಳಿಸಿದ ರಿಧಿಮಾ ಒಟ್ಟಾರೆ 215 ಸ್ಕೋರ್‌ಗಳೊಂದಿಗೆ (69–74–72) ಅಗ್ರಸ್ಥಾನ ಪಡೆದರು. 2021ರ ಜನವರಿ ಮತ್ತು ಡಿಸೆಂಬರ್‌ನಲ್ಲಿ ಪ್ರಶಸ್ತಿ ಜಯಿಸಿದ್ದು ಬಿಟ್ಟರೆ, ರಿಧಿಮಾ ಅವರಿಗೆ ಇತರ ಟೂರ್ನಿಗಳಲ್ಲಿ ಅದೃಷ್ಟ ಕೈಕೊಟ್ಟಿತ್ತು.

ಮೂರು ಸುತ್ತುಗಳ ಬಳಿಕ ತಲಾ 219 ಸ್ಕೋರ್‌ಗಳನ್ನು ಮಾಡಿದ ಜಾಹ್ನವಿ ಬಕ್ಷಿ, ಸೆಹೆರ್ ಅತ್ವಾಲ್ ಮತ್ತು ಪ್ರಣವಿ ಅರಸ್ ಅವರು ಜಂಟಿ ಎರಡನೇ ಸ್ಥಾನ ಪಡೆದುಕೊಂಡರು.

ರಿಧಿಮಾ ದಿಲಾವರಿ –ಸಂಗ್ರಹ ಚಿತ್ರ

ಗುರುವಾರ ರಿಧಿಮಾ ಜತೆ ಜಂಟಿ ಮುನ್ನಡೆಯಲ್ಲಿದ್ದ ಮೈಸೂರಿನ ಪ್ರಣವಿ , ಅಂತಿಮ ಸುತ್ತಿನಲ್ಲಿ ನಿಖರ ಪ್ರದರ್ಶನ ನೀಡುವಲ್ಲಿ ವಿಫಲರಾದರು. ಅವರು ಸ್ಪರ್ಧೆ ಕೊನೆಗೊಳಿಸಲು 76 ಅವಕಾ-ಶಗಳನ್ನು ತೆಗೆದುಕೊಂಡರು. ಮೊದಲ ಎರಡು ಸುತ್ತುಗಳಲ್ಲಿ ಕ್ರಮವಾಗಿ 74, 69 ಸ್ಕೋರ್‌ಗಳನ್ನು ಮಾಡಿದ್ದರು.

ಸೆಹೆರ್ ಅತ್ವಾಲ್ (76–71–72) ಮತ್ತು ಜಾಹ್ನವಿ ಬಕ್ಷಿ (73–74–72) ಕೊನೆಯ ದಿನ ಗಮನಾರ್ಹ ಪ್ರದರ್ಶನ ನೀಡಿ ತಮ್ಮ ಸ್ಥಾನ ಉತ್ತಮಪಡಿಸಿಕೊಂ-ಡರು. ಅಫ್ಶಾನ್ ಫಾತಿಮಾ ಮತ್ತು ಸಿದ್ಧಿ ಕಪೂರ್ ಜಂಟಿ ಐದನೇ ಸ್ಥಾನ ಹಾಗೂ ಅಗ್ರಿಮಾ ಮನ್ರಲ್ ಏಳನೇ ಸ್ಥಾನ ಗಳಿಸಿದರು.

ಐಪಿಎಲ್ ಎರಡು ಭಾಗಗಳಲ್ಲಿ ನಡೆಯಲಿ: ನೆಸ್ ವಾಡಿಯಾ

ರಾಜ್‌ಕೋಟ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯನ್ನು ಪ್ರತಿ ವರ್ಷ ಎರಡು ಪ್ರತ್ಯೇಕ ಭಾಗಗಳಲ್ಲಿ ಆಯೋಜಿಸಬೇಕು ಎಂದು ಪಂಜಾಬ್ ಕಿಂಗ್ಸ್ ಫ್ರ್ಯಾಂಚೈಸಿಯ ಸಹಮಾಲೀಕ ನೆಸ್ ವಾಡಿಯಾ ಅಭಿ-ಪ್ರಾಯವ್ಯಕ್ತಪಡಿಸಿದ್ದಾರೆ.

ಮುಂದಿನ ಐದು ವರ್ಷಗಳ ಐಪಿಎಲ್ ಪ್ರಸಾರ ಹಕ್ಕುಗಳು ಈಚೆಗೆ ದಾಖಲೆಯ ₹ 48,390 ಕೋಟಿಗೆ ಹರಾಜಾಗಿವೆ.

ಮುಂಬರುವ ವರ್ಷಗಳಲ್ಲಿ ಪ್ರತಿ ಆವೃತ್ತಿಯಲ್ಲಿ ತಲಾ 94 ಪಂದ್ಯಗಳು ಆಯೋಜನೆಗೊಳ್ಳುವ ಸಾಧ್ಯತೆ ಇದೆ. ಇತ್ತೀಚೆಗಷ್ಟೇ ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಕೂಡ ಈ ಬಗ್ಗೆ ಮಾತನಾಡಿದ್ದರು.

ಈ ಕುರಿತು ಪ್ರತಿಕ್ರಿಯಿಸಿರುವ ವಾಡಿಯಾ, 'ಅಭೂತಪೂರ್ವ ಹರಾಜು ಮೌಲ್ಯ ಲಭಿಸಲು ಶ್ರಮಿಸಿದ ಜಯ್ ಶಾ ಮತ್ತು ಬಳಗಕ್ಕೆ ಅಭಿನಂದನೆಗಳು. ಟೂರ್ನಿಯಲ್ಲಿ ತಂಡಗಳು ತಮ್ಮ ತವರಿ-ನಂಗಳದಲ್ಲಿ ಹೆಚ್ಚು ಪಂದ್ಯಗಳನ್ನು ಆಡುವಂತಾಗಬೇಕು. ಸದ್ಯ ಇರುವ ಪ್ರತಿ ತಾಣದಲ್ಲಿಯೂ ತಲಾ ಏಳು ಪಂದ್ಯಗಳನ್ನು ಕನಿಷ್ಠ 14ಕ್ಕಾದರೂ ಏರಿಸಬೇಕು' ಎಂದಿದ್ದಾರೆ.

ನೆಸ್ ವಾಡಿಯಾ

'ಆವೃತ್ತಿಯೂ ದೀರ್ಘವಾಗಿ ನಡೆ-ಯುವಂತಾಗಬೇಕು. ಆದರೆ, ನಾಲ್ಕು ತಿಂಗಳುಗಳ ಕಾಲ ನಡೆಸುವುದು ಕಷ್ಟವಾದರೆ ಎರಡು ಭಾಗಗಳಲ್ಲಿ ವಿಂಗಡಿಸಬೇಕು. ಒಂದು ಭಾಗವನ್ನು ಭಾರತದಲ್ಲಿ ಇನ್ನೊಂದನ್ನು ವಿದೇಶದಲ್ಲಿ ನಡೆಸಬೇಕು' ಎಂದಿದ್ದಾರೆ.

ಐಸಿಸಿ: ಪ್ರಸಾರ ಹಕ್ಕು ಹರಾಜಿಗೆ ಸಿದ್ಧತೆ

ದುಬೈ (ಪಿಟಿಐ): ಅಂತರರಾಷ್ಟ್ರೀಯ ಕ್ರಿಕೆಟ್ ಕೌನ್ಸಿಲ್ (ಐಸಿಸಿ) ಮುಂದಿನ ಎಂಟು ವರ್ಷಗಳ ಪಂದ್ಯಗಳ ಪ್ರಸಾರ ಹಕ್ಕು ಹರಾಜು ಮಾಡಲು ಸಿದ್ಧತೆ ಆರಂಭಿಸಿದೆ.

2024ರಿಂದ ಎಂಟು ವರ್ಷಗಳ ಅವಧಿಗೆ ಮಾಧ್ಯಮ ಪ್ರಸಾರ ಹಕ್ಕುಗಳನ್ನು ಐಸಿಸಿ ಹರಾಜು ಮಾಡಲಿದೆ. ಈ ಅವಧಿಯಲ್ಲಿ 711 ಪಂದ್ಯಗಳು ನಡೆಯಲಿವೆ.

ಒಟ್ಟು ಮೂರು ಪ್ಯಾಕೇಜ್‌ಗಳಲ್ಲಿ ಪಂದ್ಯಗಳನ್ನು ವಿಂಗಡಣೆ ಮಾಡಲಾಗಿದೆ. 19 ವರ್ಷದೊಳಗಿನ ಮಹಿಳೆಯರ ಟಿ20 ವಿಶ್ವಕಪ್ ಟೂರ್ನಿಯೂ ಇದರಲ್ಲಿ ಸೇರಿದೆ.

ಈಚೆಗಷ್ಟೇ ಐಪಿಎಲ್ ಪ್ರಸಾರ ಹಕ್ಕುಗಳನ್ನು ಬಿಸಿಸಿಐ ₹ 48390 ಕೋಟಿಗೆ ಇ- ಹರಾಜು ಮಾಡಿತ್ತು. ಆದರೆ ಐಸಿಸಿಯು ಸಾಂಪ್ರದಾಯಿಕ ಶೈಲಿಯಲ್ಲಿಯೇ ಬಿಡ್ ನಡೆಸಲಿದೆ.

ಸೀಲ್ಡ್ ಬಿಡ್ ಪ್ರಕ್ರಿಯೆ ನಡೆಸಲಿದೆ. ಎ ಪ್ಯಾಕೇಜ್‌ನಲ್ಲಿ ಟಿವಿ ಪ್ರಸಾರ, ಬಿ ಪ್ಯಾಕೇಜ್‌ನಲ್ಲಿ ಡಿಜಿಟಲ್ ಹಕ್ಕು ಮತ್ತು ಸಿ ಪ್ಯಾಕೇಜ್‌ನಲ್ಲಿ ಪುರುಷರ ಮತ್ತು ಮಹಿಳೆಯರ ಟಿ.ವಿ. ಹಾಗೂ ಡಿಜಿಟಲ್ ಪ್ರಸಾರದ ಸಂಯುಕ್ತವಾದ ಹಕ್ಕುಗಳನ್ನು ಬಿಡ್ ಮಾಡಲಿದೆ ಎಂದು ಪ್ರಕಟಣೆಯ-ಲ್ಲಿ ತಿಳಿಸಲಾಗಿದೆ.

ಟಿಟಿ: ಸತ್ಯನ್‌ಗೆ ಗೆಲುವು

ನವದೆಹಲಿ (ಪಿಟಿಐ): ಭಾರತದ ಸತ್ಯನ್ ಜ್ಞಾನಶೇಖರನ್ ಅವರು ಕ್ರೊವೇಷ್ಯದ ಜಗ್ರೆಬ್‌ನಲ್ಲಿ ನಡೆಯುತ್ತಿರುವ ಡಬ್ಲ್ಯುಟಿಟಿ ಕಂಟೆಂಡರ್ ಟೇಬಲ್ ಟೆನಿಸ್ ಟೂರ್ನಿಯಲ್ಲಿ ವಿಶ್ವದ 6ನೇ ರ್‍ಯಾಂಕ್‌ನ ಆಟಗಾರ ಜಾರ್ಜಿಕ್ ಡಾರ್ಕೊ ಅವರಿಗೆ ಆಘಾತ ನೀಡಿದರು.

ಗುರುವಾರ ನಡೆದ ಹಣಾಹಣಿಯಲ್ಲಿ ಸತ್ಯನ್ 6-11 12-10 11-9 12-10 ರಲ್ಲಿ ಹಾಲಿ ಯುರೋಪಿಯನ್ ಚಾಂಪಿಯನ್ ಕೂಡಾ ಆಗಿರುವ ಸ್ಲೊವೇನಿಯದ ಆಟಗಾರನಿಗೆ ಸೋಲುಣಿಸಿ 16ರ ಘಟ್ಟ ಪ್ರವೇಶಿಸಿದರು.

'ಪುರುಷರ ಸಿಂಗಲ್ಸ್ ವಿಭಾಗದಲ್ಲಿ ವಿಶ್ವದ 6ನೇ ರ್‍ಯಾಂಕ್‌ನ ಆಟಗಾರನ ವಿರುದ್ಧ ಬಲುದೊಡ್ಡ ಗೆಲುವು ಸಾಧಿಸಿದ್ದೇನೆ' ಎಂದು ಸತ್ಯನ್ ಟ್ವೀಟ್ ಮಾಡಿದ್ದಾರೆ.

ವಿಶ್ವ ರ್‍ಯಾಂಕಿಂಗ್‌ನಲ್ಲಿ 10ರೊಳಗಿನ ಸ್ಥಾನದಲ್ಲಿರುವ ಆಟಗಾರರನ್ನು ಮಣಿಸಿದ ಸಾಧನೆಯನ್ನು ಸತ್ಯನ್ ಎರಡನೇ ಬಾರಿ ಮಾಡಿದ್ದಾರೆ. 2019 ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಅವರು ವಿಶ್ವದ 5ನೇ ರ್‍ಯಾಂಕ್‌ನ ಆಟಗಾರ ಜಪಾನ್‌ನ ತೊಮಕಜು ಹರಿಮೊಟೊ ವಿರುದ್ಧ ಗೆಲುವು ಸಾಧಿಸಿದ್ದರು.

ಬರ್ಮಿಂಗ್‌ಹ್ಯಾಂನಲ್ಲಿ ಜುಲೈ 28 ರಂದು ಆರಂಭವಾಗುವ ಕಾಮನ್‌ವೆಲ್ತ್ ಕೂಟದಲ್ಲಿ ಪಾಲ್ಗೊಳ್ಳುವ ಭಾರತ ಟಿಟಿ ತಂಡದಲ್ಲಿ ಸತ್ಯನ್ ಸ್ಥಾನ ಪಡೆದಿದ್ದಾರೆ.

ಸೌರವ್ ಕೊಠಾರಿ

ಬಿಲಿಯರ್ಡ್ಸ್: ಕೊಠಾರಿಗೆ ಪ್ರಶಸ್ತಿ

ಮೆಲ್ಬರ್ನ್ (ಪಿಟಿಐ): ಭಾರತದ ಸೌರವ್ ಕೊಠಾರಿ ಅವರು ಇಲ್ಲಿ ನಡೆದ ಪೆಸಿಫಿಕ್ ಇಂಟರ್‌ನ್ಯಾಷನಲ್ ಬಿಲಿಯರ್ಡ್ಸ್ ಚಾಂ-ಪಿಯನ್‌ಷಿಪ್‌ನಲ್ಲಿ ಪ್ರಶಸ್ತಿ ಜಯಿಸಿದರು. ಇದೇ ಟೂರ್ನಿಯ ಸ್ನೂಕರ್‌ನಲ್ಲೂ ಗೆಲುವು ಪಡೆದಿದ್ದ ಅವರು ಪ್ರಶಸ್ತಿ 'ಡಬಲ್' ಸಾಧನೆ ಮಾಡಿದರು.

ಶುಕ್ರವಾರ ನಡೆದ ಫೈನಲ್‌ನಲ್ಲಿ ಕೊಠಾರಿ, 1500-1321 ರಲ್ಲಿ ಇಂಗ್ಲೆಂಡ್‌ನ ರಾಬ್ ಹಾಲ್ ಅವರನ್ನು ಮಣಿಸಿದರು. ಈ ಟೂರ್ನಿಯಲ್ಲಿ 'ಡಬಲ್' ಸಾಧನೆ ಮಾಡಿದ ಎರಡನೇ ಸ್ಪರ್ಧಿ ಎಂಬ ಗೌರವ ಅವರಿಗೆ ಒಲಿಯಿತು. ಆಸ್ಟ್ರೇಲಿಯದ ಮ್ಯಾಥ್ಯೂ ಬೋಲ್ಟನ್ ಮಾತ್ರ ಈ ಸಾಧನೆ ಮಾಡಿದ್ದರು.

ಕೊಠಾರಿ ಅವರು ಸೆಮಿಫೈನಲ್‌ನ-ಲ್ಲಿ 1200–1131 ರಲ್ಲಿ ಭಾರತದ ಧ್ರುವ್ ಸಿತ್ವಾಲ ವಿರುದ್ಧ ಗೆಲುವು ಪಡೆದಿದ್ದರೆ, ಹಾಲ್ 1204–122 ರಲ್ಲಿ ವಿಶ್ವ ಬಿಲಿಯರ್ಡ್ಸ್ ಚಾಂಪಿಯನ್ ಸಿಂಗಪುರದ ಪೀಟರ್ ಗಿಲ್‌ಕ್ರಿಸ್ಟ್ ಅವರನ್ನು ಮಣಿಸಿದ್ದರು.